

ಸಾಹಿತ್ಯ ದಾಸೋಹ ೧೯೧

(೧೨ ಜೂನ್ ೨೦೨೧ ರಂದು ಪ್ರಸ್ತುತಪಡಿಸಿದ ಬರಹಗಳ ಸಂಕಲನ)







ಕಲ್ಲಿನಲ್ಲಿ ಕಲೆ ಅರಳಿಸಿದ ಕನಕಾ ಮೂರ್ತಿ



ಢಂಢರ ಢಂಢರ....ಢಂಢರ ಢಂಢರ....!



ಸಮನ್ವಯ ಸಮಿತಿ * ನೋಡಿಯೋ ಸಾಹಿತ್ಯ ವೇದಿಕೆ * ಕನ್ನಡವೇ ಸತ್ಯ

ಪುಟ ತೆರೆಯುವ ಮುನ್ನ ....

ಪ್ರಿಯರೆ,

ದಿನಾಂಕ ೧೨ನೆಯ ಜೂನ್ ೨೦೨೧ ರಂದು ಅಂತರ್ಜಾಲದ ಮೂಲಕ ನಡೆದ 'ಸಾಹಿತ್ಯ ದಾಸೋಹ – ೧೯೧' ರಲ್ಲಿ ಪ್ರಸ್ತುತಪಡಿಸಿದ ವಿವಿಧ ಬರಹಗಳ ಸಂಕಲನವನ್ನು ತಮ್ಮ ಮುಂದಿಡಲು ನಮಗೆ ತುಂಬಾ ಸಂತೋಷವಾಗುತ್ತಿದೆ.

'ಸಾಹಿತ್ಯ ದಾಸೋಹ'ದ ಪರಿಕಲ್ಪನೆ ಮೊದಲು ಮೂಡಿಬಂದದ್ದು ಸುಮಾರು ಇಪ್ಪತ್ತೆರಡು ವರ್ಷಗಳ ಹಿಂದೆ. ಮೊದಲ ದಾಸೋಹ ನಡೆದದ್ದು ೧೫ನೇ ಆಗಸ್ಟ್ ೧೯೯೯ ರಂದು. ಅಲ್ಲಿಂದೀಚೆಗೆ ಯಾವುದೇ ಅಡೆತಡೆಯಿಲ್ಲದೆ ವಿವಿಧೆಡೆಗಳಲ್ಲಿ ನಿರಂತರವಾಗಿ ನಡೆದುಕೊಂಡು ಬಂದ ಸಾಹಿತ್ಯ ದಾಸೋಹದ ೧೭೪ನೆಯ ಅವತರಣಿಕೆಯ ನಂತರ ನಮಗೊಂದು ಬಹುದೊಡ್ಡ ಸವಾಲು ಎದುರಾಗಿತ್ತು. ದೇಶಾದ್ಯಂತ ಕೊರೋನಾ ಪಿಡುಗು ವಿಧಿಸಿದ ದಿಗ್ಬಂಧನಗಳ ಪರಿಣಾಮವಾಗಿ ದಾಸೋಹದ ಕಾರ್ಯಕ್ರಮಗಳಿಗೆ ಅಲ್ಪವಿರಾಮ ಅಥವಾ ಪೂರ್ಣವಿರಾಮ ಬೀಳುವುದು ಅನಿವಾರ್ಯವಾದೀತೇನೋ ಎಂಬ ಚಿಂತೆ ನಮ್ಮ ವೇದಿಕೆಯ ಎಲ್ಲಾ ಸಾಹಿತ್ಯಾಸಕ್ತರಿಗೂ ಕಾಡಲು ಆರಂಭಿಸಿತು. ಏಕೆಂದರೆ ನಮ್ಮ ಈ 'ಸಾಹಿತ್ಯ ದಾಸೋಹ ವೇದಿಕೆ'ಯ ಮೂಲಕ ತಮ್ಮಲ್ಲಿ ಸುಪ್ತವಾಗಿದ್ದ ಸಾಹಿತ್ಯಕ ಪ್ರತಿಭೆಗಳನ್ನು ಬೆಳಕಿಗೆ ತರುತ್ತಲೇ ನಿರಂತರ ಬರಹಗಾರರಾಗಿ ರೂಪುಗೊಂಡು, ಸಾಹಿತ್ಯಕ ಮನ್ನಣೆ ಗಳಿಸಿದವರು ಬಹಳ ಮಂದಿ.

ಮುಂದೇನು? ಎಂಬ ಚಿಂತೆಯ ನಡುವೆಯೇ ನಮ್ಮ ನೆರವಿಗೆ ಬಂದದ್ದು ಅಂತರ್ಜಾಲದ 'ಝೂಮ್' ಹಾಗೂ 'ಗೂಗಲ್ ಮೀಟ್' ಗಳು. ಮೊದಲ ಬಾರಿಗೆ ೨೦೨೦ರ ಜೂನ್ ತಿಂಗಳಿನ 'ಸಾಹಿತ್ಯ ದಾಸೋಹ' ಕಾರ್ಯಕ್ರಮವು ಅಂತರ್ಜಾಲದ ಮೂಲಕ ನಡೆಯಿತು. ಅಲ್ಲಿಂದೀಚೆಗೆ ಸಮನ್ವಯ ಸಮಿತಿ, ಸಾಹಿತ್ಯ ದಾಸೋಹ, ಕನ್ನಡವೇ ಸತ್ಯದ ಚಟುವಟಿಕೆಗಳು ನಿರೀಕ್ಷೆಗೂ ಮೀರಿ ಗರಿಗೆದರಿದವು. ಅಂತರ್ಜಾಲ ಕಾರ್ಯಕ್ರಮಗಳಿಗೇ ಮೀಸಲಾದ 'ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ' ಅಸ್ತಿತ್ವಕ್ಕೆ ಬಂತು. ಈ ವೇದಿಕೆ ಕೇವಲ ಮಾಸಿಕ ಸಾಹಿತ್ಯ ದಾಸೋಹಕ್ಕಷ್ಟೇ ಸೀಮಿತವಾಗದೆ ಹಲವು ಹೊಸ ಬಗೆಯ ಸಾಹಿತ್ಯಕ ಚಟುವಟಿಕೆಗಳಿಗೆ ತೆರೆದು ಅರಳಿತು. ಉದಯೋನ್ಮುಖ ಲೇಖಕಗರಿಗಷ್ಟೇ ಸೀಮಿತವಾಗಿದ್ದ ನಮ್ಮ ವೇದಿಕೆ ಹಲವು ಸುಪ್ರಸಿದ್ಧ ಬರಹಗಾರರನ್ನೂ ಒಳಗೊಂಡು ಸಮೃದ್ಧವಾಗಿ ಬೆಳೆಯಲು ಪ್ರಾರಂಭಿಸಿತು. ಇದರ ಪರಿಣಾಮವಾಗಿ ಮಾಸಿಕ ಸಾಹಿತ್ಯ ದಾಸೋಹದಲ್ಲಿ ಪ್ರಸ್ತುತಿಗಳ ಸಂಖ್ಯೆಯೂ ಅಧಿಕವಾಗುತ್ತಾ ಬಂತು.

೧೨ನೇ ಜೂನ್ ೨೦೨೧ರಂದು ನಡೆದ ೧೯೧ನೇ ಸಾಹಿತ್ಯ ದಾಸೋಹದಲ್ಲಿ ೩೩ ಬರಹಗಾರರು ತಮ್ಮ ಸ್ವರಚಿತ ಸಣ್ಣಕತೆ, ನಗೆಬರಹ, ಕವನಗಳು, ಹನಿಗವನಗಳು ಮುಂತಾದ ೮೦ಕ್ಕೂ ಹೆಚ್ಚು ಪ್ರಸ್ತುತಿಗಳನ್ನು ಮಂಡಿಸಿದರು. ದಾಸೋಹದ ಇತಿಹಾಸದಲ್ಲೇ ಇದು ಅತಿ ಹೆಚ್ಚು ಪ್ರಸ್ತುತಿಗಳು ಮಂಡನೆಯಾದ, ಸುಮಾರು ನಾಲ್ಕು ಗಂಟೆ ಹದಿನೈದು ನಿಮಿಷಗಳ ಕಾಲ ನಡೆದ, ಸುದೀರ್ಘ ಕಾರ್ಯಕ್ರಮ. ಅವೆಲ್ಲವುಗಳನ್ನೂ ಒಳಗೊಂಡ ಸಂಕಲನವನ್ನು ಪಿಡಿಎಫ್ ರೂಪದಲ್ಲಿ ಪ್ರಕಟಿಸುತ್ತಿದ್ದೇವೆ. ಈ ಬಾರಿ ಪಿಡಿಎಫ್ ರೂಪದ ಸಂಕಲನವನ್ನು ಸಿದ್ಧಪಡಿಸಿದವರು ಶ್ರೀ ಎಸ್. ಶೃಂಗೇಶ್ವರ ಶರ್ಮ ಅವರು. ಮೇ ೨೦೨೦ರಿಂದ ಮೇ ೨೦೨೧ರವರೆಗಿನ ದಾಸೋಹಗಳ ಪ್ರಸ್ತುತಿಗಳನ್ನು ಪಿಡಿಎಫ್ ರೂಪದಲ್ಲಿ ಪ್ರತಿ ತಿಂಗಳೂ ಪ್ರಕಟಿಸಿದ ಶ್ರೀ ಎಚ್.ಎಲ್. ಗುರುಪ್ರಸಾದ್ ಅವರಿಗೆ ವೇದಿಕೆಯ ಪರವಾಗಿ ವಂದನೆಗಳು.

ಇತ್ತೀಚೆಗೆ ನಿಧನರಾದ ವೇದಿಕೆಯ ಹಿರಿಯ ಸದಸ್ಯ, ಬಹುಮುಖ ಪ್ರತಿಭೆಯ ಶ್ರೀ ಎಸ್. ಸೀತಾರಾಮು ಅವರ ಬರಹಗಳ ಅವಲೋಕನ ಕಾರ್ಯಕ್ರಮ ೨೦ನೇ ಜೂನ್ ೨೦೨೧ರಂದು ನಮ್ಮ ಈ ಅಂತರ್ಜಾಲ ವೇದಿಕೆಯಲ್ಲಿ ನಡೆಯಿತು. ಈ ಕುರಿತ ವರದಿಯೂ ಇದರಲ್ಲಿದೆ.

೧೯೧ನೇ ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸಿದ ಶ್ರೀಮತಿ ಶಾಂತಾ ನಾಗಮಂಗಲ ಮತ್ತು ದಾಸೋಹದಲ್ಲಿ ಪಾಲ್ಗೊಂಡ ಎಲ್ಲಾ ಬರಹಗಾರರು, ವೀಕ್ಷಕರು ಮತ್ತು ಕಾರ್ಯಕ್ರಮ ಸಂಘಟಕರೆಲ್ಲರಿಗೂ ನಮ್ಮ ಕೃತಜ್ಞತೆಗಳು.

ಪ್ರತಿ ತಿಂಗಳ ಸಾಹಿತ್ಯ ದಾಸೋಹದಲ್ಲಿ ಹೆಚ್ಚು ಹೆಚ್ಚು ಪ್ರಸ್ತುತಿಗಳಿಗೆ ಅವಕಾಶ ನೀಡಬೇಕೆಂಬುದೇ ನಮ್ಮ ಅಭಿಲಾಷೆ. ಹೀಗಾಗಿ, ಓರ್ವ ಪ್ರಸ್ತುತಿಕಾರನಿಗೆ ಆರು ನಿಮಿಷಗಳ ಗರಿಷ್ಠ ಅವಧಿ ಎಂಬುದನ್ನು ಹೊರತುಪಡಿಸಿದರೆ, ಒಟ್ಟಾರೆ ಬರಹಗಳ ಸಂಖ್ಯೆಗೆ ಸಂಬಂಧಿಸಿದಂತೆ ಯಾವುದೇ ಇತಿಮಿತಿಯನ್ನೂ ವಿಧಿಸುವ ಅಪೇಕ್ಷೆ ನಮಗಿಲ್ಲ. ಏನಾದರೂ ಬದಲಾವಣೆ ಅಗತ್ಯವೆನಿಸಿದರೆ ಸದಸ್ಯರಿಗೆ ಮುಂಚಿತವಾಗಿಯೇ ತಿಳಿಸಲಾಗುವುದು. ಸದ್ಯದ ಮಟ್ಟಿಗೆ ಯಾರಿಗೂ ಹಿಂಜರಿಕೆ ಬೇಕಿಲ್ಲ. ಹೆಚ್ಚಿನ ಸಂಖ್ಯೆಯ ಲೇಖಕರು ದಾಸೋಹದಲ್ಲಿ ಭಾಗವಹಿಸಿ ತಮ್ಮ ಪ್ರಸ್ತುತಿಗಳನ್ನು ಮಂಡಿಸಬೇಕೆಂಬುದೇ ನಮ್ಮ ಅಪೇಕ್ಷೆ.

–ಸಂಚಾಲಕ ಸಮಿತಿ

ದಾಸೋಹದ ಪುಟಗಳಲ್ಲಿ.....

ಸಾಹಿತ್ಯ ದಾಸೋಹ ೧೯೧ – ಕಾರ್ಯಕ್ರಮ ವರದಿ

\- **ಹು.ವಾ.ಶ್ರೀಪ್ರಕಾಶ್**

ದಿನಾಂಕ ೧೨.೦೬.೨೦೨೧ ರಂದು ಶನಿವಾರ ಸಂಜೆ ನಾಲ್ಕು ಗಂಟೆಗೆ ಕಾರ್ಯಕ್ರಮ ಆರಂಭವಾಯಿತು. ದಾಸೋಹ ಸಂಚಾಲಕರಾದ ಶ್ರೀ ಕೆ.ಎನ್ ಮಹಾಬಲರವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು

ಶ್ರೀಮತಿ ಲಕ್ಷ್ಮಿ ವಿಠಲ್ ರವರು ಎಲ್ಲರಿಗೂ ಹಾರ್ದಿಕ ಸ್ವಾಗತ ಬಯಸಿ, ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಶಾಂತಾ ನಾಗಮಂಗಲ ಅವರನ್ನು ಪರಿಚಯಿಸಿದರು. ಶ್ರೀಮತಿ ಶಾಂತಾರವರು ಬಹುಶ್ರುತ ವಿದ್ವಾಂಸರು, ಬಿಎಸ್ಸಿ ನಂತರ ಕನ್ನಡ, ಹಿಂದಿ, ಸಂಸ್ಕೃತ ಮೂರು ಭಾಷೆಗಳಲ್ಲಿಯೂ ಎಂಎ ಪದವಿ, ಹಿಂದಿಯಲ್ಲಿ ಎಂ.ಫಿಲ್, ಜೊತೆಗೆ ಕರ್ನಾಟಕ ಸಂಗೀತದ ಅಭಿರುಚಿ ಇವರಿಗಿದ್ದು, ಇವರ ಕತೆ, ಕವನಗಳು ಹಲವು ಮಾಸಪತ್ರಿಕೆಗಳಲ್ಲಿ ಪ್ರಕಟವಾಗಿವೆ. 'ಕೀರ್ತನ ಕಲೆ ಗಮಕಕಲೆ ಒಂದು ತೌಲನಿಕ ಅಧ್ಯಯನ' ಎಂಬ ಫೆಲೋಷಿಪ್ ಪ್ರಬಂಧವು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಿಂದ ಪ್ರಕಟಗೊಂಡಿದೆ. ಇವರು ಕುಂದಾಪುರ ಭಂಡಾರ್ಕರ್ಸ್ ಕಾಲೇಜಿನ ಪ್ರತಿಷ್ಠಿತ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಇವರ ಪಾಂಡಿತ್ಯಪೂರ್ಣ ಗಮಕ ವ್ಯಾಖ್ಯಾನದ ಪರಿಧಿ ಬಹಳ ವಿಸ್ತಾರವಾದುದು ಎಂದು ಹೇಳಿ ಶ್ರೀಮತಿ ಶಾಂತಾ ನಾಗಮಂಗಲ ಅವರನ್ನು ಸ್ವಾಗತಿಸಿದರು.

ಎಲ್ಲ ವೇದಿಕೆಯ ಸದಸ್ಯರು ಮತ್ತು ಅವರ ಕುಟುಂಬ ಹಾಗೂ ಸ್ನೇಹ ಬಳಗವನ್ನೂ ಸ್ವಾಗತಿಸಿದ ಶ್ರೀಮತಿ ಲಕ್ಷ್ಮಿ ವಿಠಲ್ ಅವರು ಕಾರ್ಯಕ್ರಮದ ಕೊನೆಯವರೆಗೂ ಎಲ್ಲರೂ ಇದ್ದು ನೋಡಿ ಪ್ರತಿಕ್ರಿಯೆ ನೀಡಬೇಕೆಂದು ವಿನಂತಿಸಿದರು.

ವೇದಿಕೆಯ ಪ್ರಧಾನ ಸಂಚಾಲಕರಾದ ಶ್ರೀ ಬೆಂ.ಶ್ರೀ.ರವೀಂದ್ರರವರು ಮಾತನಾಡಿ, ನಿನ್ನೆ ನಮ್ಮನ್ನು ಅಗಲಿದ ಖ್ಯಾತ ಕವಿ, ,ಸಾಹಿತಿ ಶ್ರೀ ಸಿದ್ದಲಿಂಗಯ್ಯನವರಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಈ ಬಾರಿ ದಾಸೋಹದಲ್ಲಿ ಪ್ರಸ್ತುತಪಡಿಸುವ ಲೇಖನಗಳನ್ನು ಮೊದಲೇ ಅಧ್ಯಕ್ಷರಿಗೆ ಕಳಿಸಲು ಕೋರಿದ್ದು, ಅದಕ್ಕೆ ಸದಸ್ಯರು ಸ್ಪಂದಿಸಿರುವುದನ್ನು ಶ್ಲಾಘಿಸಿದ ಅವರು ಹೆಚ್ಚು ಜನ ದಾಸೋಹದಲ್ಲಿ ಭಾಗವಹಿಸುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದರಲ್ಲದೆ ನಮ್ಮ ಮುಂದಿನ ಕಾರ್ಯಕ್ರಮದಲ್ಲಿ ದಿ.ಸೀತಾರಾಮು ಅವರ ಪುಸ್ತಕಗಳ ಅವಲೋಕನವಾಗಲಿದ್ದು, ಕುವೆಂಪುರವರ ಗೀತ ಗಾಯನ ಕಾರ್ಯಕ್ರಮ ಮತ್ತು ಎಚ್ಚೆಸ್ಕೆಯವರ ಇತರ ಬರಹಗಳ ಬಗ್ಗೆ ಜುಲೈನಲ್ಲಿ 'ಎಚ್ಚೆಸ್ಕೆ ಬೆಳಕು' ಕಾರ್ಯಕ್ರಮ ಆಯೋಜಿಸುವ ಯೋಚನೆ ಇದೆ ಎಂದೂ ಹೇಳಿದರು.

ಸಾಹಿತ್ಯ ದಾಸೋಹ ೧೯೦ ರ ಪಿಡಿಎಫ್ ಸಂಚಿಕೆಯನ್ನು ಶ್ರೀ ಎಚ್ ಎಲ್ ಗುರುಪ್ರಸಾದ್ ರವರು ತಯಾರಿಸಿದ್ದು ಇದರಲ್ಲಿ ಶ್ರೀ ವಿಠಲ್ ಇಜೇರಿಯವರು 'ಹೂವಿನ ಸರ' ಎಂಬ ಲೇಖನದಲ್ಲಿ 'ಸರಸಮ್ಮನ ಸತ್ಕಾರ ಸರಪಳಿಗೆ ನಮಸ್ಕಾರ' ಕೃತಿಯ ಬಗ್ಗೆ, ಅದರಲ್ಲಿನ ಪ್ರತಿ ಕವನದ ಬಗ್ಗೆಯೂ ಪ್ರತಿಕ್ರಿಯೆ ನೀಡಿದ್ದಾರೆ. ಅಲ್ಲದೆ ಕಳೆದ ಒಂದು ತಿಂಗಳ ಅವಧಿಯಲ್ಲಿ ನಡೆದ ಎಲ್ಲ ಕಾರ್ಯಕ್ರಮಗಳ ವರದಿಯೊಂದಿಗೆ ಸುಪುಷ್ಟವಾಗಿ ಸಂಚಿಕೆ ಮೂಡಿಬಂದಿದ್ದು ಎಲ್ಲರೂ ಓದಬೇಕಾಗಿ ಕೋರುವೆ ಎಂದರು.

ನಂತರ ವೇದಿಕೆಯ 32 ಸದಸ್ಯರು ತಮ್ಮ ವಿವಿಧ ಪ್ರಸ್ತುತಿಗಳನ್ನು ಮಂಡಿಸಿದರು.

ದಾಸೋಹದ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಶಾಂತಾ ನಾಗಮಂಗಲರವರು ತಮಗೆ ಈ ಜವಾಬ್ದಾರಿ ನೀಡಿದ ವೇದಿಕೆಯ ಸಂಚಾಲಕರಿಗೆ ವಂದಿಸಿ ಮಾತು ಆರಂಭಿಸಿದರು. ಹಿರಿಕಿರಿಯ ಲೇಖಕರೆಂಬ ತಾರತಮ್ಯವಿರದ ಮುಕ್ತ ವೇದಿಕೆ (ಸಸಕಸ) ಇದಾಗಿದ್ದು ಅಕ್ಷರ ಬಲ್ಲವರಿಗೆ ಬರೆಯಲು ಪ್ರೋತ್ಸಾಹ ನೀಡುತ್ತಿದ್ದಾರೆ. ಈ ವೇದಿಕೆ ಹೀಗೆಯೇ ಮುಂದುವರೆದು ಹಲವು ವಿಕ್ರಮ ಸಾಧಿಸಲಿ ಎಂದು ಹಾರೈಸಿದರು.

ಇದು ಬರಹಗಾರರೇ ಇರುವ ವೇದಿಕೆ. ಇಂದಿನ ಎಲ್ಲ ಬರಹಗಳೂ ಹೊಸಗನ್ನಡ ಸಾಹಿತ್ಯಕ್ಕೆ ಸೇರುತ್ತವೆ. .ಬಿಎಂಶ್ರೀ ಯವರ ಇಂಗ್ಲೀಷ್ ಗೀತೆಯೊಂದಿಗೆ ಹೊಸಗನ್ನಡ ಸಾಹಿತ್ಯ ಆರಂಭವಾಗಿದ್ದು, ಸಾಹಿತ್ಯ ಮನುಷ್ಯನ ಚಿತ್ತವೃತ್ತಿಯನ್ನು ಕಲಾತ್ಮಕವಾಗಿ ದಾಖಲಿಸುತ್ತದೆ. ಪ್ರವೃತ್ತಿಗಳು ಯುಗಧರ್ಮಕ್ಕನುಗುಣವಾಗಿ ಬದಲಾಗುತ್ತವೆ. ಹಳಗನ್ನಡವು ರಾಜಾಶ್ರಯ ಪ್ರಧಾನವಾಗಿತ್ತು. ಆಗಿನದು ವಸ್ತುನಿಷ್ಟವಾದ ಕಾವ್ಯ. ಬಹುತೇಕ ಚಂಪೂ ಕಾವ್ಯಗಳ ಪ್ರಕಾರ, ವೀರಯುಗ, ಛಂದೋರಹಿತ ಕಾವ್ಯಕ್ಕೆ ಮನ್ನಣೆ ಇರಲಿಲ್ಲ. ನಡುಗನ್ನಡದಲ್ಲಿ ರಾಜಾಶ್ರಯ ತಪ್ಪಿತು. ಚಂಪೂ ಶೈಲಿ ಬಿಟ್ಟಿತು. ದೇಶೀಯ ಛಂದಸ್ಸು ಮತ್ತಿತರ ಬದಲಾವಣೆಯನ್ನೂ ಕಂಡಿತು. ಹೊಸಗನ್ನಡವು ಯಾವ ಛಂದಸ್ಸು ಆದಿಪ್ರಾಸಗಳ ಅನಿವಾರ್ಯತೆಯನ್ನೂ ಇಟ್ಟುಕೊಳ್ಳಲಿಲ್ಲ. ಈ ಕಾಲಘಟ್ಟದಲ್ಲಿ ಮನುಷ್ಯ ಕೇಂದ್ರಿತ ಜೀವನಪ್ರೀತಿ ಸಂಬಂಧಗಳಿಗೆ ಒತ್ತು, ಸಮಾಜ ಸುಧಾರಣೆಯ ನಿಲುವು ಇತ್ಯಾದಿ ಕಾಣುತ್ತೇವೆ. ಹೀಗೆ ಬೇರ್ಪಡಿಸುವ ಲಕ್ಷಣಗಳು ತೀರಾ ತೆಳುವಾಗಿವೆ. ಹೃದಯ, ಬುದ್ಧಿ, ಮನಸ್ಸು ಸ್ಪಂದಿಸುವ ರೀತಿ ಅಂತರಂಗದ ತುಡಿತಕ್ಕೆ ತಕ್ಕಂತೆ ಕಾದಂಬರಿ, ಕತೆ, ನಾಟಕ, ನಗೆಬರಹ, ಕವನ, ಹನಿಗವನ ಸಾನೆಟ್, ಪ್ರಗಾಥ.. ಹೀಗೆ ಅನೇಕ ಸಾಹಿತ್ಯ ಪ್ರಕಾರಗಳು ತೆರೆದುಕೊಂಡವು. ಇಷ್ಟೊಂದು ಪ್ರಕಾರಗಳನ್ನು ಹಳೆಗನ್ನಡ ನಡುಗನ್ನಡದಲ್ಲಿ ಕಾಣಲಾರೆವು ಎಂದು ಶ್ರೀಮತಿ ಶಾಂತಾ ನಾಗಮಂಗಲ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ನಂತರ ಇಂದಿನ ದಾಸೋಹದ ಎಲ್ಲ ಮೂವತ್ತೆರಡು ಪ್ರಸ್ತುತಿಗಳನ್ನೂ ವಿಶ್ಲೇಷಿಸಿದ ಅವರು ಈ ಬಾರಿ ಮೊದಲೇ ಅಧ್ಯಕ್ಷರಿಗೆ ಲೇಖನ ಕಳಿಸುವ ವ್ಯವಸ್ಥೆ ಮಾಡಿದ ಕಾರಣ ತನಗೆ ಎಲ್ಲವನ್ನೂ ನಿಧಾನವಾಗಿ ಓದಲು ಸಾಧ್ಯವಾಯಿತು ಎಂದು ಹೇಳಿದರು. ಅವರು ವ್ಯಕ್ತಪಡಿಸಿದ ಕೆಲವು ಅಭಿಪ್ರಾಯಗಳು ಹೀಗಿವೆ:

- ಕವನಗಳೆಲ್ಲ ಪದ್ಯಗಳಲ್ಲ. ಪದ್ಯಗಳಿಗೆ ನಾಲ್ಕು ಸಾಲು ಪ್ರಾಸ ಛಂದೋಬಂಧ ಇರಲೇಬೇಕು. ನಾವು ಬರೆಯುವುದೆಲ್ಲ ಕವನದ ವರ್ಗಕ್ಕೆ ಸೇರುತ್ತದೆ. ಇಲ್ಲಿ ಭಾವವೇ ಮುಖ್ಯ.
- ವಿಸೀಯವರ ಪಂಪಾಯಾತ್ರೆಯಿಂದ ಕನ್ನಡದಲ್ಲಿ ಪ್ರವಾಸ ಸಾಹಿತ್ಯ ಆರಂಭವಾಯಿತು.
- ಸಣ್ಣ ಕತೆ ಪರ್ವ ೧೯೦೦ರಲ್ಲಿ ಪಂಜೆ ಮಂಗೇಶರಾಯರ ಎರಡು ಸಣ್ಣಕತೆಗಳಿಂದ ಆರಂಭವಾಯಿತಂತೆ. ಆದರೆ ಮಾಸ್ತಿಯವರನ್ನು ಸಣ್ಣಕತೆಗಳ ಜನಕ ಎನ್ನುತ್ತಾರೆ.
- ಬರಹಗಾರನು ಕಂಡ ಸಮಾಜ, ವ್ಯಕ್ತಿಗಳ ಬಗ್ಗೆ ಹರಳುಗಟ್ಟಿದ ಅನುಭವ ವಿಚಾರಗಳು ಸಣ್ಣ ಕತೆಯಲ್ಲಿ ಮೂಡುತ್ತವೆ.
- ಹಾಸ್ಯ ಲೇಖನಗಳಲ್ಲಿ ಹಾಸ ಎನ್ನು ವುದು ಸ್ಥಾಯೀ ಭಾವ.
- ದೇವರು ಕೂಡ ಭಾವಗ್ರಾಹಿ. ಭಾವವನ್ನೇ ಹಿಡಿದು ಲೇಖನ ಬರೆಯುವುದು ಸಹಜ.

ದಾಸೋಹದಲ್ಲಿ ಪ್ರಸ್ತುತವಾದ ವಿವಿಧ ಕವನ, ಪ್ರವಾಸ ಸಾಹಿತ್ಯ, ಸಣ್ಣಕತೆ, ನಗೆಲೇಖನ, ಪ್ರಬಂಧಗಳ ಬಗ್ಗೆ ಅಧ್ಯಕ್ಷರು ತಮ್ಮ ಅಭಿಪ್ರಾಯ ಮತ್ತು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಕೊನೆಯಲ್ಲಿ ವಂದನಾರ್ಪಣೆ ಮಾಡಿದ ಶ್ರೀಮತಿ ಮಂಗಳಾ ನಾಡಿಗ್ ರವರು, ಎಲ್ಲ ಪ್ರಸ್ತುತಿಗಳನ್ನೂ ಸಹನೆಯಿಂದ ವಿಶ್ಲೇಷಿಸಿದ ಕಾರ್ಯಕ್ರಮದ ಅಧ್ಯಕ್ಷರಾದ ಶ್ರೀಮತಿ ಶಾಂತಾ ನಾಗಮಂಗಲ, ಸ್ವಾಗತಿಸಿದ ಶ್ರೀಮತಿ ಲಕ್ಷ್ಮಿ ವಿಠಲ್, ಪ್ರಾಸ್ತಾವಿಕ ನುಡಿಗಳನ್ನಾಡಿದ ಶ್ರೀ ಬೆಂ.ಶ್ರೀ. ರವೀಂದ್ರ, ಜೀಮೀಟ್ ಗೆ ಎಲ್ಲರನ್ನೂ ಬರಮಾಡಿಕೊಂಡ ಶ್ರೀಮತಿ ರೇಣುಕಾ ದೇಸಾಯಿ, ತಾಂತ್ರಿಕ ನಿರ್ವಹಣೆ ಮಾಡಿದ ಶ್ರೀಯುತ ರವೀಂದ್ರ ಬಾಳಿಹಳ್ಳಿ, ಎಚ್.ಎಲ್.ಗುರುಪ್ರಸಾದ್, ಗುರುರಾಜ ಶಾಸ್ತ್ರಿ ಹಾಗೂ ಪಿ.ಡಿ.ಎಫ್ ರೂಪದಲ್ಲಿ ದಾಸೋಹ ಸಂಚಿಕೆ ತರಲಿರುವ ಶ್ರೀ ಶೃಂಗೇಶ್ವರ ಶರ್ಮ, ವರದಿ ನೀಡಲಿರುವ ಶ್ರೀ ಹು.ವಾ.ಶ್ರೀಪ್ರಕಾಶ್, ಮತ್ತು ಇಂದು ಲೇಖನ ಪ್ರಸ್ತುತಿಪಡಿಸಿದ ಮತ್ತು ವೀಕ್ಷಿಸಿದ ವೇದಿಕೆಯ ಎಲ್ಲ ಸದಸ್ಯರಿಗೂ ವಂದನೆ ಸಲ್ಲಿಸಿದರು. ಕಾರ್ಯಕ್ರಮ ನಾಲ್ಕು ಗಂಟೆಗಳ ಕಾಲ ನಡೆಯಿತು.

ಶ್ರೀ ಎಸ್ ಸೀತಾರಾಮು ಅವರ ಬರಹಗಳ ಅವಲೋಕನ : ಕಾರ್ಯಕ್ರಮ ವರದಿ

- ಹು.ವಾ.ಶ್ರೀಪ್ರಕಾಶ್

೨೦-೦೬-೨೦೨೧ರಂದು ಭಾನುವಾರ ಸಂಜೆ ೦೫.೦೦ ಗಂಟೆಗೆ ಸರಿಯಾಗಿ ಕಾರ್ಯಕ್ರಮ ಆರಂಭವಾಯಿತು.

ವೇದಿಕೆಯ ಪ್ರಧಾನ ಸಂಚಾಲಕರಾದ ಶ್ರೀ ಬೆಂ ಶ್ರೀ ರವೀಂದ್ರರವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ, "ಇದು ವೇದಿಕೆಯ ೪೪ನೇ ಕಾರ್ಯಕ್ರಮವಾಗಿದ್ದು, ಇದೇ ಮೊದಲಬಾರಿಗೆ ವೇದಿಕೆಯ ಸದಸ್ಯರೊಬ್ಬರ ಕೃತಿಗಳ ಒಟ್ಟು ಅವಲೋಕನವನ್ನು ಮಾಡುತ್ತಿದ್ದೇವೆ. ಶ್ರೀ ಸೀತಾರಾಮುರವರು ಕೇವಲ ವ್ಯಕ್ತಿಯಲ್ಲ, ಮಹಾನ್ ಚೇತನ, ಬಹುಮುಖ ಪ್ರತಿಭೆ. ಪ್ರೊಬೇಷನರಿ ಅಧಿಕಾರಿಯಾಗಿ ಬ್ಯಾಂಕಿಗೆ ಸೇರಿ ಉನ್ನತ ಹುದ್ದೆಯವರೆಗೆ (ಜನರಲ್ ಮೆನೇಜರ್) ಬೆಳೆದವರು. ಇವರ ಮೊದಲೆರಡು ಕೃತಿಗಳನ್ನು ಸಮನ್ವಯ ಸಮಿತಿಯೇ ಪ್ರಕಟಿಸಿದೆ" ಎಂದು ಹೇಳಿದರು. ಇಂದಿನ ಕಾರ್ಯಕ್ರಮ ವಿಶಿಷ್ಟವಾಗಿದ್ದು ಅಗಲಿದ ಸೀತಾರಾಮುರವರ ಪತ್ನಿ ಶ್ರೀಮತಿ ಅನ್ನಪೂರ್ಣ ಹಾಗೂ ಪುತ್ರಿ ಶ್ರೀಮತಿ ಕಾರುಣ್ಯ ಅವರುಗಳು ಅಮೇರಿಕದ ಸಿಯಾಟೆಲ್ ನಿಂದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ ಎಂದೂ ಹೇಳಿದರು.

ವೇದಿಕೆಯ ಮುಂದಿನ ಕಾರ್ಯಕ್ರಮಗಳನ್ನು ಪ್ರಕಟಿಸಿದ ಅವರು, ಜುಲೈ ೧೧ರಂದು 'ಸಾಹಿತ್ಯ ದಾಸೋಹ' ನಡೆಯಲಿದ್ದು, ಜುಲೈ ೧೮ರಂದು ಶ್ರೀ ಮಹಾಬಲ ಭಟ್ ಅವರಿಂದ ವೇದ ಗಣಿತದ ಬಗ್ಗೆ ಉಪನ್ಯಾಸ ಕಾರ್ಯಕ್ರಮವಿದೆ, 'ಎಚ್ಚೆಸ್ಕೆ ಓದು' ಹಾಗೂ 'ಕುವೆಂಪು ಭಾವಯಾನ' ಕಾರ್ಯಕ್ರಮಗಳನ್ನು ಏರ್ಪಡಿಸಲು ಯೋಜಿಸಿದ್ದು ಈ ಬಗ್ಗೆ ಸದ್ಯದಲ್ಲೇ ವೇದಿಕೆಯಲ್ಲಿ ಪ್ರಕಟಿಸಲಾಗುವುದು ಎಂದರು.

ಎಲ್ಲ ದಾಸೋಹಿಗಳಿಗೂ ಸ್ವಾಗತ ಕೋರಿದ ಶ್ರೀ ಕೆ.ಎನ್. ಮಹಾಬಲರವರು, ಅಗಲಿದ ಸೀತಾರಾಮುರವರ ಸ್ಮರಣೆಯ ಈ ಕಾರ್ಯಕ್ರಮವನ್ನು ಬಹುಶ್ರುತ ವಿದ್ವಾಂಸರಾದ ಶ್ರೀ ಬಿ ಎಸ್. ಚಂದ್ರಶೇಖರ್ ಅವರು ನಡೆಸಿಕೊಡುತ್ತಿರುವುದು ಅರ್ಥಪೂರ್ಣವೆಂದು ಹೇಳಿ ಉಪನ್ಯಾಸಕರನ್ನು ಸಂಕ್ಷಿಪ್ತವಾಗಿ ಪರಿಚಯಿಸಿದರು.

"ಗಣಿತ ಹಾಗೂ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಶ್ರೀ ಬಿ ಎಸ್ ಚಂದ್ರಶೇಖರ್, ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಸೇವೆ ಸಲ್ಲಿಸಿ ಮುಖ್ಯ ವ್ಯವಸ್ಥಾಪಕರಾಗಿ ನಿವೃತ್ತರಾಗಿರುತ್ತಾರೆ. ರೂರಲ್ ಬ್ಯಾಂಕಿನ ತರಬೇತಿ ಕೇಂದ್ರದಲ್ಲಿ ಬೋಧಕರಾಗಿ ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಉಪನ್ಯಾಸಗಳನ್ನು ನೀಡುತ್ತಿದ್ದಾರೆ. ಬ್ಯಾಂಕಿಂಗ್ ನಿಘಂಟಿನ ಸಂಪಾದಕ ಮಂಡಳಿಯ ಸದಸ್ಯರಾಗಿರುವ ಇವರು, ಭಾರತದಲ್ಲಿ ಬ್ಯಾಂಕಿಂಗ್, ಇಚ್ಛಾಶಕ್ತಿ, ಹಕ್ಕಿಗಳ ಕಾಗುಣಿತ, ಸವಿಗನ್ನಡ ಸ್ತೋತ್ರ ಚಂದ್ರಿಕೆ, ಲಲಿತಾನಂದ ಲಹರಿ, ಮೊದಲಾದ ಕೃತಿಗಳಲ್ಲದೆ ಕೆಲವು ಕವನ ಸಂಕಲನ ಹಾಗೂ ಜಿ.ಪಿ ರಾಜರತ್ನಂ ಮತ್ತು ವೀಸೀಯವರ ಬಗ್ಗೆ ಕೃತಿಗಳನ್ನು ರಚಿಸಿದ್ದಾರೆ. ಇಂದು ಚಂದ್ರಶೇಖರ್ ರವರು ಸೀತಾರಾಮು ಅವರ ವ್ಯಕ್ತಿತ್ವ ಹಾಗೂ ಕೃತಿಗಳ ನ್ನು ನಮಗೆ ಪರಿಚಯಿಸಲಿದ್ದಾರೆ' ಎಂದು ಹೇಳಿದರು.

ಶ್ರೀ ಸೀತಾರಾಮುರವರ 'ಕದಂಬ' ಕವನ ಸಂಕಲನದಿಂದ "ನಿನ್ನ ಕಣ್ಣ ಹನಿ ಜಾರಿ ನೋವ ಸೂಸುವ ಮುನ್ನ" ಎಂಬ ಗೀತೆಯನ್ನು ಸೀತಾರಾಮುರವರ ಪುತ್ರಿ ಶ್ರೀಮತಿ ಕಾರುಣ್ಯರವರು ಹಾಡಿದರು. ನಂತರ ಶ್ರೀ ಗುರುರಾಜ ಶಾಸ್ತ್ರಿಯವರು ತಾವು ಸಂಗ್ರಹಿಸಿದ್ದ ಶ್ರೀ ಸೀತಾರಾಮುರವರ ವೈವಿಧ್ಯಮಯ ಚಟುವಟಿಕೆಗಳ ಚಿತ್ರಗಳನ್ನು ಪ್ರದರ್ಶಿಸಿದರು.

ಮುಖ್ಯ ಭಾಷಣಕಾರ ಶ್ರೀ ಬಿ ಎಸ್ ಚಂದ್ರಶೇಖರ್ ಮಾತನಾಡಿ, ಸೀತಾರಾಮು ಅವರೊಂದಿಗಿನ ತನ್ನ ಒಡನಾಟವನ್ನು ಸ್ಮರಿಸಿದರಲ್ಲದೆ, ಸೀತಾರಾಮುರವರಿಗೂ ನನಗೂ ಮೂರು ದಶಕಗಳ ನಿಕಟ ಸಂಪರ್ಕವಿದೆ. ಪ್ರಾ.ಎಚ್ಚೆಸ್ಕೆಯವರ ನಿರ್ದೇಶನದ ರಾಯಚೂರು ಕಮ್ಮಟದಲ್ಲಿ

ಅವರು ಮೊದಲು ಭಾಗವಹಿಸಿದರೆಂಬ ನೆನಪು. ಭೂಗರ್ಭ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು ಪ್ರಥಮ ರಾಂಕ್ ಗಳಿಸಿ ಚಿನ್ನದ ಖನಿಜೀಕರಣದ ಸಂಶೋಧನೆಯಲ್ಲಿ ತೊಡಗಿದ್ದ ಅವರಿಗೆ ಭೂಗರ್ಭ ಶಾಸ್ತ್ರದ ವಿಜ್ಞಾನಿಯಾಗಬೇಕೆಂಬ ಬಯಕೆ ಇತ್ತು. ಆದರೆ ಬ್ಯಾಂಕ್ ಸೇರಿದರು. ಬ್ಯಾಂಕಿನಲ್ಲಿ ಪ್ರೊಬೆಷನರಿ ಅಧಿಕಾರಿಯಾಗಿ ಉತ್ತರ ಭಾರತದ ವಿವಿಧೆಡೆಗಳಲ್ಲಿ ಇದ್ದಾಗಲೇ ಅವರು ಕವನಗಳನ್ನು ಬರೆಯುತ್ತಿದ್ದರೂ, ಅವುಗಳನ್ನು ಮೊದಲು ಪ್ರಕಟಿಸಿದ್ದು ಅವರ ೫೦ನೇ ವಯಸ್ಸಿನಲ್ಲಿ. ಅವರ ಮೊದಲೆರಡು ಕವನ ಸಂಕಲನಗಳನ್ನು ಸಮನ್ವಯ ಸಮಿತಿ ಪ್ರಕಟಿಸಿದೆ. ಬೆಳೆಯುವ ಸಾಹಿತಿಗಳನ್ನು ಗುರುತಿಸುವ ಕೆಲಸವನ್ನು ಈ ವೇದಿಕೆ ಮಾಡಿದೆ ಎಂದೂ ಅವರು ಹೇಳಿದರು.

ಸೀತಾರಾಮುರವರದು ಬಹುಮುಖ ವ್ಯಕ್ತಿತ್ವ. ಪ್ರೊಬೇಷನರಿ ಅಧಿಕಾರಿಯಾಗಿ ಭಾರತೀಯ ಸ್ಟೇಟ್ ಬ್ಯಾಂಕ್ ಸೇರಿದ ಅವರು ಮುಂದೆ ಜನರಲ್ ಮ್ಯಾನೇಜರ್ ಆಗಿ ಸಿಂಡಿಕೇಟ್ ಬ್ಯಾಂಕಿನ ಜಾಗ್ರತಾ ವಿಭಾಗಕ್ಕೆ ನಿಯುಕ್ತಿಗೊಂಡು ನಂತರ ನಿವೃತ್ತರಾದರು. ವರ್ತನ ಶಾಸ್ತ್ರದಲ್ಲಿ ತರಬೇತಿ ಮತ್ತು ಉಪನ್ಯಾಸ, ಮರದ ಕೆತ್ತನೆ, ಕವಿ, ಕತೆಗಾರ ಹೀಗೆ ಹಲವಾರು ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದ ಅವರು ಹನ್ನೆರಡು ಪುಸ್ತಕಗಳನ್ನು ಪ್ರಕಟಿಸಿದ್ದು ಅವುಗಳಲ್ಲಿ ಒಂದು 'Management Lessons from Bharthruhari' ಎಂಬುದು ಇಂಗ್ಲೀಷಿನಲ್ಲಿದೆ. ಶಿಲ್ಪ ಶಾಸ್ತ್ರದ ಬಗ್ಗೆ ಅವರು ಹಲವಾರು ಉಪನ್ಯಾಸ ನೀಡಿದ್ದು ಅವು ಬರಹದಲ್ಲಿ ಲಭ್ಯವಿಲ್ಲ. ಇಷ್ಟೇ ಅಲ್ಲದೆ ಅವರು ಹಲವು ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳನ್ನೂ ಮಾಡಿದ್ದಾರೆ. ಅವರ ಬಗ್ಗೆ ಶ್ರೀ ಮಹಾಬಲರು ಹೇಳಿರುವಂತೆ "ನೂರು ಮರ ನೂರು ಸ್ವರ ಆ ಕವಿವಾಣಿಯಲ್ಲಿ, ಆದರೆ ನೂರು ಸ್ವರವಿತ್ತು ಒಂದೇ ಮರದಲ್ಲಿ" ಎಂದು ಸೀತಾರಾಮು ಅವರನ್ನು ಸ್ಮರಿಸಿದರು.

"ಓರ್ವ ಕಾಷ್ಠ ಶಿಲ್ಪಿಯಾಗಿ ಸೀತಾರಾಮು ಅವರ ಅದ್ಭುತ ಕೈಚಳಕವನ್ನು ಅವರ ಶಿಲ್ಪಗಳಲ್ಲಿ ಕಾಣಬಹುದು. ಅವರೇ ಕೆತ್ತಿರುವ ಕುಳಿತುಕೊಳ್ಳಬಹುದಾದ ಎರಡು ಮರದ ಕುರ್ಚಿಗಳು ಅವರ ಮನೆಯಲ್ಲಿವೆ. ಚಿತ್ರ ಕಲಾವಿದರಾಗಿ ಅವರು ಅನೇಕ ಪ್ರದರ್ಶನಗಳನ್ನು ಏರ್ಪಡಿಸಿರುವರಲ್ಲದೆ, ತಮ್ಮ ಮತ್ತು ಗೆಳೆಯರ ಪುಸ್ತಕಗಳಿಗೆ ಮುಖಪುಟದ ಚಿತ್ರಗಳನ್ನೂಬರೆದಿದ್ದಾರೆ" ಎಂದೂ ಚಂದ್ರಶೇಖರ್ ಹೇಳಿದರು.

ಸೀತಾರಾಮು ಅವರ ವಿವಿಧ ಬರಹಗಳನ್ನು ಅವಲೋಕಿಸಿದ ಶ್ರೀ ಬಿ.ಎಸ್.ಚಂದ್ರಶೇಖರ್ ವ್ಯಕ್ತಪಡಿಸಿದ ಕೆಲವು ಅಂಶಗಳು ಹೀಗಿವೆ.

- ಸೀತಾರಾಮು ಅವರ ಮೊದಲ ಕೃತಿ 'ಕದಂಬ'ದ ಬಗ್ಗೆ ಮಾತನಾಡಿ, 'ಕದಂಬ' ಎಂದರೆ ಅಯ್ಯಂಗಾರರು ಎಲ್ಲ ರೀತಿಯ ತರಕಾರಿ ಸೇರಿಸಿ ಮಾಡುವ ಒಂದು ಖಾದ್ಯ. ಅಂತೆಯೇ ಈ ಸಂಕಲನದಲ್ಲಿ ಎಲ್ಲ ರೀತಿಯ ಕವನಗಳಿವೆ ಎಂದರಲ್ಲದೆ, ಕೆಲವು ಕವನಗಳನ್ನು ಓದಿ ಅವುಗಳ ರಸಸ್ವಾದವನ್ನೂ ವಿವರಿಸಿದರು. "ಅನುಭವಗಳಿಂದ ಹಳೆಯ ಹತ್ಯಾರುಗಳನ್ನು ಸಾಣೆ ಹಿಡಿದು ಹರಿತ ಮಾಡುವುದೇ ಕವಿಯ ಕರ್ಮ" ಎಂದು ಎಚ್ಚೆಸ್ಕೆಯವರು ಕದಂಬದ ಮುನ್ನುಡಿಯಲ್ಲಿ ಸೀತಾರಾಮುರವರ ಬಗ್ಗೆ ಮೆಚ್ಚುಗೆಯ ನುಡಿಗಳನ್ನಾಡಿದ್ದಾರೆ.
- ಸೀತಾರಾಮು ಅವರು ತಮ್ಮ ಕವನಗಳಲ್ಲಿ ಬ್ಯಾಂಕಿನ ಅನುಭವ ಹಾಗೂ ನೆನಪುಗಳನ್ನು ಚೆನ್ನಾಗಿ ನಿರೂಪಿಸಿದ್ದಾರೆ. ಅವರ ಗಜಲ್ ಗಳಲ್ಲಿ ಭಾವ ತೀವ್ರತೆ ಇದೆ. ಅವರ ಶಾಯರಿಗಳೂ ಸೊಗಸಾಗಿವೆ' ಎಂದು ಹೇಳಿ ಎರಡು ಶಾಯರಿಗಳನ್ನು ಓದಿದರು. ಸೀತಾರಾಮು ಅವರಿಗೆ ತಮ್ಮ ಗುರುಗಳಾದ ಕವಿ ನಿಸಾರ್ ಅಹಮದ್ ಬಗ್ಗೆ ವಿಶೇಷ ಗೌರವ ಇತ್ತು. ಅವರನ್ನು ಆಗಸದವರೆಗೂ ಬೆಳೆದು ನಿಂತ ದೇವದಾರು ವೃಕ್ಷಕ್ಕೆ ಹೋಲಿಸಿ ಒಂದು ಕವನ ಬರೆದಿದ್ದಾರೆ.
- ಅಪರಾಧ ವಿಷಯಗಳಲ್ಲಿ ಉನ್ನತ ಮಟ್ಟದ ಮಾಹಿತಿಗಳನ್ನೊಳಗೊಂಡ "ಬ್ಯಾಂಕ್ ವಂಚನೆಗಳು: ಶೋಧನೆ ಮತ್ತು ನಿಯಂತ್ರಣ" ಎಂಬ ಅವರ ಕೃತಿಯನ್ನು ಎಲ್ಲ ಬ್ಯಾಂಕ್ ಉದ್ಯೋಗಿಗಳು ಮತ್ತು ಗ್ರಾಹಕರೂ ಓದಲೇಬೇಕು. ಬ್ಯಾಂಕ್ ವಂಚನೆಗೆ ಸಂಬಂಧಿಸಿದ ವಿಷಯಗಳನ್ನು ಶಾಸ್ತ್ರೀಯ ದೃಷ್ಟಿಯಿಂದ ಅಧ್ಯಯನ ಮಾಡಿದ್ದ ಅವರು ಈ ಕೃತಿಯಲ್ಲಿ ಸಿಬ್ಬಂದಿಯ ಮನೋಭಾವ ಹಾಗೂ ವರ್ತನ ಶಾಸ್ತ್ರದ ಬಗ್ಗೆ ಅನೇಕ ಉದಾಹರಣೆಗಳನ್ನು ನೀಡಿ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ;
- ಅವರ "Management lessons from Bharthruhari" ಎಂಬ ಆಂಗ್ಲ ಕೃತಿಯಲ್ಲಿ ನಾಲ್ಕು ವಿಭಾಗಗಳಿದ್ದು, ಭೃರ್ತೃಹರಿಯ ನೀತಿ ಶತಕದ ನಲವತ್ತು ಪದ್ಯಗಳನ್ನು ತೆಗೆದುಕೊಂಡು ಆಧುನಿಕ ಚಿಂತನೆಗಳೊಂದಿಗೆ ವಿವರಿಸಿರುವುದಲ್ಲದೆ, ಕೊನೆಯಲ್ಲಿ ಅನುಬಂಧವಾಗಿ ಶ್ಲೋಕಗಳನ್ನು ಕನ್ನಡದಲ್ಲಿ ಕೊಟ್ಟಿದ್ದಾರೆ.

- "ಕರ್ನಾಟಕದ ಭೂ ವೈಜ್ಞಾನಿಕ ವಿಸ್ಮಯಗಳು" ಕೃತಿಯನ್ನು ರಾಷ್ಟ್ರಮಟ್ಟದ ಪ್ರಖ್ಯಾತ ಭೂವಿಜ್ಞಾನಿ ಶ್ರೀ ಆರ್ ಶ್ರೀನಿವಾಸನ್ ಅವರ ಸಹಯೋಗದೊಂದಿಗೆ ರಚಿಸಿದ್ದಾರೆ. ಶಿಲೆಯ ಕಾಲ ಗಣನೆ, ಭೂಮಿಯ ಪದರಗಳ ಬಗ್ಗೆ ಚಿತ್ರ ಸಹಿತ ಲೇಖನಗಳು ಇದರಲ್ಲಿವೆ. ನಾವು ಲಾಲ್ ಬಾಗ್ ಉದ್ಯಾನವನದಲ್ಲಿ ಕುಳಿತುಕೊಳ್ಳುವ ಶಿಲೆ ೨೬೦ ಕೋಟಿ ವರ್ಷಗಳಷ್ಟು ಹಿಂದಿನದು ಎಂದು ತಿಳಿದಾಗ ವಿಸ್ಮಯವಾಗದಿರದು. ಚಿತ್ರದುರ್ಗದ ದಿಂಬುಗಳಂತಹ ಬಂಡೆಗಳು, ಯಾಣ ಮತ್ತು ಮಲ್ಪೆಯ ವಿಶಿಷ್ಟ ಆಕೃತಿಯ ಶಿಲೆಗಳು ಮೊದಲಾದವುಗಳ ಬಗ್ಗೆ ಕುತೂಹಲಕಾರಿಯಾದ ವೈಜ್ಞಾನಿಕ ಬರಹಗಳು ಈ ಕೃತಿಯಲ್ಲಿವೆ.
- "ಸ್ಫಟಿಕಗಳು" ಅವರ ಸ್ವತಂತ್ರ ಕೃತಿ. ಸ್ಪಟಿಕವೆಂಬುದು ಹರಳಾಗಿ ಮಾರ್ಪಟ್ಟ ರಾಸಾಯನಿಕ ವಸ್ತು. ಸ್ಪಟಿಕಗಳ ಆಕೃತಿ, ರಚನಾ ವ್ಯವಸ್ಥೆ, ಸ್ಫಟಿಕದ ಬಗೆಗಿನ ದಂತಕತೆಗಳ ಬಗ್ಗೆ ಇದರಲ್ಲಿ ಲೇಖನಗಳಿವೆ. ಸುಂದರ ವರ್ಣಚಿತ್ರಗಳು ಕೃತಿಯ ಆಕರ್ಷಣೆ ಹೆಚ್ಚಿಸಿವೆ. ಸಾಮಾನ್ಯರಿಗೂ ಅರ್ಥವಾಗುವಂತೆ ಬರೆದಿರುವ ವೈಜ್ಞಾನಿಕ ಕೃತಿ ಇದಾಗಿದೆ. ಇದಕ್ಕೆ ಹೆಚ್ಚಿನ ಮಾನ್ಯತೆ ಸಿಗುವುದು ಅಗತ್ಯ.
- "ಅರಿವೇ ಶಿವ" ಮತ್ತು "ಅಂತಸ್ಸತ್ವ" ಕೃತಿಗಳಲ್ಲಿ ವಿವಿಧ ವಿಷಯಗಳ ಬಗ್ಗೆ ಇವರು ಮಾಡಿದ ಉಪನ್ಯಾಸಗಳ ಲೇಖನಗಳಿವೆ. ಜಯನಗರದ ಮೆಡಿಟೇಶನ್ ಅಂಡ್ ಸ್ಟಡಿ ಸರ್ಕಲ್ ನಲ್ಲಿ ಇವರು ಉಪನ್ಯಾಸ ನೀಡುತ್ತಿದ್ದರು.
- ಮೂರು ಕಥಾ ಸಂಕಲನಗಳನ್ನು ಹೊರತಂದಿರುವ ಸೀತಾರಾಮು ಅವರು ಕವಿಗಿಂತಲೂ ಒಳ್ಳೆಯ ಕತೆಗಾರರು ಎಂಬುದನ್ನು ಸಾಬೀತುಪಡಿಸಿದ್ದಾರೆ.
- ಗುರುನಾನಕರ ವಚನಗಳನ್ನು ಕನ್ನಡದಲ್ಲಿ ಪದ್ಯ ರೂಪಕ್ಕೆ ತಂದಿದ್ದಾರೆ. ಇದು ಅವರ ಮಹತ್ವಾಕಾಂಕ್ಷೆಯ ಕೃತಿ. ಸಿಖ್ಖರ ಮೂಲಮಂತ್ರ ಶುದ್ಧ ಅದ್ವೈತವೆಂಬುದು ಅದನ್ನು ಓದಿದಾಗ ತಿಳಿಯುತ್ತದೆ.
- 'ತರಂಗ' ವಾರಪತ್ರಿಕೆಯಲ್ಲಿ ಇವರ ಒಂಬತ್ತು ಕತೆಗಳು ಒಂದೇ ಸಂಚಿಕೆಯಲ್ಲಿ ಪ್ರಕಟವಾದದ್ದು ಒಂದು ದಾಖಲೆ. ವೃತ್ತಿಪರ ಕತೆಗಳು ಕನ್ನಡದಲ್ಲಿ ಅಷ್ಟಾಗಿ ಬಂದಿಲ್ಲ. ಇವರ ಕತೆಗಳಲ್ಲಿ ಮಾನವೀಯ ಸಂಬಂಧಗಳು, ಬ್ಯಾಂಕ್ ವಂಚನೆ ಪ್ರಕರಣಗಳು, ವಿಭಿನ್ನ ವ್ಯಕ್ತಿತ್ವಗಳ ಚಿತ್ರಣವನ್ನು ಪ್ರಧಾನವಾಗಿ ಕಾಣುತ್ತೇವೆ. ಅತೀತ ಶಕ್ತಿಯ ಬಗ್ಗೆ ನಂಬಿಕೆಗಳನ್ನು ಇವರ ಕೆಲವು ಕತೆಗಳಲ್ಲಿ ಕಾಣಬಹುದು (ಮರಿ, ನಂಬಿದರೆ ನಂಬಿ).
- ಸೀತಾರಾಮುರವರು ಪ್ರತಿ ಉಪನ್ಯಾಸಕ್ಕೂ ಮುನ್ನ ರಾಮಕೃಷ್ಣ ಪರಮಹಂಸರನ್ನು ನೆನೆಯುತ್ತಿದ್ದರು.

ಹೀಗೆ ಶ್ರೀ ಸೀತಾರಾಮುರವರ ಎಲ್ಲ ಕೃತಿಗಳ ಬಗ್ಗೆ ಅವಲೋಕನ ಮಾಡಿದ ಶ್ರೀ ಬಿ.ಎಸ್. ಚಂದ್ರಶೇಖರ್, ತಾನು ಮಿಶ್ರ ಭಾವದಿಂದ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ ಎಂದು ತಮ್ಮ ಉಪನ್ಯಾಸ ಮುಗಿಸಿದರು.

ಶ್ರೀ ಸೀತಾರಾಮುರವರು ಸದಾ ಆದರಿಸುತ್ತಿದ್ದ ಅವರ ಗುರುಗಳಾದ ಶ್ರೀ ಶ್ರೀನಿವಾಸನ್ ಅವರು ಕೊನೆಯಲ್ಲಿ ಅಮೆರಿಕಾದಿಂದಲೇ ವಂದನಾರ್ಪಣೆ ಮಾಡುತ್ತಾ, ಸೀತಾರಾಮುರವರ ಕೃತಿಗಳ ಪಕ್ಷಿನೋಟ ನೀಡಿದ ಶ್ರೀ ಚಂದ್ರಶೇಖರ್ ರವರಿಗೆ ಧನ್ಯವಾದ ಸಮರ್ಪಿಸಿರು.

"ಭೂವಿಜ್ಞಾನ ವಿದ್ಯಾರ್ಥಿಯಾಗಿದ್ದ ಸೀತಾರಾಮುರವರು ತೀಕ್ಷ್ಣ ಬುದ್ಧಿಮತ್ತೆ ಉಳ್ಳವರಾಗಿದ್ದರು, ಅಂದು ನಾನು ವಿದ್ಯಾರ್ಥಿಗಳನ್ನು ಬೆಂಗಳೂರಿನ ಸುತ್ತಮುತ್ತಲಿನ ಸ್ಥಳಗಳಿಗೆ ಕರೆದೊಯ್ದು ಪಾಠ ಕಲಿಸುತ್ತಿದ್ದೆ ಆಗ ಸೀತಾರಾಮು ನನಗೆ ಪ್ರಿಯಶಿಷ್ಯರಾಗಿದ್ದರು. ರಾಮಗಿರಿ ಚಿನ್ನದ ಗಣಿ ಸಂಶೋಧನೆ ಮಾಡುವಾಗ ಯಾರೋ ಒಬ್ಬ ಭೂ ವಿಜ್ಞಾನಿಯ ಮಾತಿನಿಂದ ನೊಂದು ಬ್ಯಾಂಕು ಸೇರಿದ್ದರಿಂದ ಅವರು ಭೂಗರ್ಭ ಶಾಸ್ತ್ರದ ವಿಜ್ಞಾನಿಯಾಗುವುದು ತಪ್ಪಿದರೂ ಬ್ಯಾಂಕ್ ಸೇರಿದ್ದರಿಂದ ಅವರ ವಿವಿಧ ಪ್ರತಿಭೆಗಳು ಹೊರಬಂದವು. ಬ್ಯಾಂಕ್ ಸೇರಿದ ನಂತರವೂ ಅವರು ಎಂದೂ ಭೂ ವಿಜ್ಞಾನದಲ್ಲಿ ತಮ್ಮ ಆಸಕ್ತಿ ಕಳೆದುಕೊಂಡಿರಲಿಲ್ಲ. ಒಬ್ಬ ಪ್ರತಿಭಾವಂತ ವ್ಯಕ್ತಿಯಾಗಿದ್ದ ಅವರು ನಮ್ಮನ್ನು ಅಗಲಿದರೂ, ತಮ್ಮ ಕೃತಿಗಳ ಮೂಲಕ ಜೀವಂತವಾಗಿದ್ದಾರೆ. ನನ್ನನ್ನು ಈ ವೇದಿಕೆಗೆ ಪರಿಚಯಿಸಿದವರು ಅವರೇ" ಎಂಬುದನ್ನು ನೆನೆದ ಶ್ರೀ ಶ್ರೀನಿವಾಸನ್, ಸೀತಾರಾಮು ಅವರ ಪತ್ನಿ ಮತ್ತು ಪುತ್ರಿ ಗೆ ಅವರ ಅಗಲಿಕೆಯನ್ನು ಭರಿಸುವ ಶಕ್ತಿ ಕೊಡಲಿ, ಸೀತಾರಾಮುರವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸಿ, ಎಲ್ಲರಿಗೂ ವಂದಿಸಿದರು.

ಎಚ್ಚೆಸ್ಕೆ ನಮನ

ಕೃಷ್ಣ ಗುರುವಿನ ಕರುಣೆಯಿಂದಲಿ
ಜನ್ಮ ನೂರರ ಸಂಭ್ರಮದ ಕಥೆಯ
ಎನಗಾಪನಿತು ಪೇಳುವೆ
ಸಕ್ತರೆಲ್ಲರಿದನಾದರಿಸಿ ಕೇಳುವುದು.

ಮಹತಿಯೊಡೆಯನು ಹರಿಯ ಸ್ಮರಿಸುತ
ಚಿತ್ತೈಸಿದನು ನುಡಿವೆಣ್ಣಿನಾಲಯಕೆ
ಅವನಿಯೊಳಗಣ ಜನರ ಕಷ್ಟಗಳ
ಅರುಹಲೋಸುಗವೇ.....

ಬಿರಿದ ಮೊಗದ ಪೊಳೆವ ಕಂಗಳ
ಚೆಲುವಿನರಸಿಯ ಪಾದಪದ್ಮಕೆ
ನಮಿಸುತಲಿಂತು ಕೇಳಿದನು

ಭೂಮಿಯಲ್ಲಿನ ನಿನ್ನ ಮಕ್ಕಳು
ರುಜಿನ ಬಾಧೆಯ ತಾಳಲಾರದೆ
ಅನವರತ ತಪಿಸುತಿಹರಲ್ಲಿ...
ಬ್ರಹ್ಮಾಂಡದಲ್ಲಿನ ಜೀವಕೋಟಿಯ
ನೆಮ್ಮದಿಯ ಬಾಳ್ವೆಗೆ
ಸಲಹೆ ನೀಡೆಂದು.

ಸಡಗರಿಸುತಲಿ ದೇವಿ ಪೇಳ್ದಳು ಕೇಳು ಕುಮಾರ,
ನಾನಿಚ್ಛೆಯಿಂದಲಿ ಇತ್ತ ವರಗಳ
ಅಚ್ಛೆಯಿಂದಲಿ ಬಳಸುತಿಹ
ಎನ್ನಮಕ್ಕಳ ಲೋಗರಾಟಗಳ
ನೋಡಿ ಸುಖಿಸುತಿಹೆನೆಂದೂ

ಬೆಂಗಳೂರಿನ ಮನೆಗಳಲ್ಲಿಹ
ಗಣಕಯಂತ್ರದಿ ಕಣ್ಣುಕೀಲಿಸಿ
ಚಚಿತ್ರಬಾಡಿಸಿ ಮೈಕು ಮೂಕಿಸಿ
ವಾರವಾರಕು ನುಡಿಯ ಜಾತ್ರೆಯ ನಡೆಸುತಿಹರಲ್ಲೀ

ರೋಗರುಜಿನಗಳಿಗು ಅಂಜದೆ
ಬಹಳ ಜನರನು ಸೇರಗೊಡದೆ
ವಿವಿಧ ರೀತಿಯ ಕಾರ್ಯಕ್ರಮಗಳ ನಡೆಸುತಿಹರಲ್ಲೀ

ಕಥೆಯ ಅಂಬರ, ಕಾವ್ಯಕಂಕಣ
ಹಾಸ್ಯದಡ್ಡಿಗೆ ಕನ್ನಡಾಂಬೆಗೆ
ಕನ್ನಡಮ್ಮನ ಸೇವೆ ಸಲ್ಲಿಸಲು
ಜಾಣಜಾಣೆಯರೆಲ್ಲರೊಂದಾಗೀ

ಕಿರಿಯರೆನ್ನುವ ಬೇಧವೆಣಿಸದೆ
ಬೆರಳ ಹಿಡಿದು ತಪ್ಪುತಿದ್ದುತ
ಕಾವ್ಯ ಸರಪಳಿಯಕೋದೂ.
ಎನ್ನಂಘ್ರಿಗಳಿಗರ್ಪಿಸಿದವರ ಶ್ರದ್ಧೆಗೆ
ಮನವ ಸೋಲುತ ಮೆಚ್ಚಿ ಹರಸಿದೆನವರ ಪರಿಶ್ರಮಕೆ.

ಕೃಷ್ಣ ಗುರುವನು ನೆನೆದು
ಅವರ ಹಾದಿಯೊಳು ನಡೆದು
ಅವರಿಗೊಂದನೆಯ ಸಲಿಸುವನೆವದಿ
ಎನಗೆ ಪೂಜೆಯ ಸಲಿಸುತಿಹರೆಲ್ಲ ಸಡಗರದಿ.

ತನ್ನ ಶಿಷ್ಯರ ತ್ವರೆಯಾಟ ನೋಡುತ
ಲೋಲ ಬಕುತರ ಸೇವೆಗ್ಹಿಗ್ಗುತ
ಅವರ ಏಳ್ಗೆಯ ಮನದಿ ಬಯಸುತ
ತನ್ನ ಚೈತನ್ಯವನ್ನಲವು ಮಡಿ ಮಾಡೀ
ಹಂಚಿ ಹಿಗ್ಗಿದ ಕೃಷ್ಣ ಗುರುವು
ಎಲ್ಲರನು ಹರಸುತಲೀ

ಇದುವೆ ಈ ವೇದಿಕೆಯ ಕಥೆ
ಇದನು ಕೇಳುವಾ ನರರ
ಸಂತಾಪ ತೊಲಗುವುದು
ಆರೋಗ್ಯ ವರ್ಧಿಪುದು

ಮಂಗಳವು ಶ್ರೀ ಶ್ರೀನಿವಾಸನಿಗೆ
ಮಂಗಳವು ಅಲಮೇಲು ಮಂಗಗೆ
ಮಂಗಳವು ಶ್ರೀ ಕೃಷ್ಣ ಗುರುವಿಗೆ
ದಿವ್ಯ ಚೇತನಕೇ.....

ಮಂಗಳವು ಶ್ರೀ ರವೀಂದ್ರಗೆ
ಮಂಗಳವು ಗುರುದ್ವಯರಿಗೆ
ಮಂಗಳವು ತೆರೆಮರೆಯ
ಶ್ರಮಿಕ ಸಜ್ಜನಕೇ
ಮಂಗಳವು ಶ್ರೋತೃಬಾಂಧವಗೆ
ಯುಟ್ಯೂಬ್ ಫೇಸ್ಬುಕ್ ವೀಕ್ಷಕರಿಗೇ

\- ವಿಜಯಕುಮಾರಿ

(ಸಮನ್ವಯ ಸಮಿತಿ ವೇದಿಕೆಯಲ್ಲಿ ಪ್ರಾ.ಎಚ್ಚೆಸ್ಕೆಯವರ ಜನ್ಮಶತಾಬ್ದಿ ಅಂಗವಾಗಿ ಆಯೋಜಿಸುತ್ತಿರುವ ವಿವಿಧ ಕಾರ್ಯಕ್ರಮಗಳು ನನ್ನಲ್ಲಿ ಮೂಡಿಸಿರುವ ಭಾವನೆಗಳನ್ನು, ನಾರದ-ಸರಸ್ವತಿಯರ ಸಂವಾದ ರೂಪದಲ್ಲಿ ಗಮಕಶೈಲಿಯಲ್ಲಿ ಪ್ರಸ್ತುತಪಡಿಸಿದ್ದೇನೆ)

ಭಾವನಮನ

ಕಲ್ಲಿನಲ್ಲಿ ಚಿನ್ನದ ಆಕೃತಿಗಳನ್ನು ಮೂಡಿಸಿದ ಶ್ರೀಮತಿ ಕನಕಾ ಮೂರ್ತಿ

- ಜಿ. ವಿ. ಅರುಣ

ಟೆಲಿಫೋನ್ ಕರೆಯಿತು, "ಹಲೋ, ಯಾರು?" ಎಂದೆ.

"ಅರುಣ, ನಾನು ಕನಕಾ..."

"ನಮಸ್ಕಾರ... ಒಂದು ನಿಮಿಷ ಜಿ.ವಿ. ಅವರಿಗೆ ಫೋನ್ ಕೊಡ್ತೀನಿ..."

"ಬೇಡ, ಬೇಡ! ನಾಳೆ ನಾವು ನಿಮ್ಮ ಮನೆಗೆ ಬರ್ತಾ ಇದೀವಿ. ಮನೇಲೇ ಇರ್ತೀರಾ ಅಂತ ಕೇಳೋಕ್ಕೆ ಫೋನ್ ಮಾಡಿದೆ..."

"ಬನ್ನಿ... ಮನೆಯಲ್ಲೇ ಇರ್ತೀವಿ..."

"ಈ ಸಲಿ ಹೇರಳೆ ಗಿಡ ತುಂಬಾ ಫಲ ಕೊಟ್ಟಿದೆ. ಬರುವಾಗ ಅವನ್ನು ತರ್ತೀನಿ. ಗುರುಗಳಿಗೆ ಅದು ತುಂಬ ಇಷ್ಟ ಅಲ್ವಾ!" ಎಂದರು ಕನಕಾ.

ಮಾರನೆಯ ದಿನ ಬೆಳಗ್ಗೆ ಸುಮಾರು ೧೧.೩೦ರ ಹೊತ್ತಿಗೆ ಶ್ರೀಮತಿ ಕನಕಾ ಮೂರ್ತಿ ಹಾಗೂ ಶ್ರೀ ನಾರಾಯಣಮೂರ್ತಿ ದಂಪತಿಗಳು ಮನೆಗೆ ಬಂದರು. ನನ್ನ ತಂದೆ, ಪ್ರೊ. ಜಿ ವಿಯವರು ಕನಕಾಮೂರ್ತಿ ಕೊಟ್ಟ ಹೇರಳೆಕಾಯಿಯನ್ನು ಸ್ವಲ್ಪ ಗೀರಿ, ಮೂಸಿನೋಡಿ, "ಒಳ್ಳೆ ಸೊನೆಯ ಹೇರಳೆ" ಎಂದರು. ಕನಕಾ ಅದಕ್ಕೆ ಧ್ವನಿಗೂಡಿಸಿ "ನೀವು ಏನೇ ಹೇಳಿ ಸರ್, ನಮ್ಮ ಹಳೆಯ ಮೈಸೂರಿನವರಿಗೆ ಹೇರಳೆ ಚಿತ್ರಾನ್ನದ ರುಚಿಯೇ ರುಚಿ" ಎಂದರು.

ಕನಕಾ ಅವರ ತಂದೆ ಟಿ ನರಸೀಪುರದ ದೊಡ್ಡ ಜಮೀನುದಾರರಾಗಿದ್ದರು ಅವರನ್ನು ಸಾವಿರ ಖಂಡಿ ಸುಬ್ಬರಾಯರು ಎಂದು ಕರೆಯುತ್ತಿದ್ದರು. ಸಂಗೀತದಲ್ಲಿ ಅಪಾರ ಆಸಕ್ತಿ. ಟೈಗರ್ ವರದಾಚಾರ್ಯರಲ್ಲಿ ಸಂಗೀತ ಅಭ್ಯಾಸ ಮಾಡಿದ್ದರು. ಅದರ ಪರಿಣಾಮವಾಗಿ ಮನೆಯಲ್ಲಿ ಎಲ್ಲ ಮಕ್ಕಳಿಗೂ ಸಂಗೀತದ ಅಭ್ಯಾಸ ಮಾಡಿಸಿದ್ದರು. ಮನೆಗೆ ಬರುತ್ತಿದ್ದ ನೆಂಟರಿಷ್ಟರ ಜೊತೆ ಎತ್ತಿನಗಾಡಿಯಲ್ಲಿ ಹತ್ತಿರದ ಸೋಮನಾಥಪುರಕ್ಕೆ ಹೋಗಿ ಅಲ್ಲಿನ ದೇವಸ್ಥಾನಗಳು ತೋರಿಸುವುದನ್ನು ಅವರು ತಪ್ಪದೇ ಮಾಡುತ್ತಿದ್ದರು. ಅವರ ಜೊತೆ ಹೋಗುತ್ತಿದ್ದ ಪುಟ್ಟ ಕನಕಾ ಅವರ ಮನಸ್ಸಿನ ಮೇಲೆ ಅಲ್ಲಿನ ಶಿಲ್ಪಗಳು ಅಪಾರ ಪ್ರಭಾವವನ್ನು ಬೀರಿದ್ದವು. ಅವರು ಆಗ ಅಲ್ಲಿನ ಶಿಲ್ಪಗಳು ದೇವಲೋಕದಿಂದ ಬಂದ ಶಿಲ್ಪಕಲೆಗಳು ಎಂದು ಅಂದುಕೊಂಡಿದ್ದರಂತೆ!

ಊರಿನಲ್ಲಿ ಅವರ ವಿದ್ಯಾಭ್ಯಾಸ ಪಿಯುಸಿಯವರೆಗೆ ಆಯಿತು. ತರಗತಿಯಲ್ಲಿ ಮೊದಲ ಸ್ಥಾನ ಬಿಟ್ಟುಕೊಡದ ಜಾಣೆ ಕನಕಾ, ಶಾಲೆಯಲ್ಲಿದ್ದಾಗಲೇ ಕನ್ನಡದ ಪುಸ್ತಕಗಳನ್ನು ಅದರಲ್ಲೂ ಕಾರಂತರ ಕಾದಂಬರಿಗಳನ್ನು ಓದುವುದನ್ನು ಅಭ್ಯಾಸ ಮಾಡಿಕೊಂಡಿದ್ದರು. ಅವರು ಟಿ.ನರಸೀಪುರದಲ್ಲಿ ಪಿಯುಸಿ ಮುಗಿಸಿ ಕಾಲೇಜು ಶಿಕ್ಷಣಕ್ಕೆ ಬೆಂಗಳೂರಿಗೆ ಬಂದು ಸೇರಿದ್ದರು. ಮೊದಲೇ ಬೆಂಗಳೂರಿಗೆ ಬಂದಿದ್ದ ಅಕ್ಕ ಮತ್ತು ಅಣ್ಣಂದಿರಿಗಾಗಿ ಅವರ ತಂದೆ, ಶ್ರೀರಾಮಮಂದಿರ ರಸ್ತೆಯಲ್ಲಿ ಮನೆಯೊಂದನ್ನು ಮಾಡಿದ್ದರು. ಮನೆಗೆ ಹತ್ತಿರದ ವಿಜಯ ಕಾಲೇಜಿನಲ್ಲಿ ಬಿಎಸ್ಸಿ ತರಗತಿಗೆ ಸೇರಿದರು. ಆರಿಸಿಕೊಂಡಿದ್ದು ಗಣಿತ ಮತ್ತು ಭೌತಶಾಸ್ತ್ರ. ಅವರ ತಂದೆಯವರಿಗೆ ಇದ್ದ ಆಸಕ್ತಿಯಿಂದ ಅವರು ಗಮಕ ಮತ್ತು ಹಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದರು. ಕನಕಾ ಅವರ

ಗಮಕ ವಾಚನ ಮತ್ತು ಸಂಗೀತಗಳ ಬಗ್ಗೆ ತಿಳಿದ ಜಿ ವಿ ಅವರು ನಾಡಹಬ್ಬದಲ್ಲಿ, ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ನಲ್ಲಿರುವ ಸರಸ್ವತಿ ಸ್ತುತಿಯನ್ನು ಪ್ರಾರ್ಥನಾ ಗೀತೆಯಾಗಿ ಹಾಡುವಂತೆ ತಿಳಿಸಿದರು. ಅದಕ್ಕೆ ಸೂಕ್ತವಾದ ರಾಗಸಂಯೋಜನೆ ಮಾಡಿ ಅಭ್ಯಾಸ ಮಾಡಿದರು. ಮುಂದಿನದನ್ನು ಅವರು ಮಾತುಗಳಲ್ಲೇ ನೋಡೋಣ*:

"ಆಗ ಅದನ್ನು ಮೊದಲು ಜಿ.ವಿ.ಯವರ ಮನೆಗೆ ಹೋಗಿ, ಅವರ ಮುಂದೆ ಹಾಡಿದೆ. ಇನ್ನೂ ನೆನಪಿದೆ, ಜಿ.ವಿ.ಯವರಿಗೆ ನಾನು ಹಾಡಿದ್ದು ಕೇಳಿ, ಬಹಳ ಸಂತೋಷವಾಗಿತ್ತು. ಅವರ ಕಣ್ಣಲ್ಲಿ ಆನಂದಭಾಷ್ಪ. ಅವರ ಕಣ್ಣುಗಳು ಹೊಳೆಯುತ್ತಿದ್ದವು. ಇಂದಿಗೂ ಅವರಿಗೆ ತುಂಬ ಖುಷಿಯಾದರೆ, ಅಭಿಮಾನ ಉಕ್ಕಿದರೆ, ಅವರ ಕಣ್ಣುಗಳು ಹೊಳೆಯುತ್ತವೆ. ಆ ಹೊಳಪನ್ನು ನೋಡುವುದೇ ಚೆಂದ.

"ಮತ್ತೆ ನಾಡಹಬ್ಬದಂದು ನನ್ನ ಪ್ರಾರ್ಥನೆಯಿಂದ ಕಾರ್ಯಕ್ರಮ ಆರಂಭವಾಯಿತು. ನಾನು ಹಾಡಲು ಪ್ರಾರಂಭಿಸಿದೊಡನೆಯೇ ಸಭಾಂಗಣವೆಲ್ಲ ನಿಶ್ಯಬ್ದವಾಯಿತು. ೫೦೦ಕ್ಕೂ ಮಿಕ್ಕ ವಿದ್ಯಾರ್ಥಿಗಳು, ಆಹ್ವಾನಿತರೂ ಇದ್ದರು. ದೊಡ್ಡ ಪದ್ಯ, ಸುಮಾರು ಎಂಟು ನಿಮಿಷಗಳ ಕಾಲ ಹಾಡಿದೆ. ಪದ್ಯ ಕೂಡ ಬಹಳ ಚೆನ್ನಾಗಿತ್ತು. ಕುವೆಂಪು ರಚನೆಯೆಂದರೆ ಕೇಳಬೇಕೆ? ಆ ಪದಗಳ ಪ್ರಯೋಗ, ಅರ್ಥಮಾಡಿಕೊಂಡು, ಅದರ ಸೌಂದರ್ಯಕ್ಕೆ ಕುಂದು ಬಾರದಂತೆ ಹಾಡಿದರೆ, ಭಾವಪೂರ್ಣವಾಗುತ್ತದೆ. ದೀರ್ಘ ಚಪ್ಪಾಳೆ ದೊರೆಯಿತು. ಒಂದೇ ದಿನದಲ್ಲಿ ಕಾಲೇಜಿನ ಅಚ್ಚುಮೆಚ್ಚಿನ ಗಾಯಕಿಯಾದೆ. ಮುಂದೆ. ಡಾ. ಡಿ.ವಿ.ಜಿ., ಪು.ತಿ.ನ., ಬೇಂದ್ರೆ, ಗೋಕಾಕ್ ಎಲ್ಲರನ್ನೂ ಕಾಲೇಜಿಗೆ ಕರೆಸಿದಾಗ ಅವರ ಕವನಗಳಿಗೆ ರಾಗ ಸಂಯೋಜಿಸಿ ಹಾಡುವುದೂ ನನ್ನ ಪಾಲಿಗೆ ಬಂದಿತ್ತು.

"ಒಮ್ಮೆ ಶ್ರೀ ಜಿ.ವಿ.ಯವರು ಡಾ. ಡಿ.ವಿ.ಗುಂಡಪ್ಪನವರ 'ದಾರಿಹೋಕರ ಹಾಡು' ಎಂಬ ನೀಳ್ಗವಿತೆಯಲ್ಲಿನ ೧೦ ಪದ್ಯಗಳನ್ನು ಆರಿಸಿ ಹಾಡಲು ಹೇಳಿದರು. ಆಗ ಕಾಲೇಜಿನಲ್ಲಿ ನಾನು, ನನ್ನ ತಂಗಿ ಸತ್ಯವತಿ ಇಬ್ಬರೂ ಇದ್ದೆವು.

"ದಾರಿಹೋಕರ ಹಾಡು' ನಾಲ್ಕು ಸಾಲುಗಳ ಪದ್ಯ, 'ದಾರಿಹೋಕರು ನಾವು ಊರ ತೊಡಕಿಗೆ ನಮ್ಮ ಸೇರಿಸದೆ ಬಿಡಿರಿ ಸಖರೇ ।' ಎನ್ನುವಲ್ಲಿ ಈ 'ಸಖರೇ' ಎನ್ನುವ ಶಬ್ದ ಹಾಡಲು ಬಹಳ ಕಷ್ಟವಾಗುತ್ತಿತ್ತು. ನಾವಿಬ್ಬರೂ ಎಷ್ಟೋ ಪ್ರಯತ್ನ ಪಟ್ಟೆವು. ತಾಳಕ್ಕೆ ಕೂಡಿಸಿ ಹಾಡುವುದಾದರೂ 'ಸಖರೇ' ತೊಂದರೆ ಕೊಡುತ್ತಿತ್ತು. ಹತ್ತು ದಿನ ಕಳೆದರೂ ಏನೂ ಹೊಳೆಯಲಿಲ್ಲ. ಇಬ್ಬರೂ ಕುಳಿತು ಹಲವಾರು ಪ್ರಯತ್ನಗಳನ್ನು ಮಾಡಿ ನಿರಾಸೆ ಹೊಂದಿದೆವು. ಏನಾದರೂ ಅದರ ಲಯ, ಭಾವ ಒಂದಕ್ಕೊಂದು ಹೊಂದಿಕೊಂಡು ಬರುತ್ತಿರಲಿಲ್ಲ. ಒಂದು ದಿನ ಸತ್ಯ ಇದ್ದಕ್ಕಿದಂತೆ ಮೊದಲ ಪದ್ಯವನ್ನು ಮೋಹನ ರಾಗದಲ್ಲಿ ಹಾಡಿ 'ಸಖರೇ'ಗೆ ಒಳ್ಳೆಯ ಮುಕ್ತಾಯ ಕೊಟ್ಟು, ಸುಲಭವಾಗಿ ಹಾಡಿದಳು. ನನಗಂತೂ ತುಂಬಾ ಸಂತೋಷ, ಆಶ್ಚರ್ಯ ಒಟ್ಟಿಗೆ ಆದವು. ಅದೇ ಲಯವನ್ನು ಹಿಡಿದು ಮುಂದಿನ ಪದ್ಯಗಳನ್ನು ಬೇರೆ ಬೇರೆ ರಾಗಗಳಲ್ಲಿ ಹಾಡಿ ನೋಡಿದೆವು. ಒಂದಕ್ಕಿಂತ ಒಂದು ಆ ರಾಗದಲ್ಲೇ ಹಾಡಿನ ಚಿತ್ರ ಮೂಡಿ ಬಂದಿತ್ತು. ಅದರಲ್ಲೂ ಕೊನೆಯ ಸಾಲುಗಳು,

ಊರುಗಳ ಸುತ್ತಿಹೆವು, ಕೇರಿಗಳ ತಿರುಗಿಹೆವು,
ಊರಿಗರ ಜಪತಪಂಗಳ ಅರಿತೆವು,
ಊರಿನಲ್ಲಿರುವೆಲ್ಲ ಉದಾರತೆಯ ಸವಿದಿಹೆವು,
ಊರು ಸಾಕಿನ್ನು ನಮಗೇ ಸಖರೇ ॥

ಎಂತಹ ಸಾಲುಗಳು! ನಮಗೂ ಬಹಳ ತೃಪ್ತಿಯಾಯಿತು. ಶ್ರೀ ಜಿ.ವಿ.ಯವರ ಎದುರಿಗೆ ಹಾಡಿದೆವು. ಅವರೂ ಬಹಳ ಮೆಚ್ಚಿದರು 'ಪದ್ಯದ ಭಾವಕ್ಕೆ ಸ್ವಲ್ಪವೂ ಕುಂದು ಬಾರದಂತೆ ಹಾಡುತ್ತೀರಾ' ಎಂದರು. ಅವರು ಮೆಚ್ಚಿದ್ದು ನಮಗೆ ಹೆಚ್ಚಿನ ಸಂತೋಷ

ಕೊಟ್ಟಿತ್ತು. ಕಾಲೇಜಿನ ಸಮಾರಂಭದಲ್ಲಿ ಡಾ. ಡಿ.ವಿ.ಜಿ.ಯವರ ಎದುರಿಗೆ ಹಾಡಿದಾಗ ಅವರು ಮೈ ಮರೆತು ತಲೆದೂಗಿದರು. ಮೆಚ್ಚಿ ಮಾತನಾಡಿದರು. ಮುಂದೆ ನಾವೆಲ್ಲಿ ಹೋದರೂ 'ದಾರಿ ಹೋಕರ ಹಾಡನ್ನು ಹಾಡಲೇ ಬೇಕಿತ್ತು."

ವಿಜಯ ಕಾಲೇಜಿನಲ್ಲಿ ಬಿಎಸ್ಸಿ ಪದವಿಯನ್ನು ಮುಗಿಸಿದ ಮೇಲೆ ಮುಂದೆ ಓದಲು ಮನೆಯಲ್ಲಿ ಒಪ್ಪಲಿಲ್ಲ. ಹಾಗಾಗಿ ಮತ್ತೆ ಊರಿಗೆ ಹಿಂದಿರುಗಬೇಕಾಯಿತು. ಕೆಲವು ತಿಂಗಳುಗಳ ನಂತರ ಅವರು ಒಂದು ಉಪಾಯ ಮಾಡಿದರು. ಅವರ ತಾಯಿಗೆ "ಅಮ್ಮ, ಬೆಂಗಳೂರಿನಲ್ಲಿ ಅಣ್ಣಂದಿರು ಓದುತ್ತಿದ್ದಾರೆ. ಅವರಿಗೆ ಅಡುಗೆ ಮಾಡಿಕೊಂಡು ಓದುವುದು ಕಷ್ಟವಾಗುತ್ತದೆ. ನಾನು ಅವರಿಗೆ ಅಡುಗೆ ಮಾಡಿಕೊಂಡು ಅಲ್ಲೇ ಇರುತ್ತೇನೆ." ಎಂದರು. ಅದಕ್ಕೆ ಒಪ್ಪಿಗೆ ಸಿಕ್ಕಿ ಅವರು ಮತ್ತೆ ಬೆಂಗಳೂರಿಗೆ ಹಿಂದಿರುಗಿದರು.

ಹೀಗೆ ಅವರ ಅದೃಷ್ಟದ ಬಾಗಿಲು ತೆರೆದಿತ್ತು. ಅವರ ಅಣ್ಣ ಶ್ರೀ ಶ್ರೀನಿವಾಸಮೂರ್ತಿ ಅವರು ಚಿತ್ರಕಲೆಯ ಅಭ್ಯಾಸ ಮಾಡುತ್ತಿದ್ದರು. ಅವರು ಈಕೆಯನ್ನು ಶ್ರೀ ಅ.ನಾ.ಸುಬ್ಬರಾಯರ ಕಲಾಮಂದಿರಕ್ಕೆ ಕರೆದುಕೊಂಡು ಹೋದರು. ಅಲ್ಲಿ ಬಹಳ ಬೇಗ ಚಿತ್ರ ರಚನೆಯನ್ನು ಕರಗತ ಮಾಡಿಕೊಂಡದ್ದಲ್ಲದೆ ರೇಖಾಚಿತ್ರ ಬಿಡಿಸುವುದರಲ್ಲಿ ನಿಷ್ಣಾತರಾದರು. ಸುಬ್ಬರಾಯರ ಅಚ್ಚುಮೆಚ್ಚಿನ ಶಿಷ್ಯೆಯಾದರು. ಒಮ್ಮೆ ಕಲಾಮಂದಿರಕ್ಕೆ ಬಂದಿದ್ದ ಶಿಲ್ಪಿ, ಶ್ರೀ ದೇವಕುಲಂ ವಾದಿರಾಜರು ಕನಕಾ ಅವರು ಆರು ಇಂಚಿನ ಬೇಲೂರು ಶಿಲಾಬಾಲಿಕೆಯ ಚಿತ್ರವನ್ನು ಇಟ್ಟುಕೊಂಡು ನಾಲ್ಕು ಅಡಿ ಎತ್ತರದ ಬಟ್ಟೆಯ ಮೇಲೆ ಅದರ ರೇಖಾಚಿತ್ರವನ್ನು ಬಿಡಿಸುತ್ತಿದ್ದುದನ್ನು ನೋಡಿ ಚಕಿತರಾದರು. ಶ್ರೀ ವಾದಿರಾಜರ ಬಳಿ ಕನಕಾ ಅವರ ಅಣ್ಣ ಜೇಡಿ ಮಣ್ಣಿನ ವಿಗ್ರಹಗಳನ್ನು ಮಾಡುವುದನ್ನು ಕಲಿಯುತ್ತಿದ್ದರು. ಹೀಗಾಗಿ ಶ್ರೀ ವಾದಿರಾಜರ ಕೆಲಸವನ್ನು ನೋಡಲು ಒಮ್ಮೆ ಇವರೂ ಹೋದರು. ಅವರ ಕೆಲಸದಿಂದ ಪ್ರಭಾವಿತರಾಗಿ ಅವರ ಶಿಷ್ಯೆ ಆಗಬೇಕು ಅಂದುಕೊಂಡರು. ಆದರೆ ಮನೆಯಲ್ಲಿ ತಂದೆ-ತಾಯಿಯರು ಒಪ್ಪುತ್ತಿರಲಿಲ್ಲ. ಒಮ್ಮೆ ಕನಕಾ ಅವರ ತಾಯಿ ವಾದಿರಾಜರ ಮನೆಗೆ ಬಂದು ಅವರ ಕೆಲಸವನ್ನು ಕಂಡು ಸಂತಸಗೊಂಡರು. "ನಮ್ಮ ಮಗಳಿಗೂ ಇದನ್ನು ಕಲಿಸಿ" ಎಂದು ಕೇಳಿಕೊಂಡರು.

ಹೀಗೆ ಪ್ರಾರಂಭವಾಯಿತು ಅವರ ಶಿಲ್ಪಕಲೆಯ ಪ್ರಯಾಣ. ಆ ಕಲಿಕೆ ಅವರ ಗುರುಗಳು ಇರುವವರೆಗೂ ಮುಂದುವರೆಯಿತು. ಸಮರ್ಥ ಗುರುಗಳಿಗೆ ಒಳ್ಳೆಯ ಶಿಷ್ಯೆ ಸಿಕ್ಕಿದ್ದು ನಾಡಿನ ಅದೃಷ್ಟ. ಗುರುಗಳು ತಮ್ಮ ಎಲ್ಲ ಕಲೆಯನ್ನು ಶಿಷ್ಯೆಗೆ ಧಾರೆಯೆರೆದು ಕೊಟ್ಟರು. ಇವರು ಅದನ್ನು ವಿಧೇಯರಾಗಿ, ವಿನಮ್ರತೆಯಿಂದ, ಶಿಸ್ತಿನಿಂದ ಒಗ್ಗಿಸಿಕೊಂಡರು. ಹೆಸರಾಂತ ಅನೇಕ ಶಿಲ್ಪಗಳನ್ನು ನಿರ್ಮಿಸಿದರು.

ಕಲ್ಲಿನಲ್ಲಿ ಶಿಲ್ಪಗಳನ್ನು ಕಡೆಯುವ ಪುರುಷ ಪ್ರಧಾನ ಕಲೆಗೆ ಕನಕಾ ಅವರ ಕೋಮಲ ಕರಗಳು ಒಗ್ಗಿಕೊಂಡವು. ಜೊತೆಜೊತೆಗೆ ಬೊತಿಕ್, ಲೆದರ್ ಬೊತಿಕ್, ಸೆರಾಮಿಕ್ ಓವರ್ ಗ್ಲೇಸ್ಡ ಡೆಕೋರೇಷನ್, ಮುಂತಾದ ಕಲೆಗಳು ಕರಗತವಾದವು. ಅವೆಲ್ಲಕ್ಕಿಂತ ಹೆಚ್ಚಾಗಿ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ, ಜೇಡಿಮಣ್ಣಿನಲ್ಲಿ ವಿಗ್ರಹಗಳನ್ನು, ಫಲಕಗಳನ್ನು ಮಾಡುವುದನ್ನು ಗುರು ವಾದಿರಾಜರಿಂದ ಕಲಿತರು. ಇದು ಅವರು ಭಾವ ಶಿಲ್ಪಗಳನ್ನು ಮಾಡುವುದಕ್ಕೆ ಬುನಾದಿಯಾಯಿತು. ಕಂಚಿನ ಶಿಲ್ಪವನ್ನು ಮಾಡಲು ಮೇಣದಲ್ಲಿ ಶಿಲ್ಪಗಳನ್ನು ತಯಾರಿಸುವ ವಿಧಾನವನ್ನೂ ಕಲಿತರು. ಅದೇ ರೀತಿ ಫೈಬರ್ ಗ್ಲಾಸ್ ಬಳಸಿ ಶಿಲ್ಪಗಳನ್ನು ತಯಾರಿಸುವುದರಲ್ಲೂ ಪರಿಣತರಾದರು.

ಗುರು ವಾದಿರಾಜರಿಗೆ ಲಂಡನ್ನಿನಲ್ಲಿ ನಡೆಯುವ ಆರ್ಟ್ ಇನ್ ಆಕ್ಷನ್ ಉತ್ಸವಕ್ಕೆ ಆಹ್ವಾನ ಇರುತ್ತಿತ್ತು. ಅವರು ಅಲ್ಲಿಗೆ ಕೆಲವು ಶಿಲ್ಪಗಳನ್ನು ಮಾಡಿಕೊಂಡು ಹೋಗುತ್ತಿದ್ದರು. ಅವುಗಳ ಕೆತ್ತನೆಯಲ್ಲಿ ಕನಕಾ ಅವರಿಗೂ ಕೆಲಸವಿರುತ್ತಿತ್ತು. ಇದರ ಜೊತೆಗೆ ಆ

ಶಿಲ್ಪದ ಕೆತ್ತನೆಯ ಬಗ್ಗೆ ತಿಳಿಸಲು ವಿವರಗಳನ್ನು ಸರಳ ಇಂಗ್ಲಿಷಿನಲ್ಲಿ ಬರೆದು ಕೊಡುವುದು ಅವರ ಪಾಲಿಗೆ ಬರುತ್ತಿತ್ತು. ಇದು ಅವರು ಸ್ವತಃ ಲಂಡನ್ನಿನ ಆರ್ಟ್ ಇನ್ ಆಕ್ಷನ್ ಉತ್ಸವಕ್ಕೆ ಹೋದಾಗ ಬಹಳ ಸಹಾಯಕ್ಕೆ ಬಂತು.

೧೯೮೮ ಜುಲೈನಲ್ಲಿ ಅವರು ಮೊದಲ ಬಾರಿ ಲಂಡನ್ನಿಗೆ ಹೋಗಿ ಬಂದ ನಂತರ ಅವರಿಗೆ ಕಲಾವಲಯದಲ್ಲಿ, ಮಾಧ್ಯಮಗಳಲ್ಲಿ ಒಳ್ಳೆಯ ಪ್ರಚಾರ ಸಿಕ್ಕಿತ್ತು. ಅಲ್ಲಿಯವರೆಗೆ ಮಾಡಿದ ಅನೇಕ ಉತ್ತಮ ಕಾರ್ಯಗಳು ಈಗ ಮುನ್ನೆಲೆಗೆ ಬರಲು ಪ್ರಾರಂಭವಾದವು. ಇದನ್ನು ಕುರಿತು ಅವರು ಬರೆದಿರುವುದು ಹೀಗೆ:

"ಇದೇ ಸಂಭ್ರಮದಲ್ಲಿ ನಾನು ನನ್ನ ಗುರುಗಳಾದ ಪ್ರೊ. ಜಿ.ವಿ. ಅವರ ಮನೆಗೂ ಹೋದೆ. ನನ್ನ ಮನದಾಳದ ನೋವು ನಲಿವುಗಳನ್ನು ಯಾವಾಗಲೂ ಅವರಲ್ಲಿ ತೋಡಿಕೊಳ್ಳುವುದು ನನ್ನ ವಾಡಿಕೆ. ಈ ಬದಲಾವಣೆಯ ಬಗ್ಗೆ ಹೇಳಿಕೊಂಡಾಗ ಅವರು ನಕ್ಕುಬಿಟ್ಟರು. ನಾನೂ ನಿನ್ನ ಟಿ.ವಿ. ಸಂದರ್ಶನ ನೋಡಿದೆ. ಬಹಳ ಅಚ್ಚುಕಟ್ಟಾದ ಕನ್ನಡದಲ್ಲಿ ಮಾತನಾಡಿದೆ. ಕಲೆಯ ಬಗ್ಗೆ, ನಿನ್ನ ಅನುಭವದ ಬಗ್ಗೆ ಒಳ್ಳೆಯ ನಿರೂಪಣೆಯಿತ್ತು. ಅದು ಕೂಡ ಪ್ರಭಾವ ಬೀರಿದೆ ಎಂದರು. ನಾನಂತೂ ಇದೆಲ್ಲದಕ್ಕೂ ನನ್ನ ಗುರು ವಾದಿರಾಜರೇ ಕಾರಣ ಎಂದು ಹೇಳಿದೆ. ಭಾಷೆಯಿಂದ ಬಂದ ಅನುಭವವನ್ನು ನಿರೂಪಿಸುವುದು, ಕಲೆಯ ಬಗ್ಗೆ ತಿಳಿದುಕೊಂಡು ಮನ ಬಿಚ್ಚಿ ಮಾತನಾಡುವುದು ಮತ್ತು ಹೆಚ್ಚಿನ ವಿಷಯ ಸಂಗ್ರಹ ಮಾಡಿಕೊಂಡಿದ್ದರೆ ವಿಷಯದ ನಿರೂಪಣೆ ಸುಲಭ ಎಂದು ನನ್ನ ಗುರುಗಳು ಕೂಡ ಹೇಳಿದ್ದರು."

ಕನಕಾ ಅವರು ಆ ನಂತರದ ದಿನಗಳಲ್ಲಿ ಭಾರತದ ಅನೇಕ ಕಡೆಗಳಲ್ಲಿ, ಹೊರದೇಶದಲ್ಲಿ ಶಿಲ್ಪಕಲೆಯ ಬಗ್ಗೆ ಪ್ರಾತ್ಯಕ್ಷಿಕೆಗೆ ನಿರ್ದೇಶಕರಾಗಿ ಶಿಬಿರಗಳನ್ನು ನಡೆಸಿಕೊಟ್ಟಿದ್ದಾರೆ. ಅವರ ಕಲಾಕೃತಿಗಳು ಅನೇಕ ದೇವಸ್ಥಾನಗಳಲ್ಲಿ ಆಶ್ರಮಗಳಲ್ಲಿ, ಸಂಘ-ಸಂಸ್ಥೆಗಳಲ್ಲಿವೆ.

ಅವರಿಗೆ ಸಂಗೀತದ ಮೇಲಿನ ಪ್ರೀತಿಯಿಂದಾಗಿ ಗಂಗೂಬಾಯಿ ಹಾನಗಲ್, ವೀಣಾ ದೊರೆಸ್ವಾಮಿ ಅಯ್ಯಂಗಾರ್, ಟಿ ಚೌಡಯ್ಯ, ಮಲ್ಲಿಕಾರ್ಜುನ ಮನ್ಸೂರ್, ಭೀಮಸೇನ ಜೋಶಿ ಮುಂತಾದವರ ಭಾವ ಶಿಲ್ಪಗಳನ್ನು ಮಾಡಿದರು. ಸಾಹಿತಿಗಳಾದ ಕುವೆಂಪು, ಶಿವರಾಮ ಕಾರಂತ, ಅನಕೃ, ತರಾಸು, ಜಿವಿ, ಅನಂತಮೂರ್ತಿ ಮುಂತಾದವರ ಶಿಲ್ಪಗಳು ಅವರ ಕೈಚಳಕದಿಂದ ಮೂರ್ತಿವೆತ್ತಂತೆ ಮೂಡಿಬಂದಿವೆ. ಲಾಲ್ ಬಾಗ್ ಮುಂದೆ ಅವರು ನಿರ್ಮಿಸಿರುವ ಕುವೆಂಪು ಅವರ ಕಂಚಿನ ಪ್ರತಿಮೆ ಇದೆ. ಸಾಂಪ್ರದಾಯಿಕ ಶಿಲ್ಪ ಕೃತಿಗಳಲ್ಲದೆ ಆಧುನಿಕ ಶಿಲ್ಪ ಕೃತಿಗಳನ್ನೂ ಅವರು ರಚಿಸಿದ್ದಾರೆ

ಕನಕಾ ಅವರು ಒಮ್ಮೆ ಕರೆ ಮಾಡಿ ಸುಮಾರು ೧೨ ಗಂಟೆಯ ಸಮಯಕ್ಕೆ ಬರುವುದಾಗಿ ತಿಳಿಸಿದರು. ನನಗೆ "ಅರುಣ, ಪ್ರತಿಮೆ ಇಡಲು ಒಂದು ಸ್ಟೂಲ್ ತೆಗೆದಿಟ್ಟಿರು" ಎಂದು ತಿಳಿಸಿದರು. ಅಂದು ಕನಕಾ-ನಾರಾಯಣಮೂರ್ತಿ ದಂಪತಿಯ ಜೊತೆಗೆ ಶ್ರೀ ಚಿರಂಜೀವಿ ಸಿಂಗ್ ಅವರು ಬಂದಿದ್ದರು. ನಾನು ಇಟ್ಟಿದ್ದ ಪೀಠದ ಮೇಲೆ ಬಿಳಿಯ ಬಟ್ಟೆಯಿಂದ ಮುಚ್ಚಿದ್ದ ಕಲಾಕೃತಿಯನ್ನು ತಂದು ಇಟ್ಟರು. "ಇನ್ನೊಬ್ಬರು ಅತಿಥಿಗಳು ಬಂದೊಡನೆ ಅದರ ಅನಾವರಣ" ಎಂದು ಕನಕಾ ಮೂರ್ತಿ ತಿಳಿಸಿದರು. ಸ್ವಲ್ಪ ಹೊತ್ತಿನಲ್ಲೇ ಶ್ರೀ ಬೆಳಗೆರೆ ಕೃಷ್ಣಶಾಸ್ತ್ರಿಗಳು ಮನೆಗೆ ಬಂದರು. ಪರಸ್ಪರ ಕುಶಲ ಸಂಭಾಷಣೆಯ ನಂತರ, ಕಲಾಕೃತಿಗೆ ಹಾಕಿದ್ದ ಮುಸುಕನ್ನು ಕನಕಾ ಅವರು ತೆಗೆದರು. ಅದು ಹಿರಿಯ ವ್ಯಕ್ತಿಯೊಬ್ಬರ ಭಾವಶಿಲ್ಪವಾಗಿತ್ತು. ಸ್ವಲ್ಪ ಹೊತ್ತು ಅದನ್ನು ದೃಷ್ಟಿಸಿದ ಜೀವಿ ಅವರು "ಇದು ಬೆಳಗೆರೆ ಚಂದ್ರಶೇಖರ ಶಾಸ್ತ್ರಿಗಳಲ್ಲವೇ!" ಎಂದರು. ಬಂದಿದ್ದ ಎಲ್ಲರ ಮುಖಗಳೂ ಅರಳಿದವು. ಶ್ರೀ ಬೆಳಗೆರೆ ಕೃಷ್ಣಶಾಸ್ತ್ರಿಗಳು "ಹೌದು, ನಮ್ಮ ತಂದೆಯವರನ್ನು ಕಂಡಿದ್ದ, ಈಗಿರುವ ಕೆಲವೇ ಮಂದಿಯಲ್ಲಿ ನೀವೂ ಒಬ್ಬರು. ಅದಕ್ಕೆ, ಇದನ್ನು

ನಿಮಗೆ ತೋರಿಸಿ, ನಿಮ್ಮ ಅಭಿಪ್ರಾಯ ಪಡೆಯೋಣ ಎಂದು ಬಂದೆವು. ನಿಮ್ಮ ಅಭಿಪ್ರಾಯ ತಿಳಿದು ಸಂತೋಷವಾಯಿತು. ಇದನ್ನು ನಮ್ಮ ಊರಿನಲ್ಲಿ ಶಾಲೆಯಲ್ಲಿ ಇಡೋಣ ಎಂದಿದ್ದೇವೆ" ಎಂದು ತಿಳಿಸಿದರು.

ಶ್ರೀಮತಿ ಕನಕಾ ಮೂರ್ತಿ ಅವರ ಈ ಎಲ್ಲ ಸಾಧನೆಗಳಿಗೆ ರಾಜ್ಯೋತ್ಸವ ಪ್ರಶಸ್ತಿ, ಜಕಣಾಚಾರಿ ಪ್ರಶಸ್ತಿಗಳಲ್ಲದೆ ಅನೇಕ ಸನ್ಮಾನಗಳು ಅವರನ್ನು ಅರಸಿ ಬಂದಿವೆ.

ಶ್ರೀಮತಿ ಕನಕಾ ಮೂರ್ತಿ ಅವರು ಮೊದಲು ನಂ. ೨೬, ವಾಣಿವಿಲಾಸ ರಸ್ತೆಯಲ್ಲಿ ವಾಸಿಸುತ್ತಿದ್ದರು. ಆ ಮನೆ ನ್ಯಾಷನಲ್ ಕಾಲೇಜು ವೃತ್ತದಿಂದ ಲಾಲ್ ಬಾಗ್ ಕಡೆಗೆ ಹೋಗುವಾಗ ನಾಲ್ಕನೆಯದೋ ಐದನೆಯದೋ ಅವರ ಮನೆ. ಮನೆಯ ಮುಂದಿದ್ದ ಜಾಗದಲ್ಲಿ ಕೆತ್ತನೆಯ ಕೆಲಸ ಮಾಡುತ್ತಿದ್ದರು. ಅವರ ಶಿಲ್ಪದ ಕೆತ್ತನೆ ಯಾವುದಾದರೂ ಸಂಪೂರ್ಣವಾಗುತ್ತಾ ಬಂದರೆ ಅದನ್ನು ಪ್ರೊ. ಜಿವಿ ಅವರ ಗಮನಕ್ಕೆ ತರುತ್ತಿದ್ದರು. ನಾವು ಹೋಗಿ ಅದನ್ನು ನೋಡಿ ಸಂತೋಷಪಟ್ಟು ಬರುತ್ತಿದ್ದೆವು.

ಅವರ ಕೆತ್ತನೆಯ ಇನ್ನೂರಕ್ಕೂ ಹೆಚ್ಚಿನ ವಿವಿಧ ಮೂರ್ತಿಗಳು ದೇಶದ ಅನೇಕ ದೇವಸ್ಥಾನಗಳಲ್ಲಿ ಇಂದು ಪೂಜೆಗೊಳ್ಳುತ್ತಿವೆ. ಕನಕಾ ಮೂರ್ತಿ ಅವರ ಮಹತ್ಸಾಧನೆಯ ಹಿಂದೆ ಮನವರಿತ ಸಂಗಾತಿ, ಆಕೆಯ ಗಂಡ ಶ್ರೀ ನಾರಾಯಣ ಮೂರ್ತಿಗಳ ಅಸದೃಶ್ಯ ಬೆಂಬಲ, ನೆರವುಗಳನ್ನು ನಾವು ಎಷ್ಟು ಹೊಗಳಿದರೂ ಕಡಿಮೆಯೇ. ಜೊತೆಗೆ ಅವರ ಮಗಳು ಸುಮತಿಯ ಪ್ರೀತಿ ನಿರಂತರ ಪ್ರೋತ್ಸಾಹ ಅವರಿಗೆ ಸಿಕ್ಕಿತ್ತು.

ಒಮ್ಮೆ ನಮ್ಮ ತಾಯಿಯವರು ಗೌರಿ ಪೂಜೆಗೆ ಒಂದು ವಿಗ್ರಹ ಬೇಕು ಎಂದು ಕನಕಾ ಅವರಿಗೆ ವಿನಂತಿಸಿಕೊಂಡರು. "ಕನಕಮ್ಮ ನನಗೆ ನಮ್ಮ ಮೈಸೂರು ಕಡೆಯ ಗೌರಿಯ ಕಳೆ ಇರುವ ಗೌರಿ ವಿಗ್ರಹವನ್ನು ಮಾಡಿಕೊಡು" ಎಂದಿದ್ದರು. ಆ ವರ್ಷದ ಗೌರಿ ಪೂಜೆಯ ವೇಳೆಗೆ ಸುಂದರ ಗೌರಿಯ ವಿಗ್ರಹವನ್ನು ನಮ್ಮ ತಾಯಿಯ ಕೈಗೆ ಕೊಟ್ಟು "ನೀವು ಹೇಳಿದ್ದು ಒಳ್ಳೆಯದಾಯಿತು. ಇದಕ್ಕೆ ಅನೇಕ ಕಡೆಗಳಿಂದ ಬೇಡಿಕೆಗಳು ಬಂದಿವೆ" ಎಂದಿದ್ದರು. ನಮ್ಮ ತಾಯಿಯವರು ಆ ವರ್ಷ ಸಂತೋಷದಿಂದ ಗೌರಿ ಪೂಜೆ ಮಾಡಿದ್ದರು. ಆ ವಿಗ್ರಹ ಈಗಲೂ ನಮ್ಮ ಮನೆಯಲ್ಲಿದೆ; ಹಬ್ಬದಲ್ಲಿ ಪೂಜೆಗೊಳ್ಳುತ್ತದೆ.

ಉದ್ದ-ಅಗಲ ಮಾತ್ರ ಇರುವ ಹಾಳೆಯಲ್ಲಿ ಸ್ಪಷ್ಟವಾಗಿ ಬಿಡಿಸಿದ ರೇಖಾಚಿತ್ರವನ್ನು ಮೂರು ಆಯಾಮಗಳ ಘನಾಕೃತಿಯಾಗಿ ಪರಿಭಾವಿಸಿ, ನಿರ್ಜೀವ ಕಲ್ಲಿನಲ್ಲಿ, ಚಿತ್ರದ ಅನೇಕ ಪಟ್ಟು ದೊಡ್ಡದಾದ ದೇವರ ಮೂರ್ತಿಯನ್ನು ಕಣಸಿಕೊಂಡು ಕನಕಾ ಅವರು ಕಡೆದ ವಿಗ್ರಹಗಳು ಚೈತನ್ಯದ ಮೂರ್ತಿ ಸ್ವರೂಪದಂತೆ ಇರುತ್ತಿದ್ದವು

ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬದಿಂದ ಬಂದ ಹೆಣ್ಣುಮಗಳು, ಕುಲಕಸುಬಿಗೆ – ಅದರಲ್ಲೂ ಗಂಡಸರಿಗೆ ಸೀಮಿತವಾಗಿದ್ದ ಶಿಲ್ಪಕಲೆಯನ್ನು ತನ್ನದಾಗಿಸಿಕೊಂಡು, ಅದನ್ನು ಬೆಳೆಸಲು ನಿಂತದ್ದು ಒಂದು ಪವಾಡದಂತೆ ಕಾಣುತ್ತದೆ.

ಮೇ ೧೪, ೨೦೨೧ರಂದು ಅವರು ತೀರಿಕೊಂಡಾಗ ಕರ್ನಾಟಕದ ಶಿಲ್ಪಕಲೆಯ ಒಂದು ಮುಖ್ಯ ಅಧ್ಯಾಯ ಮುಗಿದುಹೋಯಿತು. ನಮಗೆ ಹತ್ತಿರದ ಬಂಧುವನ್ನು ಕಳೆದುಕೊಂಡು ಅನುಭವ. ಅವರ ಹಲವು ಕಲಾಕೃತಿಗಳು ನಮ್ಮ ಮನೆಯಲ್ಲಿವೆ. ಅವನ್ನು ನೋಡಿದಾಗಲೆಲ್ಲಾ ಕನಕಾ ಅವರ ನೆನಪುಗಳು ಹಸಿರಾಗೇ ಇರುತ್ತವೆ.

(ಆಧಾರ: "ಹೌದೇ? ಇದು ನಾನೇ!" ಶ್ರೀಮತಿ ಕನಕಾ ಮೂರ್ತಿ ಅವರ ಆತ್ಮಚರಿತ್ರೆ; ಭಾರತೀಯ ವಿದ್ಯಾ ಭವನದಿಂದ ಪ್ರಕಟಿತ.)

ಹೂ ಅರಳಿ....

ಬ್ರಹ್ಮ ಕಮಲ

(SAUSSUREA OBVALLATA)

- **ರಾಧಿಕಾ ಗುಜ್ಜರ್**





'ಬ್ರಹ್ಮ ಕಮಲವು ಉತ್ತರಾಖಂಡ ರಾಜ್ಯದ, ರಾಜ್ಯ ಪುಷ್ಪವೆಂದು ಗೌರವಿಸಲ್ಪಟ್ಟಿದೆ'.

ಹೌದು, ತಾವು ಸರಿಯಾಗಿ ಕೇಳಿದಿರಿ. ಇದೇ ಕಾರಣಕ್ಕಾಗಿ ಈ ಪುಷ್ಪವು ನನ್ನ ಗಮನ ಸೆಳೆಯಿತು.

ಬ್ರಹ್ಮ ಕಮಲ ಹೂಬಿಡುವ ಸಸ್ಯವಾಗಿದೆ. ವರ್ಷ ವರ್ಷವೂ ಬೆಳೆಯುತ್ತಾ ಸಾಗುವ, ಆರೈಕೆ ಚನ್ನಾಗಿದ್ದರೆ ದೀರ್ಘಕಾಲ ಬಾಳುವ, ಒಂದು ಅಡಿಯಿಂದ, ಮೂರು ನಾಲ್ಕು ಮೀಟರ್ ವರೆಗೂ ಊರ್ಧ್ವ ಬೆಳೆಯುವ ಗಿಡ. ಸಸ್ಯ ವಿಜ್ಞಾನದಲ್ಲಿ, ಬ್ರಹ್ಮ ಕಮಲ ಹೂವಿನ ಗಿಡದ ಹೆಸರು ಸಾಸ್ಸಿಯ ಅಬ್ವಲಾಟ (SAUSSUREA OBVALLATA). ಇದು ಅಸ್ಟರೇಸಿಐ (ASTERACEAE) ಎಂಬ ಸಸ್ಯ ಜಾತಿ ಅಥವಾ ಸಂತತಿಗೆ ಸೇರುತ್ತದೆ. ನಮ್ಮ ಹಿಮಾಲಯ ಪ್ರದೇಶವು ಇದರ ಹುಟ್ಟು ಸ್ಥಳ. ಭಾರತದಲ್ಲಿ ಇದು ಹಿಮಾಲಯ, ಹಿಮಾಚಲ ಪ್ರದೇಶ ಹಾಗೂ ಉತ್ತರಾಖಂಡದಲ್ಲಿ ಹೇರಳವಾಗಿ ಕಂಡುಬರುತ್ತದೆ. ಅಲ್ಲದೇ, ಮಂಗೋಲಿಯಾ, ಉತ್ತರ ಬರ್ಮಾ ಹಾಗೂ ನೈರುತ್ಯ ಚೀನಾದಲ್ಲೂ ಸಹಾ ಬೆಳೆಯುವುದನ್ನು ಕಾಣುತ್ತೇವೆ. ಹಿಮಾಲಯದ ಸಾಲಿನ ೪,೫೦೦ ಮೀಟರುಗಳ ಎತ್ತರದ ಪ್ರದೇಶದಲ್ಲಿ ಮೂಲವಾಗಿ ಕಂಡುಬಂದ ಸಸ್ಯ ಇದಾಗಿದೆ.

ಕಳ್ಳಿ, ಪಾಪಾಸು ಕಳ್ಳಿ ಜಾತಿಯ ಈ ಸಸ್ಯಕ್ಕೆ, ಬೇರುಗಳ ನಂತರ ನೇರ, ದಪ್ಪ, ಹಸಿರು ಕಾಂಡ ಹಾಗೂ ದಪ್ಪ ಎಲೆ ಬೆಳೆಯುತ್ತದೆ. ಕಾಂಡ ಹಾಗೂ ಎಲೆ ಒಂದೇ ಅಚ್ಚ ಹಸಿರು ಬಣ್ಣದಿಂದ ಕೂಡಿರುತ್ತದೆ. ಈ ಹಸಿರು ಅಗಲ ಎಲೆಗಳಿಗೆ ಅಲ್ಲಲ್ಲಿ ಚುಕ್ಕೆಯಂತಹ ರಂಧ್ರ ಭಾಗಗಳಿದ್ದು, ಇವು ಈ ಅಗಲವಾದ ದಪ್ಪ ಎಲೆಯನ್ನು ಕಿತ್ತು ಬೇರೆಡೆ ಮಣ್ಣಲ್ಲಿ ಹೂತಾಗ, ಮತ್ತೆ ಬೇರು ಹಿಡಿದು ಗಿಡವಾಗಿ ಬೆಳೆಯಲು ಸಹಾಯಕವಾಗಿವೆ. ಈ ರಂಧ್ರಗಳಿಂದಲೇ ಉದ್ದ ದಂಟು ಮುಂಬೆಳೆದು, ಸುಮಾರು ಒಂದು ಅಡಿ ಉದ್ದದ ಬಾಗಿದ ಈ ದಂಟಿಗೆ ಬ್ರಹ್ಮ ಕಮಲ ಹೂವು ಬಿಡುತ್ತದೆ. ಪ್ರಖರ ಸೂರ್ಯ ಕಿರಣಕ್ಕಿಂತ, ಕೊಂಚ ನೇರ ಬೆಳಕು ಬೀಳುವಂತಹ ಜಾಗದಲ್ಲಿಟ್ಟು, ೩-೪ ದಿನಗಳಿಗೊಮ್ಮೆ ನೀರು ಹಾಕಿದರೂ ಸಾಕು. ಕಳ್ಳಿ ಜಾತಿಯ ಸಸ್ಯವಾದ ಕಾರಣ ಹೆಚ್ಚು ನೀರು ಗಿಡದ ಆರೋಗ್ಯವನ್ನು ಕೆಡಿಸುತ್ತದೆ.

ಮಧ್ಯ ಮಾನ್ಸೂನ್ ನಲ್ಲಿ, ಅಂದರೆ ಜೂನ್ ಮಧ್ಯಭಾಗ - ಜುಲೈ ತಿಂಗಳಿಂದ ಸೆಪ್ಟೆಂಬರ್-ಅಕ್ಟೋಬರ್ ಮಧ್ಯದವರೆಗೂ ಹೂ ಬಿಡುತ್ತದೆ. ಇದು ಸಂಜೆಗೆ ಅರಳುವ ಹೂವು. ಸೂರ್ಯಾಸ್ತದ ನಂತರ ಸಂಜೆ ೭ ಗಂಟೆಯಿಂದ, ರಾತ್ರಿ ೯ ರವರೆಗೆ ಸುಮಾರು ಎರಡು ಗಂಟೆ ಕಾಲಾವಕಾಶದಲ್ಲಿ ಅರಳುತ್ತದೆ. ಇದರ ತೊಟ್ಟಿನ ಭಾಗವು ನೇರಳೆ ಅಥವಾ ಹಳದಿ ಮಿಶ್ರಿತ ಕಂದು ಬಣ್ಣದ ಅಸಂಖ್ಯ ಕೂದಲಿನಂತಹ, ಕೊಂಚ ಒರಟು ಎಸಳುಗಳಿಂದ ಕೂಡಿದ್ದು, ಮೊಗ್ಗನ್ನು ಆವರಿಸಿರುತ್ತವೆ. ಮೊಗ್ಗು ಪೂರ್ಣ ಅರಳಿದಾಗ, ಇವು ಹೂವಿನ ಕೆಳ ಭಾಗದಲ್ಲಿ ಕಣ್ಮರೆಯಾಗುತ್ತವೆ. ಹೂವು ಅಚ್ಚ ಬಿಳಿಯ ಅಸಂಖ್ಯ ಏಕಮುಖ ಅಳತೆಯ ದಳಗಳಿಂದ ಕೂಡಿರುತ್ತದೆ. ಸುಮಾರು ೮ ಇಂಚು ಅಗಲ ಅರಳುವ, ಬೊಗಸೆ ತುಂಬುವ ಅಳತೆಯ ಸೌಂದರ್ಯದ ಖನಿಯಿದು. ಮಧ್ಯದಲ್ಲಿ ನಕ್ಷತ್ರಾಕಾರದ ಪರಾಗದ ಕೊಂಬು ಇದ್ದು, ಪರಾಗದ ಕಡ್ಡಿಗೂ ಸಣ್ಣ ಎಸಳಿರುತ್ತವೆ. ಇದರ ಪರಾಗಸ್ಪರ್ಶಕಗಳು ಉಭಯ ಲಿಂಗಿಗಳಾಗಿದ್ದು, ಗಂಡು ಮತ್ತು ಹೆಣ್ಣು ಪರಾಗಗಳು ಜೊತೆಯಲ್ಲೇ ಇರುತ್ತವೆ. ಹೂವಿಗೆ ಒಂದು ಹಿತವಾದ ತುಸುವೇ ಪರಿಮಳವಿದ್ದು, ಇದು ರಾತ್ರಿಯ ಕೀಟಗಳನ್ನು ತನ್ನತ್ತ ಸೆಳೆಯಲು ಹಾಗೂ ತನ್ಮೂಲಕ, ಪರಾಗಸ್ಪರ್ಶ ಕ್ರಿಯೆಗೆ ಸಹಾಯಕವಾಗಿದೆ. ಹೂವು ಕೇವಲ ಒಂದು ರಾತ್ರಿ ಪೂರ್ಣ ಅರಳಿದ್ದು, ಮುಂಜಾನೆಗೆ ಬಾಡುತ್ತದೆ. ಆದ್ದರಿಂದಲೇ ಇದನ್ನು ರಾತ್ರಿಯ ರಾಣಿ ಎನ್ನುತ್ತಾರೆ.

ಟಿಬೇಟಿಯನ್ನರ ವೈದ್ಯಕೀಯದಲ್ಲಿ, ಬ್ರಹ್ಮ ಕಮಲ ಸಸ್ಯ ಹಾಗೂ ಹೂವಿಗೆ ಬಹಳ ವಿಶೇಷ ಸ್ಥಾನವಿದೆ. ಸಹ್ ದು ಗೊ ಘೂ (SAH-DU GO-GHOO) ಎಂದು ಹೆಸರಾದ ಈ ಸಸ್ಯವು ರುಚಿಯಲ್ಲಿ ಕೊಂಚ ಕಹಿ ಇರುತ್ತದೆ. ಮೂತ್ರಾಂಗ ಹಾಗೂ ಜನನೇಂದ್ರಿಯಗಳಿಗೆ ಸಂಬಂಧಿಸಿದ ಅಸ್ವಸ್ಥತೆಗಳನ್ನು ಗುಣಪಡಿಸಲು ಸಸ್ಯವು ಉಪಯೋಗಿಸಲ್ಪಡುತ್ತದೆ. ಹೂವನ್ನು ಚರ್ಮ ರೋಗಗಳ ಔಷಧಿಗೆ ಹಾಗೂ ಹೂವಿನ ಸೂಪನ್ನು, ಯಕೃತ್ತು ಸಂಬಂಧಿ ಉಪಚಾರಕ್ಕೆ ಬಳಸುತ್ತಾರೆ.

ಪುರಾಣದ ಚಿತ್ರಣದಲ್ಲಿ, ಬ್ರಹ್ಮನು ವಿಷ್ಣುವಿನ ಹೊಕ್ಕಳಿನಿಂದ ಹೊರಟ ಉದ್ದ ಬಾಗಿದ ದಂಟಿನ ತುದಿಯ ಶುಭ್ರ ಕಮಲದಲ್ಲಿ ಆಸೀನನಾಗಿರುತ್ತಾನೆ. ಈ ಹೋಲಿಕೆಯ ಕಾರಣದಿಂದಾಗಿಯೇ, ಈ ಹೂವಿಗೆ ಬ್ರಹ್ಮ ಕಮಲವೆಂದು ಹೆಸರು ಬಂದಿದೆ. ಬ್ರಹ್ಮನು, ಹೆಣ್ಣು ಹಾಗೂ ಗಂಡನ್ನು ಸೃಷ್ಟಿಸುವ ಸೃಷ್ಟಿಕರ್ತ. ಬ್ರಹ್ಮ ಕಮಲದಲ್ಲಿಯೂ, ಗಂಡು ಹಾಗೂ ಹೆಣ್ಣು ಪರಾಗಗಳು ಒಟ್ಟಿಗೇ ಇರುತ್ತವೆ. ಹಿಮಾಲಯದ ಗುಡ್ಡಗಾಡಿನ ಪವಿತ್ರ ಯಾತ್ರಾ ಸ್ಥಳಗಳಾದ ಕೇದಾರನಾಥ ಹಾಗೂ ಬದರಿನಾಥದಲ್ಲಿ, ಬ್ರಹ್ಮ ಕಮಲವನ್ನು ಪೂಜಾರ್ಚನೆಯ ಭಾಗವಾಗಿ ದೇವರಿಗೆ ಅರ್ಪಿಸುತ್ತಾರೆ.

ಇಷ್ಟೊಂದು ವಿಶೇಷತೆಗಳನ್ನು ಹೊಂದಿರುವ ಪುಷ್ಪ, ಕೇವಲ ರಾತ್ರಿಯ ರಾಣಿಯಲ್ಲ, ಶುಭ್ರ ಶ್ವೇತ ಸರಸ್ವತಿ.

ಹನಿಗವನಗಳು

ಮುತ್ತು

ನನ್ನಾಕೆಗೆ
ಮುತ್ತು ಎಂದರೆ
ತುಂಬಾ ಆಸೆ
ಸದಾ ಬೇಕು ಬೇಕು
ಅನ್ನುತ್ತಿರುತ್ತಾಳೆ
ಓಲೆ, ನತ್ತು,
ಸರಕ್ಕಾಗಿ.

ಅದೃಷ್ಟವಂತ

ಗಂಡಸರಲ್ಲಿ
ಅಕ್ಕಸಾಲಿಗನೇ
ತುಂಬಾ ಅದೃಷ್ಟವಂತ.
ಬೇಕಾದಷ್ಟು ಚೆಲುವೆಯರು
ಅವನಿಗೆ
ಮುತ್ತು ಕೊಟ್ಟು
ಓಲೆ, ನತ್ತು, ಸರ
ಮಾಡಿಸಿಕೊಳ್ಳುತ್ತಾರೆ

- ಜಿಬಿಕೋಟೆ ಅನಂತ್

ನಗೆಬರಹ

Indian ಆಯಾ Service

- ಎಂ.ಎಸ್. ನರಸಿಂಹಮೂರ್ತಿ

`ವರ್ಣ ಮಾತ್ರಂ ಕಲಿಸಿದಾತಂ ಗುರು`

ಒಂದಕ್ಷರ ಕಲಿಸಿದಾತ ಗುರು ಅಂತ ಕವಿಗಳು ಹೇಳಿದ್ದಾರೆ. ಅದು ಗೆಳೆಯ, ಅಪ್ಪ, ಅಮ್ಮ, ಹೆಂಡತಿ, ಎದುರು ಮನೆ ಆಂಟಿ ಯಾರು ಬೇಕಾದ್ರೂ ಆಗಿರಬಹುದು.

ಇವರೆಲ್ಲರಿಗಿಂತ ಹೆಚ್ಚಿನ ಪಾಟ ಕಲಿಸಿ ಲೋಕಕ್ಕೇ ಗುರು ಆಗಿದ್ದು ಕೊರೊನಾ. ಕೋವಿಡ್ ಪಾಪರ್ ಫೀಲ್ಡ್ ಕಲಿಸಿದ ಪಾಟ ಇದುವರೆಗೆ ಯಾವ ಡೇವಿಡ್ ಕಾಪರ್ ಫೀಲ್ಡ್ ಕಲಿಸಿರಲಿಲ್ಲ. ಒಗ್ಗಟ್ಟಾಗಿ ಬಾಳೋದು, ಹಂಚಿಕೊಂಡು ತಿನ್ನೋದು, ಮನೆಯಲ್ಲೇ ಇದ್ದು ಮನೆಮಂದೀನ ಪ್ರೀತಿ ಮಾಡೋದು, ಅನಗತ್ಯ ಖರ್ಚುಗಳಿಗೆ ಮಂಗಳ ಹಾಡೋದು, ಇವೆಲ್ಲಕ್ಕೂ ಬುನಾದಿ ಹಾಕಿದ್ದು ಕೊರೊನಾ ಮಾತ್ರ.

ಕೊರೊನಾ ಮಾಡಿದ್ದಾದರೂ ಏನು ?

ಅಂಕೆ ತಪ್ಪಿ ನಡೆಯುತ್ತಿದ್ದ ಯುವ ಪೀಳಿಗೆಯ ಸ್ವೇಚ್ಛಾಚಾರಕ್ಕೆ ಅಂಕುಶ ಹಾಕಿತು. ಹುಡುಗ-ಹುಡುಗಿ ಪರಸ್ಪರ ನೋಡಿದ್ರೆ ಭಯಪಡೋ ಲೆವೆಲ್ಗೆ ತಂದಿತು. ಮುತ್ತು ಕೊಡೋಕೂ ಮಾಸ್ಕ್ ಹಾಕ್ಕೋಬೇಕು, ಹಗ್ ಮಾಡೋಕೂ ಪಿ.ಪಿ.ಇ. ಕಿಟ್ ಹಾಕ್ಕೋಬೇಕು! ಈ ಮಟ್ಟಕ್ಕೆ ನಮಗೆ ಸೋಷಿಯಲ್ ಡಿಸ್ಟೆನ್ಸ್ ಪಾಟ ಕಲಿಸಿದೆ. ಭಾರತೀಯ ಸಂಸ್ಕೃತಿ ಮತ್ತೆ ನೆನಪಿಸಿದೆ. ಈ ಮೊದಲು ಗೆಳೆಯ, ಗೆಳತಿಯರು ಭೇಟಿ ಆದಾಗ ಕೈ ಕೈ ಬಡಿಯೋದು, ಎಲ್ಲೆಲ್ಲೋ ಹಿಡಿಯೋದು, ಹಗ್ ಮಾಡೋದು, ಲೆಗ್ ಎಳೆಯೋದು ಇವೆಲ್ಲಾ ಇತ್ತು. ಆದ್ರೆ ಈಗ ಎರಡೂ ಕೈ ಎತ್ತಿ `ಅಹಂ ಭೋ ಅಭಿವಾದಯೇ` ಅಂತ ಗೌರವದಿಂದ ನಮಸ್ಕಾರ ಮಾಡ್ತಾರೆ. ಅಮೆರಿಕದ ಪ್ರೆಸಿಡೆಂಟ್ ಸಹ ನಮ್ಮ ಸಂಪ್ರದಾಯ ಕಲಿತಿದ್ದಾರೆ. ಕೊರೊನಾ ಎಫೆಕ್ಟ್ ಇದು.

ವೈರಾಣು ಚೀನಾದಿಂದ ಪ್ರಾರಂಭ ಆಯ್ತು ಅಂತ ಜನ ಹೇಳ್ತಾರೆ. ಉಗಮ ಎಲ್ಲಿಂದ ಆದರೂ ಅದರ ನಡೆ ಸುಗಮವಾಗಿತ್ತು. ಸುತ್ತಮುತ್ತಲಿನ ರಾಷ್ಟ್ರಗಳಿಗೆ ಸುಲಭವಾಗಿ ಹಬ್ಬಿತ್ತು. ಮನೆಯಲ್ಲಿದ್ದವರನ್ನೂ ಬಿಡದೆ ತಾನೇ ಬಾಗಿಲು ತಟ್ಟಿ ಬಂದು ಮಾತಾಡಿಸಿತು. Work from Home ಅನ್ನುವ ಹೊಸ ಕಲ್ಚರ್ ಕಲಿಸಿಕೊಟ್ಟಿತು. ಮಕ್ಕಳಿಗೆ ಆನ್ಲೈನ್ ಕ್ಲಾಸಸ್ ನಡೆಯುವಂತೆ ಮಾಡಿತು.

ಕಳೆದ ಒಂದೂವರೆ ವರ್ಷದಲ್ಲಿ ತಿನ್ನುವುದಕ್ಕೆ ಬಿಟ್ಟರೆ ಬೇರೆ ಯಾವುದಕ್ಕೂ ಹಣ ಖರ್ಚು ಮಾಡಿಲ್ಲ. ಮಾಲು-ಥಿಯೇಟರುಗಳಿಲ್ಲ, ಬಾರು-ಸ್ವಿಮ್ಮಿಂಗ್ ಪೂಲುಗಳಿಲ್ಲ, ಪೋಲಿ ಅಲೆಯಲು ಬ್ರಿಗೇಡು, ಎಂ.ಜಿ.ರೋಡುಗಳಿಲ್ಲ. ಅನಗತ್ಯ ಖರ್ಚು ಮಾಡಲು ಡಿಸ್ಕೌಂಟ್ ಸೇಲ್ಗಳು ಇಲ್ಲ. ಮನೆಯಲ್ಲೇ ಇದ್ದಾಗ ಎಷ್ಟು ಹಣ ಖರ್ಚು ಮಾಡಲು ಸಾಧ್ಯ ?

Work from Home ಈಗ ಭಾರತದಲ್ಲಿ ಅತ್ಯಂತ ಜನಪ್ರಿಯವಾಗಿದೆ. ಆಫೀಸುಗಳು ಮತ್ತೆ ಓಪನ್ ಆದರೂ ಅಲ್ಲಿಗೆ ಹೋಗಿ ಕೆಲಸ ಮಾಡಲು ಹಿಂಜರಿಯುವ ಮಟ್ಟಿಗೆ ಜನ ಮನೆಗೆ ಅಡ್ಜಸ್ಟ್ ಆಗಿದ್ದಾರೆ. ಮನೆಯಾದರೆ ಲ್ಯಾಪ್ಟಾಪ್ ಮುಂದಿಟ್ಟುಕೊಂಡು ಯಾವುದೇ ಪೋಸಲ್ಲಿ ನಿಲ್ಲಬಹುದು, ಕೂರಬಹುದು, ಮಲಗಬಹುದು, ತೂಕಡಿಸಬಹುದು. ಯಾರೂ ಕೇಳುವಂತಿಲ್ಲ.

ಇನ್ನು ಮನೆಯಲ್ಲಿದ್ದಾಗ ಬರೀ ಚೆಡ್ಡಿ, ನೆಟ್ ಬನಿಯನ್ನು ನಿತ್ಯದ ಯೂನಿಫಾರಂ! ಹೆಣ್ಣು ಮಕ್ಕಳಾದರೆ ಹಗಲು ರಾತ್ರಿ ಎನ್ನದೆ ನೈಟಿ! ಪ್ಯಾಂಟು, ಷರಟಿಗೆ ಇಸ್ತ್ರಿ ಬೇಡ. ಸೀರೆಗೆ ಸ್ಟಾರ್ಚ್ ಬೇಡ. ರೇಷ್ಮೆ ಸೀರೆಗಳಿಗೆ ಪಾಲಿಷ್ ಬೇಡ. ಹೊಸ ಜವಳಿಗೆ ಡಿಮ್ಯಾಂಡ್ ಇಲ್ಲ. ಹೊಸ ಬಟ್ಟೆ ಕೊಳ್ಳಲೇ ಇಲ್ಲ. ಫ್ಯಾಷನ್ ಬಟ್ಟೆಗಳ ಅಂಗಡಿಗಳು, ಮಾಲ್ಗಳು ಓಪನ್ ಆಗಲೇ ಇಲ್ಲ.

ಕೊರೊನಾ ಕ್ರಮೇಣ ಕಡಿಮೆ ಆಗಿ ಈಗ ನಾವು ಮಾಮೂಲಿ ಜೀವನಕ್ಕೆ ಬಂದಿದ್ದೇವೆ. ಆಫೀಸುಗಳು ದಿಢೀರನೆ ಓಪನ್ ಆಗಿ ನೌಕರರನ್ನು ಬರಮಾಡಿಕೊಂಡಾಗ ಕೆಲವು ಅಪಾಯಗಳೂ ಸಂಭವಿಸಬಹುದು.

ನನ್ನ ಗೆಳೆಯ ವಿಶ್ವ ಒಂದು ವರ್ಷ ಮನೆಯಲ್ಲಿ Work from Home scheme ನಲ್ಲಿ ಕೆಲಸ ಮಾಡಿ ನಿರ್ವಾಹವಿಲ್ಲದೆ ಆಫೀಸಿಗೆ ಹೋದ. ಆಗಾಗಲೇ ಏಳೆಂಟು ಮಂದಿ ಆಫೀಸಲ್ಲಿ ಕುಳಿತು ಕೆಲಸ ಮಾಡುತ್ತಿದ್ದರು. ಆಫೀಸಿಗೆ ಹೋದ ಕೂಡಲೇ ವಿಶ್ವ ಪ್ಯಾಂಟು, ಷರಟು ಕಳಚಿ ಗೂಟ ಎಲ್ಲಿದೆ ಎಂದು ಹುಡುಕಿದ. ಎಲ್ಲರಿಗೂ ಗಾಬರಿ. ಯಾಕೆ ಹೀಗೆ ಎಂದು ಸಹೋದ್ಯೋಗಿ ಕೇಳಿದ.

`ಪ್ಯಾಂಟು, ಷರಟು ತೆಗೆದು ಗೂಟಕ್ಕೆ ಹಾಕಿ ಆಮೇಲೆ ತಾನೇ ಕೆಲಸ ಮಾಡೋದು?'.

`ಅಯ್ಯೋ, ಇದು ಆಫೀಸ್ ಕಣಪ್ಪಾ, ಮನೆ ಅಲ್ಲ. ಲೇಡೀಸ್ ಕೂಡ ವರ್ಕ್ ಮಾಡ್ತಾ ಇದ್ದಾರೆ. ಬೇಗ ಬಟ್ಟೆ ಹಾಕ್ಕೋ' ಎಂದಾಗ ಸಂಕೋಚದಿಂದ ವಿಶ್ವ ಡ್ರೆಸ್ ಧರಿಸಿದ. ವಿಶ್ವ ಪ್ಯಾಂಟು, ಷರಟು ತೊಟ್ಟು ಆಫೀಸಿನ ಲ್ಯಾಪ್ಟಾಪ್ ಮುಂದೆ ಕೂತ. ಮೈಗೆ ಬಟ್ಟೆ ಭಾರ ಎನ್ನಿಸಿತು. ಬಹುಕಾಲವಾದ ಮೇಲೆ ವಿಶ್ವನನ್ನು ಕಂಡ ಸಹೋದ್ಯೋಗಿ ಮೀನಾಕ್ಷಿ ಕಣ್ಣು ಮಿಟುಕಿಸಿದಳು. ಏನು ಮಿಟುಕಿಸಿದರೂ ಹತ್ತಿರ ಬರುವಂತಿಲ್ಲ, ಕೆನ್ನೆ ಚಿವುಟುವಂತಿಲ್ಲ, ಕೈ ಕುಲುಕುವಂತಿಲ್ಲ. ಕೊರೊನಾ ಎಲ್ಲಕ್ಕೂ ತಡೆ ಒಡ್ಡಿದೆ.

`ಮನೇಲಿ ಕೆಲ್ಸ ಜಾಸ್ತೀನಾ ಮೀನಾಕ್ಷಿ ?' ಎಂದ.

`ನಮ್ಮತ್ತೆ ಇಲ್ವಲ್ಲ ?'

`ಕೊರೊನಾನಾ?' ಎಂದ ವಿಶ್ವ ಗಾಬರಿಯಿಂದ.

`ಛೇ, ಬಿಡ್ತು ಅನ್ನಿ. ನಮ್ಮತ್ತೆ I.A.S. ಮಾಡೋಕೆ ಅಮೆರಿಕಕ್ಕೆ ಹೋಗಿದ್ದಾರೆ' ಎಂದಳು. ಈ ವಯಸ್ಸಲ್ಲಿ ಅತ್ತೆ I.A.S. ಮಾಡ್ತಾರೆ ಅಂದ್ರೆ ನಂಬಲು ಸಾಧ್ಯವೇ ಇಲ್ಲ. ಆಫೀಸ್ನ ಎಲ್ಲರೂ ಗಾಬರಿಯಿಂದ ಮೀನಾಕ್ಷಿಯತ್ತ ನೋಡಿದರು.

`ಏನು I.A.S. ಅಂದ್ರೆ? ಅದು ಇಂಡಿಯಾದಲ್ಲಿ ತಾನೇ ಮಾಡ್ಬೇಕು?' ಎಂದ.

`ಇಲ್ಲ, I.A.S. ಎಂದರೆ Indian Ayaa Service ಅಂದರೆ ಬಾಣಂತನ' ಎಂದಳು.

ಅಮೆರಿಕದಲ್ಲಿರುವ ಮಗಳು ಹೆತ್ತಾಗ ಬಾಣಂತನ ಮಾಡಲು ಆಯಾಗಳನ್ನು ಇಟ್ಟುಕೊಳ್ಳುವಂತಿಲ್ಲ. ಇಟ್ಟುಕೊಂಡರೂ ಲಕ್ಷ ಲಕ್ಷ ಸಂಬಳ ಅವರಿಗೆ ಕೊಡಬೇಕಾಗುತ್ತದೆ. ಇದಕ್ಕೆ ಸುಲಭ ಉಪಾಯ ಅಂದರೆ ಅಪ್ಪ, ಅಮ್ಮನನ್ನು ಖರ್ಚಿಲ್ಲದೆ ಕರೆಸಿಬಿಡುವುದು. ಅವರು ಆರು ತಿಂಗಳಿದ್ದು ಮಗುವನ್ನು ಸುಧಾರಿಸಿ ಬಂದುಬಿಡುತ್ತಾರೆ. ಲಕ್ಷಾಂತರ ರೂಪಾಯಿ ಅವರಿಗೆ ಉಳಿಯುತ್ತದೆ. ಮೊಮ್ಮಕ್ಕಳ ಪ್ರೀತಿ ಇವರಿಗೆ ಸಿಗುತ್ತದೆ. ಅಜ್ಜಿ ಇರುವಾಗ ಬೇರೆ ಆಯಾ ಬೇಡವೇ ಬೇಡ. ಇದು ಈಗಿನ ಟ್ರೆಂಡು.

Indian Ayaa Service ಇತ್ತೀಚೆಗಂತೂ ಎಲ್ಲಾ ದೇಶಗಳಲ್ಲೂ ಜನಪ್ರಿಯ ಆಗಿದೆ. ಭಾರತದ ಮಹಿಳೆ ತನ್ನ ಮಗಳ ಬಾಣಂತನವನ್ನು ಅತ್ಯಂತ ಅಚ್ಚುಕಟ್ಟಾಗಿ ಪ್ರೀತಿಯಿಂದ ನಿರ್ವಹಿಸಬಲ್ಲಳು. ವೈದ್ಯರೇ ಬೇಡ, ತಾನೇ ಸ್ವತಃ ಹೆರಿಗೆ ಮಾಡಿಸಲೂ ಸಹ ಸಿದ್ಧ. 15000 ಹೆರಿಗೆಗಳನ್ನು ಮಾಡಿಸಿದ ಪಾವಗಡದ ಸೂಲಗಿತ್ತಿ ನರಸಮ್ಮ ಪದ್ಮಶ್ರೀ ಪ್ರಶಸ್ತಿ ಪಡೆದಿದ್ದರು.

ವಿಶ್ವನ ಅಜ್ಜಿ ಸಹ 100-150 ಮಂದಿಗೆ ಹೆರಿಗೆಗಳನ್ನು ಮಾಡಿಸಿದ್ದಾಳೆ. ಹೆಂಗಸರಿಗೇ ಎಲ್ಲಾ ಹೆರಿಗೆ ಮಾಡಿಸಿರುವುದು! ಯಾರಿಂದಲೂ ಒಂದು ರೂಪಾಯಿ ಸಹ ಪಡೆದಿಲ್ಲ. ವೀಳೆಯದೆಲೆ ಜೊತೆಗೆ ಒಂದು ರವಿಕೆ ಕಣ ಇಟ್ಟುಕೊಟ್ಟರೆ ಅದೇ ದೊಡ್ಡ ಫೀಸು.

ಕೊರೊನಾದಿಂದ ಮನೆಯಲ್ಲಿ ಬಂಧಿಯಾದ ದಂಪತಿಗಳು ಸಂಸಾರ ಬೆಳೆಸಿದ್ದಾರೆ. ಮುಂದಿನ ದಿನಗಳಲ್ಲಿ ಹೆರಿಗೆಗೆ ಬೆಡ್ ಸಿಗುವುದು ಕಷ್ಟ ಆಗಬಹುದು. ತೊಟ್ಟಿಲುಗಳಿಗೆ ಡಿಮ್ಯಾಂಡ್ ಬರಬಹುದು. ಕೊರೊನಾದಿಂದ ಕಡಿಮೆಯಾದ ಜನಸಂಖ್ಯೆ ಕೊರೊನಾದಿಂದಲೇ ಸರಿತೂಗಬಹುದು.

ಮನೆಯಲ್ಲೇ ಇದ್ದು ತಿಂದು ತಿಂದು ದಪ್ಪ ಆದ ಮಂದಿಯೂ ಇದ್ದಾರೆ. ಯಾವುದೇ ಕ್ರೀಂ, ಪೌಡರ್ ಬಳಿದುಕೊಳ್ಳದಿದ್ದರೂ ಬೆಳ್ಳಗಾದವರು ಬಹಳ ಮಂದಿ. ಸೂರ್ಯನ ಬೆಳಕೇ ಮೈಮೇಲೆ ಬೀಳದೆ ಇದ್ದಾಗ ಸಹಜವಾಗೇ ಮೈಬಣ್ಣ ತಿಳಿಯಾಗುತ್ತದೆ. ಬಿಳುಪಿನಿಂದ, ಹೊಳಪಿನಿಂದ ಮಂದಿ ಮಿನುಗುತ್ತಿದ್ದಾರೆ. ಯಾವ ಕ್ರೀಮಿನಿಂದಲೂ ಇದನ್ನು ಸಾಧಿಸಲು ಸಾಧ್ಯವಾಗಿರಲಿಲ್ಲ.

ಇನ್ನು ಮಕ್ಕಳು ಆನ್ಲೈನ್ನಲ್ಲಿ ಕ್ಲಾಸುಗಳನ್ನ ಯಾವ ಸ್ಥಿತಿಯಲ್ಲಿ ಮನೆಯಲ್ಲಿ ಕೂತು ಅಟೆಂಡ್ ಮಾಡುತ್ತಾರೆ ಎಂಬುದು ಎಲ್ಲರಿಗೂ ಗೊತ್ತು. ಮಲಗಿಕೊಂಡೂ ಸಹ ಪಾಠ ಕೇಳುವ ಮಕ್ಕಳು ಇದ್ದಾರೆ. ಕೈಲಿ ಕುರುಕು ತಿಂಡಿ. ಇವರನ್ನು ನಾಳೆ ಶಾಲೆಗೆ ಕಳಿಸಿದರೆ ಶಾಲೆಯಲ್ಲೂ ಸಹ ಮಲಗಿಕೊಂಡೇ ಪಾಠ ಕೇಳುತ್ತಾರೆ. ಚಾಕ್ಲೆಟ್, ಬಿಸ್ಕತ್ ಬೇಕು ಎಂದು ಗಲಾಟೆ ಮಾಡಬಹುದು.

ಭೂಮಿಯ ಭಾರ ತಗ್ಗಿಸಲು ಪ್ರಕೃತಿ ತನಗೆ ತಾನೇ ಅನೇಕ ಉಪಾಯಗಳನ್ನು ಮಾಡುತ್ತದೆ. ಸುನಾಮಿ, ಸುಂಟರಗಾಳಿ, ಚಂಡಮಾರುತ, ಪ್ಲೇಗು, ಮಲೇರಿಯಾ ಮೊದಲಾದವುಗಳಿಂದ ಜನಸಂಖ್ಯೆ ನಿಯಂತ್ರಣದಲ್ಲಿರುತ್ತಿತ್ತು. ಮನುಷ್ಯ ಎಲ್ಲಕ್ಕೂ ಔಷಧಿ ಕಂಡು ಹಿಡಿದು ಮೆರೆಯುತ್ತಿದ್ದಾಗ ಕೊರೊನಾ ಬಂತು. ಮೇಲು-ಕೀಳೆಂಬ ತಾರತಮ್ಯ ಇಲ್ಲದೆ, ಬಡವ-ಬಲ್ಲಿದನೆಂಬ ಬೇಧ, ಭಾವವಿಲ್ಲದೆ, ಜಾತಿ-ಮತಗಳ ಅಂತರವಿಲ್ಲದೆ ಸಚಿವ-ಚಪ್ರಾಸಿ ಎಂಬುದನ್ನು ಪರಿಗಣಿಸದೆ ಈ ಕೊರೊನಾ ಎಲ್ಲರಿಗೂ ಸಮವಾಗಿ ಜಾಡಿಸಿದೆ. ಕೊರೊನಾ ಕೈ ಕೆಳಗಡೆ ಎಲ್ಲರೂ ಒಂದೇ.

`ಸತ್ಯ ಹರಿಶ್ಚಂದ್ರ' ಸಿನಿಮಾದಲ್ಲಿ ವೀರಬಾಹು ಹಾಡುತ್ತಾನೆ.

`ತಿಲಕ ಇಟ್ಟವರು, ವಿಭೂತಿ ಬಳಿದವರು, ಶಿವದಾರ, ಜನಿವಾರ ಧರಿಸಿದವರು ಎಲ್ಲರೂ ಸಹ ಈ ವೀರಬಾಹು ಕೈ ಕೆಳಗೆ ಒಂದೇ' ಎಂಬ ಸಂದೇಶ ಹಾಡಲ್ಲಿದೆ. ಅದನ್ನು ಕೊರೊನಾ ಕಲಿಸಿ ಕೊಟ್ಟಿದೆ. ಹಂಚಿ ತಿನ್ನುವುದು, ಪರಸ್ಪರ ಸಹಾಯ ಮಾಡುವುದು, ವೈದ್ಯರನ್ನು ದೇವರೆಂದು ನಂಬುವುದು, ಆಡಂಬರದ ಮದುವೆ ಮಾಡದೇ ಇರುವುದು ಇತ್ಯಾದಿಗಳನ್ನು ಕೊರೊನಾ ಕಲಿಸಿದೆ. ಈ ಪಾಠ ಬಹಳಷ್ಟು ವರ್ಷಗಳು ನಮ್ಮ ಮನಸ್ಸಲ್ಲಿ ಗಟ್ಟಿಯಾಗಿ ಉಳಿದಿರುತ್ತದೆ. ಮಾಸ್ಕು, ಸ್ಯಾನಿಟೈಜರ್ಗಳನ್ನು ತಪ್ಪದೆ ಬಳಸೋಣ, ಆರೋಗ್ಯ ಪಥದಲ್ಲಿ ಹೆಜ್ಜೆ ಹಾಕೋಣ.

———

ಸಣ್ಣ ಕತೆ

ಪರಿಹಾರ

ಹು.ವಾ.ಶ್ರೀ.

ಮಗ ಕಾರು ಡ್ರೈವ್ ಮಾಡುತ್ತಿದ್ದ. ಸೊಸೆ ಅವನ ಪಕ್ಕದಲ್ಲಿ ಮೊಬೈಲ್ ನಲ್ಲಿ ಮಗ್ನಳಾಗಿದ್ದಳು.

ಮೊಮ್ಮಕ್ಕಳೊಂದಿಗೆ ಹಿಂದೆ ಕುಳಿತಿದ್ದ ರಾಮಯ್ಯಗೆ ಚಿಕ್ಕಮಗಳೂರು ದಾಟಿ ಆಲ್ದೂರು ಸಮೀಪಿಸುತ್ತಿರುವಂತೆ ತಮ್ಮ ಊರು ಹತ್ತಿರ ಹತ್ತಿರವಾಗುತ್ತಿರುವ ಖುಷಿ.

ಬಾಲ್ಯದಲ್ಲಿ ಊರು ಬಿಟ್ಟಾಗಿನಿಂದಲೂ ಹಾಗೇ ಪ್ರತಿಬಾರಿಯೂ ಊರು ಬಂದಾಗ ಈ ಖುಷಿ ಅನುಭವಿಸಿದ್ದುಂಟು. ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ! ಎಲ್ಲೆಲ್ಲಿ ಸುತ್ತಿಬಂದರೂ ಜನ್ಮ ಭೂಮಿಯಷ್ಟು ಹಿತ ಮತ್ತೊಂದಿಲ್ಲ

ದಾರಿಯ ನಡುವೆ ಹಾಸನದಲ್ಲಿ ಊಟ ಮುಗಿಸಿದ ಮೇಲೆ ಮೊಮ್ಮಕ್ಕಳು ನಿಧಾನವಾಗಿ ನಿದ್ರೆಗೆ ಜಾರಿದ್ದರು.

ಈ ಬಾರಿಯಾದರೂ ಊರಿಗೆ ಹೋದಾಗ ಚೆನಿಯನನ್ನು ನೋಡಿ ಬರಬೇಕು. ಹತ್ತು ವರುಷದ ಹಿಂದೆ ಚಿಕ್ಕಪ್ಪ ತೀರಿಕೊಂಡಾಗ ಅವನ ಮನೆಯಂಗಳದಲ್ಲಿ ಅದಾವುದೋ ಕೆಲಸದಲ್ಲಿದ್ದ ಅವನನ್ನು ನೋಡಿದ್ದೆ. ಬಹುಶಃ ಆಮೇಲೆ ನಾಲ್ಕಾರು ಬಾರಿ ಊರಿಗೆ ಹೋಗಿದ್ದರೂ ಅವನನ್ನು ಕಂಡಿರಲಿಲ್ಲ. ಬೆಂಗಳೂರಲ್ಲಿ ನೆಲೆ ನಿಂತ ಮೇಲೆ ಊರಿಗೆ ಹೋಗುವುದೂ ಕಡಿಮೆಯೇ. ಅಣ್ಣನ ಮನೆಯಲ್ಲಿ ಏನಾದರೂ ಸಮಾರಂಭವಿದ್ದರೆ ಬಂದು ಹೋಗುವುದಕ್ಕೆ ಸೀಮಿತವಾಗಿದೆ. ರಾಮಯ್ಯ ಮನಸ್ಸಿನಲ್ಲೇ ಅಂದುಕೊಂಡರು.

ಕಿಟಕಿಯಾಚೆಗಿನ ಹಸಿರು ನೋಡುತ್ತಾ ರಾಮಯ್ಯನ ಮನಸ್ಸು ಹಿಂದೆ ಸರಿದಿತ್ತು

ಚೆನಿಯನ ಅಪ್ಪ ದ್ಯಾವ ಮನೆಯ ನಿಷ್ಠಾವಂತ ಕೆಲಸದಾಳು. ಅವನೇ ಒಂದು ರೀತಿಯಲ್ಲಿ ಮನೆಯ ಏಳಿಗೆಗೆ ಆಧಾರವಾಗಿದ್ದ. ಅವನ ನಿಷ್ಠೆಯ ದುಡಿಮೆಯಿಂದ ಮನೆಯಲ್ಲಿ ಸಮೃದ್ಧಿ ಇತ್ತು. ಅವನ ಮಗ ಚೆನಿಯನಿಗೆ ತನ್ನದೇ ವಯಸ್ಸು. ಶಾಲೆಗೆ ಮೂರು ವರುಷ ಬಂದವನು ಶಾಲೆ ಬಿಟ್ಟ. ನಂತರ ನಮ್ಮ ಮನೆಯಲ್ಲೇ ದನ ಮೇಸುತ್ತಿದ್ದ.

ಗದ್ದೆ ಕೊಯ್ಲೆಲ್ಲಾ ಆದ ಮೇಲೆ ಸಾಧಾರಣವಾಗಿ ಎಮ್ಮೆ ದನಗಳನ್ನೆಲ್ಲಾ ಗದ್ದೆಗೇ ಮೇಯಲು ಬಿಡುತ್ತಾರೆ. ಮಲೆನಾಡಿನಲ್ಲಿ ಗದ್ದೆಗಳು ಕೆಲವು ಸಣ್ಣವಾದರೆ ಕೆಲವು ದೊಡ್ಡ ದೊಡ್ಡ ಹಾಳಿಗಳು. ಗದ್ದೆಯ ಧರೆಯೂ ಕೆಲವೆಡೆ ಬಹಳ ಎತ್ತರ. ಪಟ್ಟಣಕ್ಕೆ ಓದಲು ಹೋಗಿದ್ದ ನಾನು ರಜೆಯಲ್ಲಿ ಊರಿಗೆ ಹೋದಾಗ ಚೆನಿಯನೊಂದಿಗೆ ಕಾಡು ಮೇಡು ಅಡ್ಡಾಡುತ್ತಿದ್ದೆ.

ಅದೊಂದು ದಿನ ಗದ್ದೆಯಲ್ಲಿ ಮೇಯುತ್ತಿದ್ದ ದನ ಮತ್ತು ಎಮ್ಮೆಯನ್ನು ಕೊಟ್ಟಿಗೆಗೆ ಕಟ್ಟುವ ಸಮಯ. ನಾನು ಗದ್ದೆ ಕಡೆಗೆ ಹೊರಟೆ. ಚಾವಡಿಯಲ್ಲಿ ಕುಳಿತಿದ್ದ ಅಪ್ಪಯ್ಯ, "ಎತ್ಲಾಗಿ ಹೊರಟ್ಯಾ ರಾಮು?" ಅಂದಾಗ "ಇಲ್ಲೇ ಗದ್ದೆಗೆ" ಅಂತ ಹೇಳಿ ಓಡಿದ್ದೆ. ಅದಾಗಲೇ ದನಗಳನ್ನು ಚೆನಿಯ ಒಟ್ಟು ಮಾಡಿ ಮನೆಕಡೆ ಹೊಡೆಯುತ್ತಿದ್ದ. ನಾನೂ ಓಡಿ ಸೇರಿದ್ದೆ. "ನೀವ್ಯಾಕ್ ಬಂದ್ರಿ ಸಣಯ್ಯ" ಅನ್ನುತ್ತಾ ನಕ್ಕ. ಎಲ್ಲ ಹಸುಗಳೂ ಮನೆಯತ್ತ ನಡೆದರೆ ಒಂದು ಎಮ್ಮೆ ದೂರದ ಹಳ್ಳದ ಬುಡದಲ್ಲಿತ್ತು. ಹೋಗಿ ಅದನ್ನು ಜೋರಾಗೇ ಬೆರೆಸಿಕೊಂಡು ಬಂದೆವು. ಅವನು ಲಕ್ಕಿ ಬರಲಿನಲ್ಲಿ ಒಂದು ಏಟು ಕೊಟ್ಟರೆ ನಾನು ಎರಡು ಏಟು ಕೊಟ್ಟು ಅದು ಆಚೀಚೆ ಓಡದಂತೆ ನಾನೂ ಬರಲು ಹಿಡಿದು ಅದರ ಪಕ್ಕದಲ್ಲೇ ಓಡಿದ್ದೆ. ಗಾಬರಿಗೋ ಏನೋ ಅದು ದೊಡ್ಡ ಧರೆಯಿಂದ ಜಾರಿತು. ಅದರ ಕಾಲು ಮುರಿಯಿತು.

ಅದಾವ ಸಂಸಾರದ ಅಥವಾ ಹಣಕಾಸಿನ ತಾಪತ್ರಯದಲ್ಲಿದ್ದರೋ, ಅಪ್ಪಯ್ಯನ ಕೋಪ ತಾರಕಕ್ಕೇರಿತ್ತು. ತನಿಯ ಭಯಗೊಂಡು ಅಂಗಳದ ತುದಿಯಲ್ಲಿ ನಿಂತಿದ್ದ.

ಅಪ್ಪಯ್ಯ ಒಂದು ಉದ್ದದ ಲಕ್ಕಿ ಬರಲು ತೆಗೆದುಕೊಂಡು "ಅಷ್ಟು ಒಳ್ಳೆ ಎಮ್ಮೆಯ ಕಾಲು ಮುರಿದೆಯಾ..ನಿನ್ನ ಕಾಲೂ ಮುರಿತೀನಿ ನೋಡು" ಅಂತ ಚೆನ್ನಾಗಿ ಬಾರಿಸಿದರು. ಒಂದು ಎರಡು...ಏಟು ಬೀಳುತ್ತಲೇ ಇತ್ತು.

..ಒಂದೊಂದು ಏಟನ್ನೂ ಅವಡುಗಚ್ಚಿ ಸಹಿಸಿಕೊಂಡು ಅವನು ದೀನನಾಗಿ ನನ್ನತ್ತ ನೋಡುತ್ತಿದ್ದರೆ, ಅವನ ಕಣ್ಣಂಚಿನ ನೀರನ್ನು ನೋಡಲಾರದೆ, ಅಪ್ಪ ನ ರೌದ್ರಾವತಾರಕ್ಕೆ ಭಯಗೊಂಡು ನಾನು ಶಿಲೆಯಂತೆ ನಿಂತು ಬಿಟ್ಟಿದ್ದೆ.

ಬಹುಶಃ ಈ ಘಟನೆ ನಡೆದು ಸುಮಾರು ಐದಾರು ದಶಕಗಳೇ ದಾಟಿದೆ. ನೆನಪು ಮಾತ್ರಾ ಮನದಲ್ಲಿ ಹಸಿಯಾಗೇ ಇದೆ.

ಊರಿಗೆ ಹೋದಾಗ ಚೆನಿಯ ಕಂಡರೆ ಅವನಿಗೆ ಜೇಬಿನಿಂದ ಹತ್ತಿಪ್ಪತ್ತು ರೂಪಾಯಿ ತೆಗೆದು ಕೊಡುವುದಿತ್ತು.

ಮುಂದೆ ಚೆನಿಯ ನಮ್ಮ ಮನೆ ಕೆಲಸ ಬಿಟ್ಟಿದ್ದ. ತಂದೆ ದ್ಯಾವನಿಂದ ಅಡಕೆ ಕೊನೆ ತೆಗೆಯುವ ವಿದ್ಯೆ ಕಲಿತಿದ್ದ ಅವನಿಗೆ ಅಡಿಕೆ ಕೊಯಿಲಿನ ಸಮಯ ಬಹಳ ಬೇಡಿಕೆ ಇತ್ತು ಅಂತ ಕೇಳಿದ್ದೇನೆ. ಅಷ್ಟೇ ಅಲ್ಲ, ನಂತರ ಅವನ ಮಗ ರಾಮನೂ ಕೊನೆ ತೆಗೆಯುವುದರಲ್ಲಿ ಪಳಗಿದ್ದಾನೆಂದು ಕೇಳಿದ್ದೆ. ಈಗ ಅವನ ಕುಟುಂಬವೂ ಬೆಳೆದಿರಬಹುದು.ಅವನ ಪರಿಸ್ಥಿತಿ ಹೇಗಿದೆಯೋ..

ರಾಮಯ್ಯನಿಗೆ ಮತ್ತೆ ತನಿಯನ ಏಟು ತಿಂದ ಮುಖವೇ ನೆನಪಿಗೆ ಬಂತು. ಈ ಬಾರಿ ಅವನಿಗೆ ಕೈಲಾದ ಸಹಾಯ ಮಾಡಬೇಕು.. ಅಂದು ಅವನು ಅದೆಷ್ಟು ಏಟು ತಿಂದಿರಬಹುದು. ಪಾಪ ನಮ್ಮ ಹುಡುಗಾಟಕ್ಕೆ ಎಮ್ಮೆಯ ಕಾಲು ಮುರಿಯಿತಲ್ಲ! ನಾನು ಹೋಗದಿದ್ದರೆ ಎಮ್ಮೆಯ ಕಾಲು ಮುರಿಯುತ್ತಿರಲಿಲ್ಲ. ನಾನು ಪಕ್ಕದಲ್ಲಿ ಕೋಲು ಹಿಡಿದು ಓಡಿದ್ದಕ್ಕೇ ಅದು ಗಾಬರಿಯಾಗಿ ಧರೆಯ ಅಂಚಲ್ಲಿ ಆಯತಪ್ಪಿತ್ತು. ಪಾಪ ತನಿಯ ಚಕಾರವೆತ್ತದೇ ಏಟು ತಿಂದಿದ್ದ..ಐದಾರೋ ಏಳೆಂಟೋ ಅಥವಾ ಹತ್ತೋ...

..ಒಂದೊಂದು ಏಟಿಗೆ ನಾನು ಹಣದ ಲೆಕ್ಕ ಹಾಕಲಾಗುವುದೇ.. ಆವತ್ತಿನ ಲೆಕ್ಕ ಹಾಕಿದರೆ ಬಡ್ಡಿ ಎಷ್ಟಾಗಬಹುದು...ನಗುಬಂತು

ಅವನಿಗೆ ಐವತ್ತು ಸಾವಿರವೋ, ಒಂದು ಲಕ್ಷವೋ ಕೊಡಬೇಕು. ಅವನು ಅವನ ತಂದೆ ನಮ್ಮ ಮನೆಗೆ ದುಡಿದದ್ದು ಕಡಿಮೆಯೇ..? ಸಹಾಯ ಮಾಡಿದರೆ ಅದು ನಿಜಕ್ಕೂ ಅವನಿಗೆ ಒಂದಿಷ್ಟು ನಿರಾಳ ಎನಿಸುವಂತಿರಬೇಕು. ನಾನಾದರೂ ಇನ್ನೆಷ್ಟು ಕಾಲ ಇರುತ್ತೇನೆ. ಹೃದಯ ತೊಂದರೆ, ಮಂಡಿ ನೋವು, ದೇಹವೋ ಮಣ ಭಾರ! ದಶಾಭುಕ್ತಿಯೂ ಕಠಿಣವಾಗಿದೆ.

ಮಗ ಹೇಗೂ ಅವನ ಕಾಲ ಮೇಲೆ ನಿಂತಿದ್ದಾನೆ.ಈಗಲ್ಲದೇ ಇನ್ನು ಯಾವಾಗ ಕೊಡಲು ಸಾಧ್ಯ. ಮತ್ತೊಮ್ಮೆ ಊರಿಗೆ ಬರುತ್ತೇನೋ ಇಲ್ಲವೋ ಯಾರಿಗೆ ಗೊತ್ತು...

ಹೀಗೆ ಒಂದಿಷ್ಟು ಕೊಡುವುದರಿಂದ ಅವನಿಗಿಂತ ನನ್ನ ಮನಸ್ಸಿಗೆ ಸಮಾಧಾನ ಅಷ್ಟೇ.. ಇಷ್ಟಕ್ಕೂ ತನಿಯ ಬದುಕಿದ್ದಾನೋ ಇಲ್ಲವೋ...ಅನಿಸಿ ರಾಮಯ್ಯ ಒಂದು ಕ್ಷಣ ಬೆಚ್ಚಿ ವಾಸ್ತವಕ್ಕೆ ಬಂದರು. ಕಾರು ಮುಖ್ಯ ರಸ್ತೆಯಿಂದ ಕವಲೊಡೆದ ತಮ್ಮ ಹಳ್ಳಿಯ ದಾರಿ ಹಿಡಿದಿತ್ತು.

ಇದೀಗ ಊರ ಮಣ್ಣಿನ ವಾಸನೆ ರಾಮಯ್ಯನ ಮೈಮನದಲ್ಲಿ ಹರುಷ ತಂದಿತ್ತು.

ಹೇಳು ಮನ

ಹೇಳು ಹೇಳೆಲೆ ಹೇಳು ಏ ಮನ
ಏಕೆ ಚಿಂತೆಯ ಮಾಡಿಹೇ
ಕಳೆದುದೆಲ್ಲವು ಕಳೆದು ಹೋಗಲಿ
ನಗೆಯ ಅಲೆ ಮೇಲೇಳಲಿ

ಬಿಸಿಲು ಕಾದೊಡೆ ಮಳೆಯು ಬಾರದೆ
ಶಶಿಯ ಕಾಡುವ ಮೋಡ ಕರಗದೆ
ನೆನ್ನೆ ಕಳೆದರೆ ನಾಳೆ ಬಾರದೆ
ಬಿರಿಸು ಮಳೆ ಒಣನೆಲ ತಣಿಸದೇ

ಚಾಟಿ ಹಿಡಿದವ ನೋಡುತಿರುವ
ಬುಗುರಿ ಬಿದ್ದೊಡೆ ಎತ್ತಲು
ತಿಳಿದೂ ಖಿನ್ನತೆ ಏತಕೇ
ನುಡಿಸುತಿರು ರಾಗಮಾಲಿಕೆ
ಹೊತ್ತು ನಗೆ ಹೊಣೆಗಾರಿಕೆ.

ಹೇಳು ಹೇಳೆಲೆ ಹೇಳು ಏ ಮನ

ನಾವೆ ಏರಿ ನಾವು ಸಾಗುವ
ಹೊಸದೆ ಬದುಕಿನ ದ್ವೀಪಕೆ
ಮಳೆಬಿಲ್ಲು ಹಾಸಿದ ಜಾಗಕೆ
ಮೀಯುವ ರವಿ ಸೂಸುವ
ಭೂಮಿ ಮುತ್ತುವ ಕಿರಣಕೆ

ಕಳಿತ ಹಣ್ಣಿನ ಗೊರಟೆ ಮೊಳೆತು
ಹೊಸದೆ ಮರ ಅದೇ ಜಾಗಕೆ
ಮರದ ಗೊನೆಗೊನೆಯಲ್ಲಿ ಹಣ್ಣು
ಹಕ್ಕಿ ಹಸಿವನು ನೀಗಲಿ
ನೆರಳು ಬೆಳಕಿಗೆ ಕರಗುವಲ್ಲಿ
ಹಗಲು ದುಡಿಮೆಗೆ ಇರಲಿ
ಇರುಳು ಬಣ್ಣದ ಕನಸಿಗೆ

ಹೇಳು ಹೇಳೆಲೆ ಹೇಳು ಏ ಮನ

ನಿದ್ದೆಯಲಿ ಮೈಮರೆಯದೇ ಇರೆ
ಹೊಸ ಕನಸ ಹೇಗೆ ಕಾಣುವೇ
ಹೊಸದೆ ಭಾವಕೆ ಮಂತ್ರ ಗಾನಕೆ
ಬೆಳಕಿನಾಟಕೆ ದುಂಬಿ ಮೋಹಕೆ
ಮೊಗ್ಗು ಅರಳೀ ಘಮಿಸದೇ

ಹೇಳು ಹೇಳೆಲೆ ಹೇಳು ಏ ಮನ
ಏಕೆ ಚಿಂತೆಯ ಮಾಡಿಹೆ?

– **ಪೋರ**

ಬೆಟ್ಟವಲ್ಲ ಬಯಲು

ಸ್ವೀಕರಿಸು ಕಷ್ಟನಷ್ಟಗಳ ಧೈರ್ಯದಲಿ
ಇಲ್ಲವದು ಕಂಗೆಡಿಸುವದು
ಬಾಳ ಪಯಣದಲಿ ಅಡಿಗಡಿಗೆ

ಹೊಸ ಹೊಸ ಸವಾಲುಗಳಿಗೆ
ಸಿದ್ಧಗೊಳಿಸು ಮನಸು
ಹಿಂದಿನ ದಿನಗಳ ಅನುಭವದ ಪಾಠ ಪಠಿಸು

ಕಷ್ಟದಾ ಮೇಲೊಂದು ಕಷ್ಟ ಬರಲಿ
ಮೂಡುವದು ದೈರ್ಯ ಮನದಲಿ
ಇದೇನು ಮಹಾ ನೋಡಿರುವೆನೆಷ್ಟೋ

ಅನುಭವಗಳೇ ಗುರುವಾಗಿ
ಮುನ್ನೇಡೆಸುತ್ತವೆ ಮುಕ್ತವಾಗಿ
ಅವಲೋಕಿಸಿ, ತಪ್ಪುಗಳ ಒಪ್ಪಿಕೊಂಡಾಗ

ಪ್ರತಿಕ್ರಿಯಸದಿರು ಭಾವೋದ್ವೇಗದಲಿ
ಕಾಲಕಿರುವದು ಅಪಾರ ಶಕ್ತಿ
ಕಂಡುಕೊಳ್ಳುವದೊಂದು ಇತ್ಯರ್ಥದ ಯುಕ್ತಿ

ಬರುವ ಕಷ್ಟಗಳೆಲ್ಲ ಬೆಳೆಸುವದು ಎತ್ತರಕೆ
ನೋಡುವ ನೋಟವದು ಬದಲಾದರೆ
ಪರಿಹಾರವೂ ಭಿನ್ನ ವಿಭಿನ್ನ

ಪುಟವಿಟ್ಟ ಚಿನ್ನವಾಗು
ಉಳಿ ಪೆಟ್ಟುಗಳಿಂದ ಮೂರ್ತಿಯಾಗು
ಕರೆದೋಯ್ಯುವವು ಸಂಕಷ್ಟಗಳು ಜೀವನವ ಎತ್ತರಕೆ

ಕಷ್ಟಗಳು ಬಂದಾಗ ಕಂಗಾಲಾಗದಿರು
ಕಷ್ಟಗಳೆಂದೂ ಬೆಟ್ಟದ ಹಾಗೆ
ಬಂದೆದರು ನಿಲ್ಲುತ್ತವೆ ಹೆದರಿಸುತ್ತವೆ

ಮೆಟ್ಟಿ ನಿಂತರವನು ದೈರ್ಯದಲಿ
ಏನೇ ಬಂದರೂ ಎದುರಿಸುವ ಸಹನದಲಿ
ಕಷ್ಟಗಳು ಮಣಿವವು ಕಾಲಬುಡದಲಿ
ನೆಲದಂತೆ ನಿಂತು ಮೇಲೆತ್ತುವವು ನಮ್ಮನ್ನು

- **ರೇಣುಕಾ ದೇಸಾಯಿ**

ನಗೆಬರಹ

ಯಮಲೋಕದಲ್ಲಿ ಯಮರ್ಜನ್ಸಿ

–ನಾಗರತ್ನ ಚಂದ್ರಶೇಖರ

ನಾರದರು ಯಮಲೋಕದತ್ತ ದೌಡಾಯಿಸುತ್ತಿದ್ದಾರೆ. ತ್ರಿಲೋಕ ಸಂಚಾರಿಯಾದ ಅವರು ಬುದ್ಧಿಜೀವಿಗಿಂತ ಸುದ್ದಿಜೀವಿಯಾಗೇ ಹೆಚ್ಚು ಪ್ರಸಿದ್ಧರು ಎಂದು ಎಲ್ಲರೂ ಒಪ್ಪಿಕೊಂಡಿರುವಾಗ ಯಾವುದೇ ಸುದ್ದಿಗಳ ಅಪ್‌ಡೇಟ್ ಬೇಕಾದರೆ ನಾರದರೇ ಸರಿಯಾದ ಅಥೆಂಟಿಕ್ ಪರ್ಸನ್ ಎಂದು ಯಮರಾಜ ಕೂಡ ಅವರಿಗೆ ಕರೆ ಕಳಿಸಿದ್ದಾಗಿತ್ತು.

ಭೂಲೋಕವಾಸಿಗಳಿಗಾದರೆ ಯಮಲೋಕಕ್ಕೆ ಒಂದೇ ಒಂದು ದಾರಿ. ಹಿಂತಿರುಗಿ ಬರಲಾಗದ ಒನ್ ವೇ ಟಿಕೆಟ್. ಈ ನಿಯಮ ನಾರದರಿಗೇಕೆ? ಅವರಿಗೆ ಮೂರು ಲೋಕಗಳಿಗೆ ಯಾವಾಗಲೂ ತೆರೆದ ಬಾಗಿಲು.

ಉಭಯ ಕುಶಲೋಪರಿಯ ನಂತರ ಯಮಧರ್ಮರಾಯ ನೇರವಾಗಿ ವಿಷಯಕ್ಕೆ ಬಂದರು. "ಮಹರ್ಷಿಗಳೆ, ನಿಮಗೆ ಗೊತ್ತಿಲ್ಲದಿರುವುದು ಹೇಳಿ, ದಾರಿಯಲ್ಲಿ ನೀವೇ ನೋಡಿದಂತೆ ಈಗ ಯಮಲೋಕಕ್ಕೆ ಬರುತ್ತಿರುವವರನ್ನು ನಿಯಂತ್ರಿಸಲಾಗದಷ್ಟು ಟ್ರಾಫಿಕ ಜಾಮ್ ಆಗಿದೆ! ಈ ಹಿಂದೆ ಎರಡು ವಿಶ್ವ ಸಮರಗಳಾದಾಗಲೂ ಇಷ್ಟೊಂದು ರಷ್ ಇರಲಿಲ್ಲ. ಪಾಪ ಪುಣ್ಯದ ಲೆಕ್ಕ ಬರೆಯಲೂ ಪುರುಸೊತ್ತಿಲ್ಲದಂತೆ ಸಾವಿನ ಸರಣಿ ನಡೆದಿದೆ. ದಿನದ ೨೪ ಗಂಟೆ ಚಿತ್ರಗುಪ್ತರಿಗೆ ಹಾಗೂ ಕಿಂಕರರಿಗೆ ಕೆಲಸದ ಒತ್ತಡದಿಂದಾಗಿ ಸುಸ್ತಾಗುತ್ತಿದ್ದಾರೆ.

"ಯಮರಾಜ......ನಿನ್ನ ಚಿಂತೆ ನನಗೆ ಅರ್ಥವಾಗುತ್ತಿದೆ. ನಿನ್ನ ಮುಖದಲ್ಲಿ ದಣಿವು ಎದ್ದು ಕಾಣುತ್ತಿದೆ. ತ್ರಿಮೂರ್ತಿಗಳು ಕೂಡ ಈ ವಿದ್ಯಮಾನಗಳನ್ನು ಗಮನಿಸಿ ಚಿಂತಾಕ್ರಾಂತರಾಗುತ್ತಿದ್ದಾರೆ".

"ಮಹರ್ಷಿಗಳೇ.....ಸಾವಿನ ಅಧಿದೇವತೆಯಾದ ನನಗೆ ಸವಾಲು ಹಾಕುವ ಪ್ರತಿಸ್ಪರ್ಧಿ, ಪ್ರತಿರೂಪಗಳು ಭೂಲೋಕದಲ್ಲಿ ಹೆಚ್ಚುತ್ತಿರುವುದು ನನ್ನ ಚಿಂತೆಗೆ ಕಾರಣವಾಗಿದೆ!" ಅಕಾಲ ಮರಣದ ಹಿಂದಿರುವ ಸಂಚುಗಳೇ ನನಗೆ ಅರ್ಥವಾಗುತ್ತಿಲ್ಲ. ಸಾವು ನೋವುಗಳಿಂದಾಗಿ ಜನ ಬದುಕಿನಲ್ಲಿ ಭರವಸೆ ಕಳೆದುಕೊಳ್ಳುತ್ತಿದ್ದಾರಂತೆ, ಹೌದೇ?

"ನಿನ್ನ ಮಾತು ನೂರಕ್ಕೆ ನೂರು ಸತ್ಯ. ಅನಿಷ್ಟ ರಾಜಕಾರಣದ ಲಾಬಿಗಳು, ನಿರ್ದಯಿ ಆಸ್ಪತ್ರೆಗಳು, ನಕಲಿ ಔಷಧಿಗಳು ಜನರನ್ನು ದೋಚುತ್ತಿದ್ದರೆ, ನಿನ್ನ ಪಾಶಕ್ಕಿಂತ ಬಲವಾದ ಜೈವಿಕ ಅಸ್ತ್ರಗಳ ದಾಳಿಯಿಂದ ಪ್ರಾಣವಾಯುವಿಗೇ ಸಂಚಕಾರ ಬಂದಿದೆ. ಜನರು ಹುಳುಗಳಂತೆ ಸಾಯುತ್ತಿದ್ದಾರೆ".

"ಸಾವಿನ ಲೆಕ್ಕ ಬರೆಯಲಾಗದೆ ನಮ್ಮ ಚಿತ್ರಗುಪ್ತರಿಗೆ ತಲೆ ಕೆಡುತ್ತಿದೆಯಂತೆ. ಅವರಿಗೆ ತುರ್ತಾಗಿ ಸಹಾಯಕರ ಅಗತ್ಯವಿದೆ. ಹಾಗಾಗಿ ನಿಮ್ಮ ಸಲಹೆಗಾಗಿ ನಿಮಗೆ ಕರೆ ಕಳುಹಿಸಲಾಯಿತು".

"ಯಮರಾಜ.....ಭೂಲೋಕದಲ್ಲಿ ಹುಟ್ಟು ಸಾವಿನ ಲೆಕ್ಕಗಳನ್ನೆಲ್ಲಾ ಈಗ ಪುಸ್ತಕಗಳಲ್ಲಿ ಬರೆದಿಡುತ್ತಿಲ್ಲ. ಅಲ್ಲಿನ ಬುದ್ಧಿವಂತ ಜನ ಮೆಷಿನ್‌ಗಳನ್ನು ಎಲ್ಲಾ ಕೆಲಸಕ್ಕೂ ಉಪಯೋಗಿಸುವುದನ್ನು ಕಲಿತಿದ್ದಾರೆ. ಈ ಯಂತ್ರಮಾನವನನ್ನು ಕಂಪ್ಯೂಟರ್ ಎಂದು ಕರೆಯುತ್ತಾರೆ. ಸುಸ್ತು, ಆಯಾಸ, ನೀರಡಿಕೆ ಇವ್ಯಾವುದೂ ಈ ಯಂತ್ರಗಳಲ್ಲಿ ಇಲ್ಲ".

"ಹೌದೇ......ಹಾಗಾದರೆ ಇಂತಹ ಯಂತ್ರಮಾನವರು....ನೀವು ಹೆಸರು ಹೇಳಿದಂತೆ ಕಂಪ್ಯೂಟರ್‌ಗಳನ್ನು ಚಿತ್ರಗುಪ್ತರಿಗೆ ಸಹಾಯ ಮಾಡಲು ನಾವ್ಯಾಕೆ ತರಿಸಬಾರದು ಅಲ್ಲವೆ?"

"ಸರಿಯಾಗಿ ತೀರ್ಮಾನಿಸಿದ್ದೀರಿ. ಈ ಹಿಂದೆ ನವರಾತ್ರಿ ವೇಳೆ ದೇವಿ ಸರಸ್ವತಿ ಭೂಲೋಕಕ್ಕೆ ಹೋಗಿದ್ದಾಗ ಈ ಕಂಪ್ಯೂಟರ್ ಕಾರ್ಯಕ್ಷಮತೆ ಬಗ್ಗೆ ಬಹಳ ಆಶ್ಚರ್ಯಗೊಂಡು ಅಲ್ಲಿನ ಮಕ್ಕಳು ಪುಸ್ತಕಕ್ಕಿಂತ ಹೆಚ್ಚಾಗಿ ಇದಕ್ಕೇ ಜೋತು ಬಿದ್ದು ಅದಕ್ಕೇ ಪ್ರಾಶಸ್ತ್ಯ ಕೊಡುತ್ತಿದ್ದುದನ್ನು ಕಂಡು ಸ್ವಲ್ಪ ಬೇಸರವೂ ಆಯಿತಂತೆ. ಬ್ರಹ್ಮಲೋಕಕ್ಕೂ ಕಂಪ್ಯೂಟರ್ ತರುವ ಆಲೋಚನೆ ಮಾಡಿದ್ದರು".

"ಹಾಗಾದರೆ ನಮ್ಮ ಯಮಲೋಕಕ್ಕೆ ಈಗಿನ ಪರಿಸ್ಥಿತಿ ನಿಭಾಯಿಸಲು ಅಂಥ ಯಂತ್ರಮಾನವರನ್ನು ಹಾಗೂ ಅದನ್ನು ನಡೆಸಬಲ್ಲವರನ್ನು ಕರೆಸಲು ಈಗಲೇ ಆಜ್ಞೆ ಮಾಡಿಬಿಡುವೆ".

"ಯಮರಾಜ......ಅದೇನೂ ಅಷ್ಟು ಸಮಸ್ಯೆಯಲ್ಲ, ಅದಕ್ಕಿಂತ ದೊಡ್ಡದೊಂಡು ಈಗ ನಿಮಗೆ ಕಾಣುತ್ತಿರಬೇಕಲ್ಲವೆ?"

"ಧರ್ಮಕರ್ಮಗಳ ಪರಾಮರ್ಶೆಗೆ ಅವಕಾಶವನ್ನೇ ನೀಡದೆ ಈ ರೀತಿ ಸಿಕ್ಕಸಿಕ್ಕವರನ್ನೆಲ್ಲಾ ಅಪೋಶನ ತೆಗೆದುಕೊಳ್ಳುತ್ತಿರುವ ಆ ದುಷ್ಟಶಕ್ತಿಯನ್ನು ನಿರ್ನಾಮ ಮಾಡುವುದೆಂತು ಮಹರ್ಷಿಗಳೇ?"

"ಯಮರಾಜ......ಈಗಾಗಲೇ ಅನೇಕ ದುಷ್ಟಶಕ್ತಿಗಳ ಸಂಹಾರವನ್ನು ಕಾಲ ಕಾಲಕ್ಕೆ ತ್ರಿಮೂರ್ತಿಗಳೇ ಮಾಡುತ್ತಾ ಬಂದಿದ್ದಾರಲ್ಲವೆ! ಈಗ ಭೂಲೋಕದಲ್ಲಿ ಹುಟ್ಟಿಕೊಂಡಿರುವುದು ಭಸ್ಮಾಸುರನ ಅಪರಾವತಾರ. ಹೇಗೆ ಶ್ರಿಮನ್‌ನಾರಾಯಣ ಮೋಹಿನಿಯಾಗಿ ಈ ಹಿಂದೆ ಭಸ್ಮಾಸುರನನ್ನು ಭಸ್ಮ ಮಾಡಿದ್ದು ಮರೆಯಲಾದೀತೆ! ಈ ಭಸ್ಮಾಸುರನೂ ಅವನ ಹಾಗೇ ಹತ್ತಿರ ಬಂದವರನ್ನು, ಮುಟ್ಟಿದವರನ್ನು, ಒಡನಾಡಿದವರನ್ನೆಲ್ಲಾ ಇನ್ನಿಲ್ಲದಂತೆ ಕಾಡಿಸಿ, ಪೀಡಿಸಿ ಅವರನ್ನು ನಿರ್ನಾಮ ಮಾಡುತ್ತಾ ಹೋಗುತ್ತಿದ್ದಾನೆ",

"ಹಾಗೆ ಸತ್ತವರಿಗೆ ಸೂಕ್ತ ಮರಣೋತ್ತರ ಉತ್ತರಕ್ರಿಯೆಗಳೊಂದೂ ನಡೆಯುತ್ತಿಲ್ಲವಂತೆ! ಅಂತಹ ಆತ್ಮಗಳೆಲ್ಲಾ ಸದ್ಗತಿ ಹೊಂದಲಾಗದೆ ತ್ರಿಶಂಕು ಸ್ಥಿತಿಯಲ್ಲಿವೆಯೆಂಬ ವರದಿ ನಮ್ಮ ಚಿತ್ರಗುಪ್ತರಿಂದ ನನ್ನ ಗಮನಕ್ಕೆ ಬಂದಿದೆ ಮಹರ್ಷಿಗಳೇ. ಇದು ಹೀಗೇ ಮುಂದುವರೆದರೆ ಯಮಲೋಕದಲ್ಲಿ ದಟ್ಟಣೆಯಾಗಿ ಯಮರ್ಜನ್ಸಿ ಘೋಷಿಸಬೇಕಾಗಬಹುದೆಂಬ ಭಯ ಅವರಿಗೆ! ನಮ್ಮ ಕಿಂಕರರ ಯಮಪಾಶಗಳಿಗಿಂತ ಆ ವೈರಿಯ ಮುಳ್ಳುಗಳೇ ಅತ್ಯಂತ ಪ್ರಬಲ ಅಸ್ತ್ರವಾಗಿದೆಯಂತೆ"

"ಇದರಲ್ಲಿ ಸಂಶಯವೇ ಇಲ್ಲ......ಆ ಭಸ್ಮಾಸುರು ಇಡೀ ಮನುಕುಲವನ್ನೇ ಗುಡಿಸಿ ಗಂಡಾಂತರ ಮಾಡುವ ಮುನ್ನ ತ್ರಿಮೂರ್ತಿಗಳ ಮೊರೆ ಹೋಗುವುದೇ ಸರಿಯಾಗಿದೆ. ಅವನ ಮೇಲೆ ಭೂಲೋಕದ ವಿಜ್ಞಾನಿಗಳು ಪ್ರಯೋಗಿಸಿದ ಯಾವುದೇ ತಂತ್ರಗಳು, ದೈವಭಕ್ತರ ಮಂತ್ರಗಳು, ಯಂತ್ರಗಳು ತಯಾರಿಸಿದ ಔಷಧಿಗಳಿಗೂ ಸಿಗದೆ ರೂಪಾಂತರ ಹೊಂದುತ್ತಾ ನುಣುಚಿಕೊಳ್ಳುತ್ತಿದ್ದಾನೆ."

"ಮರಣ ಶಾಸನ ಬರೆಯುವ ಅಧಿಕಾರ ಕೇವಲ ನನ್ನೊಬ್ಬನಿಗೆ ಮಾತ್ರ ಇದೆ, ಈಗ ನನ್ನ ಈ ಸ್ಥಾನಕ್ಕೆ ಸಂಚಕಾರ ಬರುವ ಮೊದಲು ಅದನ್ನು ಭದ್ರಪಡಿಸಿಕೊಳ್ಳಬೇಕಾದ ತುರ್ತು ಅಗತ್ಯವಿದೆ ಎಂದು ನೀವೂ ಹೇಳುತ್ತಿರುವಿರಾಗಿ ನಾವು ತ್ರಿಮೂರ್ತಿಗಳ ಬಳಿಗೇ ಹೋಗೋಣ ಪರಿಹಾರಕ್ಕಾಗಿ"

ಯಮರ್ಜೆನ್ಸಿ ಮೀಟಿಂಗ್ ಮುಂದೆ ಕೈಲಾಸಕ್ಕೆ ಶಿಫ್ಟ್ ಆಗುವ ಸುದ್ದಿ ನಾರದರಿಂದ ಬಂದಿದೆ. ಅಲ್ಲಿ ಏನಾಯಿತೆಂದು ಮುಂದೆ ಹೇಳುವೆ.......ಕಾಯುತ್ತಿರಿ.

____

ಕನ್ನಡ ಕಥಾಲೋಕ : 6

'ವಡ್ಡಾರಾಧನೆ' - ಕನ್ನಡ ಕಥಾ ಲೋಕದ ಪ್ರಥಮ ಗದ್ಯ ಕೃತಿ

- ವಿಠ್ಠಲ್. ಇಜೇರಿ

ಈ ಮುಂಚಿನ ಐದು ಲೇಖನಗಳಲ್ಲಿ ಹಂತ ಹಂತವಾಗಿ ಕನ್ನಡ ಕಥಾಲೋಕ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತ ಹೇಗೆ ವಿಶ್ವ ಕಥಾ ಪ್ರಪಂಚಕ್ಕೆ ಕೊಡುಗೆ ನೀಡುತ್ತಾ ಬಂದಿದೆ ಎಂಬುದನ್ನು ಬರೆದಿದ್ದೆ. ಇಂದಿನ ಲೇಖನದಲ್ಲಿ ಕನ್ನಡದ ಕಥಾಲೋಕದ ಪ್ರಥಮ ಕಥಾ ಸಂಕಲನ 'ವಡ್ಡಾರಾಧನೆ' ಬಗ್ಗೆ ಒಂದೆರಡು ಮಾತುಗಳು. ಇದು ಕನ್ನಡ ಪ್ರಥಮ ಗದ್ಯ ಎಂಬ ಹೆಗ್ಗಳಿಕೆ ಹೊಂದಿದೆ.

ವಡ್ಡಾರಾಧನೆಯು ಶಿವಕೋಟ್ಯಾಚಾರ್ಯ ಮೂರನೇ ಶತಮಾನದಲ್ಲಿ, ಹುಮ್ನಾಬಾದ್ ತಾಲೂಕು ಹಳ್ಳಿಖೆಡ್ ಬಿ ಎಂಬ ಗ್ರಾಮದಲ್ಲಿ ಬರೆದ ಎಂದು ಕೆಲವು ಸಂಶೋಧಕರು ಹೇಳುತ್ತಾರೆ. ಹಸ್ತಪ್ರತಿಗಳಲ್ಲಿ ಇವರ ಹೆಸರು ದೊರೆತಿದೆ ಎಂದು ಡಿ.ಎಲ್. ನರಸಿಂಹಚಾರ್ಯ ಅವರು ಹೇಳಿದ್ದಾರೆ. 19ನೇ ಕತೆಯ ಪ್ರಾರಂಭದಲ್ಲಿ ಬ್ರಾಜಿಷ್ಣು ಅವರ ಹೆಸರು ಓಲೆಗರಿಯಲ್ಲಿ ದೊರೆತಿದೆ. ಬಹುಷಃ ಕೋಟ್ಯಾಚಾರ್ಯರ ಕಾಲದಲ್ಲಿ ಆರಾಧನೆಯ ರೂಪದಲ್ಲಿ ಇದ್ದುದನ್ನು ಬ್ರಾಜಿಷ್ಣು ಕತೆಗಳನ್ನು 10ನೇ ಇಲ್ಲವೇ 11ನೇ ಶತಮಾನದಲ್ಲಿ ಬರೆದಿರಬಹುದು ಎಂದು ಹಂ.ಪ.ನಾಗರಾಜಯ್ಯ ಅಭಿಪ್ರಾಯ ಪಡುತ್ತಾರೆ. ಇನ್ನೂ ಈ ವಿಷಯಗಳನ್ನು ಸಂಶೋಧನೆಗೆ ಒಡ್ಡಬೇಕಾಗಿದೆ. ಆದರೆ ಇವು ಕನ್ನಡದ ಮೊದಲ ಗದ್ಯ ಅನ್ನುವುದರಲ್ಲಿ ಎರಡು ಮಾತಿಲ್ಲ.

ಈ ಕಥೆಗಳ ನಿರೂಪಣೆ ಸರಳವಾಗಿದೆ. ಕತೆಗಳನ್ನು ಓದುತ್ತ ಹೋದಂತೆ ಅಂದಿನ ದಿನಗಳ ಸುಂದರ ಚಿತ್ರಣ ಕಣ್ಣೆದುರು ಬರುತ್ತದೆ. ಸಮಾಜದ ಉನ್ನತ ವರ್ಗದ ಜನರನ್ನು ಕುರಿತ ಕತೆಗಳಿವಾಗಿದ್ದು ದೀಕ್ಷೆ ಪಡೆದು ಜಿನ ಮುನಿಗಳಾಗಿ ಮೋಕ್ಷ ಸಂಪಾದಿಸಿದ ಕಥೆಗಳಿವು. ಇಲ್ಲಿಯ ಮುನಿಗಳು ಸಾಮಾನ್ಯ ಜನರೊಂದಿಗೆ ನಿಕಟ ಸಂಬಂಧ ಇಟ್ಟುಕೊಂಡು ಧರ್ಮೋಪದೇಶ ಮಾಡಿದರು. ಜನರೂ ಮುನಿಗಳನ್ನು ಗೌರವದಿಂದ ಕಾಣುತ್ತಿದ್ದರು. ಪಾಪಪುಣ್ಯಗಳ ಪರಿಕಲ್ಪನೆ, ಧರ್ಮ ಪ್ರಚಾರ, ಆಳುವ ರಾಜರ ಶೈಲಿ, ಶಾಂತಿಪಾಲನೆ, ನ್ಯಾಯಪಾಲನೆ, ಇ ದರೊಂದಿಗೆ ಸಮಾಜದಲ್ಲಿಯ ನೀತಿ ಮತ್ತು ಅನೀತಿಗಳ ಚಿತ್ರಣ ಈ ಕತೆಗಳಲ್ಲಿವೆ. ಏಸುಕ್ರಿಸ್ತನ ಕಥೆಗಳು ಎಲ್ಲರಿಗೂ ತಿಳಿದಿವೆ. ಇಲ್ಲಿಯ ಹತ್ತೊಂಬತ್ತೂ ಕತೆಗಳಲ್ಲಿ ಬರುವ ಸಾಧಕರಲ್ಲಿ ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿ ಏಸುಕ್ರಿಸ್ತನಂತೆ ಚಿತ್ರಹಿಂಸೆಗೊಳಗಾಗಿ ಇರುವರು. ಅಂಥ ಸಂದರ್ಭದಲ್ಲಿ ಉತ್ತಮ ಕ್ಷಮಾಧಾರಿಗಳಾಗಿ ಆತ್ಮ ಸಾಕ್ಷಾತ್ಕಾರದ ಕಡೆಗೆ ತಮ್ಮ ಗಮನವನ್ನು ಕೇಂದ್ರೀಕರಿಸಿದರು. ವಿಶ್ವಮೈತ್ರಿಯನ್ನು ಸಾಧಿಸಿ ವಿಶ್ವಾನುಕಂಪದ ವಿಶ್ವಮಾನವರಾಗಿರುವರು. ಮುಂದೆ ಬಂದ ಸಾಧಕರು ಸಲ್ಲೇಖನ ತೆಗೆದುಕೊಂಡಾಗ ಅವರ ಮದಾರ್ಢ್ಯವನ್ನು ಹೆಚ್ಚಿಸಲು ವಡ್ಡಾರಾಧನೆಯ ಕತೆಗಳನ್ನು ಅವರೆದುರು ಪಠಿಸುವ ಸಂಪ್ರದಾಯ ಜೈನ ಪರಂಪರೆಯಲ್ಲಿ ಬೆಳೆಯಿತು. ಇಲ್ಲಿ ಬರುವ ಒಂದೊಂದು ಕತೆಯೂ ಭೇದವಿಜ್ಞಾನದ ವಜ್ರಕವಚವಾಗಿದೆ. (ಆತ್ಮವೇ ಬೇರೆ, ದೇಹವೇ ಬೇರೆ ಎಂಬ ಧೃಢವಿಶ್ವಾಸವನ್ನು ಭೇದವಿಜ್ಞಾನ ಅನ್ನುತ್ತಾರೆ).

ಇಲ್ಲಿಯ ಎಲ್ಲ ಕಥೆಗಳ ಪ್ರಾರಂಭ- "ಜಂಬೂ ದ್ವೀಪದ ಭರತಖಂಡದ ಒಂದು ನಾಡು". ಇಂತಹ ಪಟ್ಟಣ ಆಳುವ ರಾಜ ಅವನ ರಾಣಿಯ ಹೆಸರು ಮತ್ತು ಮಂತ್ರಿಗಳು ಹೀಗೆ. ರಾಜ, ರಾಜನ ಪರಿವಾರ, ಆಸ್ಥಾನದ ಜನರ ಕುರಿತು ವರ್ಣನೆ ಬರುತ್ತದೆ. ರಾಜ ಧರ್ಮಭೀರು. ವೈರಾಗ್ಯ ಉಂಟಾಯಿತು. ಇವು ಜೈನ ಧರ್ಮಕ್ಕೆ ಸಂಬಂಧಿಸಿದ ಕಥೆಗಳಾದ ಕಾರಣ ನ್ಯಾಯ, ವೈರಾಗ್ಯ, ಅಹಿಂಸೆ ಮೊದಲಾದ ನೈತಿಕ ಗುಣಗಳಿಗೆ ಬೆಲೆ ನೀಡಲಾಗಿದೆ. ಈ ಕತೆಗಳಲ್ಲಿ ದೇಸಿ ಭಾಷೆಯ ಸೊಗಡು, ಜಾನಪದದ ಹಿನ್ನೆಲೆ ಅಧಿಕವಾಗಿದೆ.

ಈ ಕಥೆಗಳು ಮತ್ತು ಅವು ಪ್ರತಿಪಾದಿಸುವ ನೀತಿಗಳು:

1. ಸುಕುಮಾರ ಸ್ವಾಮಿ ಕಥೆ: ಬೇರೆ ಬೇರೆ ಜನ್ಮ ಧರಿಸಿ ಮೋಕ್ಷ ಪಡೆದ ವಾಯುಭೂತಿಯ ಕಥೆ
2. ಸುಕೌಳ ಸ್ವಾಮಿ ಕತೆ: ಪರ್ವತದ ಮೇಲೆ ಹುಲಿ ಕ್ರೋಧದಿಂದ ಕಿತ್ತು ತಿನ್ನುವುದನ್ನು ಸಹಿಸಿ ಮೋಕ್ಷ ಪಡೆದ ಕತೆ
3. ಗಜಕುಮಾರನ ಕತೆ: ಹೊಟ್ಟೆ ಅಡಿಯಾಗಿ ಮಲಗಿಸಿ ಚರ್ಮ ಸುಲಿದು ಕಾದ ಕಬ್ಬಿಣದ ಮೊಳೆಗಳನ್ನು ಹೊಡೆದ ಕತೆ
4. ಸನತ್ ಕುಮಾರ ಚಕ್ರವರ್ತಿಯ ಕತೆ: ನೂರಾರು ವರ್ಷ ಕಾಲ ಏಳುನೂರು ವ್ಯಾಧಿಗಳನ್ನು ಸಹಿಸಿದ ಕತೆ
5. ಅಣ್ಣಿಕಾ ಪುತ್ರನ ಕತೆ: ನದಿಯಲ್ಲಿ ನಾವು ಮುಳುಗುವಾಗ ಧ್ಯಾನಮಾಡಿ ಮೋಕ್ಷ ಪಡೆದ ಕತೆ

ಹೀಗೆ ಒಟ್ಟು ಹತ್ತೊಂಬತ್ತು ಕಥೆಗಳಿವೆ. ಪ್ರತಿಯೊಂದು ಕತೆಯಲ್ಲಿಯೂ ಸುಂದರ ಉಪಕತೆಗಳಿವೆ. ಕಥೆಗಳು ತುಂಬಾ ದೊಡ್ಡ ಕಥೆಗಳಾದುದರಿಂದ ಇಲ್ಲಿ ಒಂದು ಉಪಕತೆಯನ್ನು ಮಾತ್ರ ನೋಡ ಬಹುದಾಗಿದೆ.

ಸುಕುಮಾರ ಸ್ವಾಮಿ ಕಥೆ

ಸುಮಿತ್ರ ಶ್ರೇಷ್ಠಿ ನಾಲ್ವರು ಕಾವಲು ಭಟರಿಗೆ ಎತ್ತರದ ಮಹಡಿಯ ಮೇಲಿಂದ ಹಣದ ಗಂಟು ಎಸೆಯುತ್ತಾನೆ. ಆ ನಾಲ್ಕು ಜನ ಕಾವಲು ಭಟರಲ್ಲಿ ಒಬ್ಬ ಆ ಹಣವನ್ನು ಲಪಟಾಯಿಸಿಬಿಡ್ತಾನೆ. ಅದು ಯಾರು ಅನ್ನೋದು ತಿಳಿಯದು. ಸುಮಿತ್ರ ಶ್ರೇಷ್ಠಿ ರಾಜನ ಬಳಿ ದೂರು ಕೊಡ್ತಾನೆ. ರಾಜ ತಳವಾರನನ್ನು ಕರೆದು, "ನಾಳೆ ಬೆಳಿಗ್ಗೆಯೊಳಗೆ ಇವರಲ್ಲಿ ಕಳ್ಳನಾರು ಎಂಬುದನ್ನು ಪತ್ತೆ ಹಚ್ಚಿ ಹಣದ ಗಂಟನ್ನು ಇಸಿದುಕೊಳ್ಳಬೇಕು. ತಪ್ಪಿದಲ್ಲಿ ಕಳ್ಳನಿಗೆ ಕೊಡಬೇಕಾದ ಶಿಕ್ಷೆ ನಿನಗೆ ಕೊಡುವೆ" ಎಂದು ಹೇಳಿದ. ತಳವಾರ ಆ ನಾಲ್ವರೊಡನೆ ಮನೆಗೆ ಬಂದ. ಮನೆಯಲ್ಲಿ ಸುಮತಿ ಎಂಬ ಅವನ ಮಗಳು ತನ್ನ ತಂದೆಯ ಮುಖದಲ್ಲಿಯ ಚಿಂತೆ ಗಮನಿಸಿ ಕಾರಣ ಕೇಳಿ, ತಂದೆಗೆ "ಅಪ್ಪ, ನೀನು ನಿಶ್ಚಿಂತನಾಗಿರು. ನಾನು ಇವರಲ್ಲಿ ಕಳ್ಳ ಯಾರು? ಹಣ ಎಲ್ಲಿದೆ? ಎಂಬ ಮಾಹಿತಿ ತೆಗೆಯುತ್ತೇನೆ" ಎಂದು ಹೇಳಿದಳು.

ಆಕೆ ನಾಲ್ಕು ಜನ ಕಾವಲು ಭಟರಿಗೆ ಚೆನ್ನಾಗಿ ಉಪಚರಿಸುತ್ತಾಳೆ. ಸಂಜೆ "ಈಗ ಒಂದು ಕಥೆ ಹೇಳುವೆ' ಎಂದು ಕಥೆಯೊಂದನ್ನು ಹೇಳಲು ಉಪಕ್ರಮಿಸಿದಳು.

"ಪಾಟಲೀಪುತ್ರ ಎಂಬ ನಗರ. ಅಲ್ಲಿ ಸುದತ್ತ ಶ್ರೇಷ್ಟಿ ಎಂಬ ವ್ಯಾಪಾರಿ ಇದ್ದ. ಅವನ ಮಗಳು ಸುಧಾಮಿ ಒಂದು ದಿನ ಗಂಗೆಯಲ್ಲಿ ಸ್ನಾನ ಮಾಡುವಾಗ ಮೊಸಳೆಯೊಂದು ಆಕೆಯ ಕಾಲು ಹಿಡಿಯಿತು. ಸುಧಾಮಿ ಅಲ್ಲಿಯೇ ಇದ್ದ ತನ್ನ ಸೋದರ ಮೈದುನ ದೇವದತ್ತನಿಗೆ ಸಹಾಯಕ್ಕೆ ಕೂಗಿದಳು. ಅವನು ಓಡಿಬಂದು ಆಕೆಯನ್ನು ಮೊಸಳೆಯಿಂದ ಪಾರು ಮಾಡಿದ. ಸ್ನಾನ ಮುಗಿದಮೇಲೆ ಸುಧಾಮಿ ತನ್ನ ಸೋದರ ಮೈದುನನಿಗೆ "ನೀನು ಇಂದು ನನ್ನ ಪ್ರಾಣ ಕಾಪಾಡಿದೆ, ನಿನಗೆ ಏನು ಕಾಣಿಕೆ ಬೇಕು ಕೇಳು" ಅಂದಳು. ದೇವದತ್ತ "ನೀನು ಮದುವೆಯಾದ ಮೊದಲ ರಾತ್ರಿ ನಿನ್ನ ಸರ್ವಾಲಂಕಾರ ಭೂಷಣಳಾಗಿ ನನ್ನನ್ನು ಭೇಟಿ ಮಾಡಬೇಕು" ಎಂದು ಕೇಳಿದ. ಸುಧಾಮಿ "ಆಯಿತು, ನಾನು ಆ ದಿನ ಬಂದು ನಿನ್ನನ್ನು ಭೇಟಿ ಮಾಡುತ್ತೇನೆ" ಎಂದು ಹೇಳಿದಳು. ಸುಧಾಮಿಯ ಮದುವೆಯಾಯಿತು, ಮದುವೆಯ ಮೊದಲ ರಾತ್ರಿ ಆಕೆ ಸರ್ವಾಲಂಕಾರ ಭೂಷಿತೆಯಾಗಿ ಈ ಮೊದಲು ಮಾತು ಕೊಟ್ಟಂತೆ ದೇವದತ್ತನ ಮನೆಗೆ ಹೊರಟಳು. ದಾರಿಯಲ್ಲಿ ಒಬ್ಬ ಕಳ್ಳ ಎದುರಾದ ಆಕೆಯ ಮೈಮೇಲಿನ ಆಭರಣಗಳನ್ನೆಲ್ಲ ಬಿಚ್ಚಿ ಕೊಡಲು ಹೇಳಿದ. ಸುಧಾಮಿ, "ನಾನೀಗ ನನ್ನ ಸೋದರ ಮೈದುನ ದೇವದತ್ತನಿಗೆ ಈ ಆಭರಣಗಳನ್ನು ತೋರಿಸಬೇಕು. ನಾನು ವಾಪಸು ಬರುವಾಗ ನೀನು ಆಭರಣಗಳನ್ನು ತೆಗೆದುಕೊಳ್ಳಬಹುದು" ಎಂದು ಹೇಳಿದಳು. ಕಳ್ಳನಿಗೆ ಆಕೆಯ ಮಾತಿನಲ್ಲಿ ಭರವಸೆ ಅನಿಸಿತು. ಆಕೆಗೆ ತಾನು ಅಲ್ಲಿಯೇ ಕಾಯುತ್ತಿರುವುದಾಗಿ ಹೇಳಿ, “ನೀನು ವಾಪಸ್ಸು ಬಾ" ಎಂದು ಕಳಿಸಿದ. ಆದರೆ ಏನೇ ಆಗಲಿ ಎಂದು ಆಕೆಗೆ ತಿಳಿಯದಂತೆ ಹಿಂಬಾಲಿಸ

ತೊಡಗಿದ. ಆಕೆ ಮುಂದೆ ಹೋಗುತ್ತಿರಬೇಕಾದರೆ ರಾತ್ರಿ ಗಸ್ತು ತಿರುಗುವ ತಳವಾರನು ಸುಧಾಮಿ ಅಪರಾತ್ರಿಯಲ್ಲಿ ಇಷ್ಟೊಂದು ಅಲಂಕಾರದೊಂದಿಗೆ ತಿರುಗುವ ಹೆಂಗಸು ವ್ಯಭಿಚಾರಿ ಕುಲೀನ ಸ್ತ್ರೀ ಇರಲಿಕ್ಕಿಲ್ಲ ಎಂದು ಆಕೆಯನ್ನು ಬಂಧಿಸಲು ಮುಂದಾದ. ಸುಧಾಮಿ ಅವನಿಗೂ ಕಳ್ಳನಿಗೆ ಹೇಳಿದಂತೆ ತಾನು ಸೋದರ ಮೈದುನ ದೇವದತ್ತನ ಬಳಿಗೆ ಹೋಗುತ್ತಿರುವ ಸಮಾಚಾರ ತಿಳಿಸಿ ಮರಳಿ ಬರುವಾಗ ಬಂಧಿಸಬಹುದು ಎಂದು ಹೇಳಿದಳು. ತಳವಾರನೂ "ಆಯಿತು ಇದೇ ದಾರಿಯಲ್ಲಿ ವಾಪಸು ಬಾ, ನಾನು ಇಲ್ಲಿಯೇ ಕಾದಿರುವೆ" ಎಂದು ಹೇಳಿದ ಮತ್ತು ಸುಧಾಮಿಯ ಅರಿವಿಗೆ ಬರದಂತೆ ಆಕೆಯನ್ನು ಅನುಸರಿಸತೊಡಗಿದ. ಸುಧಾಮಿ ಇನ್ನೂ ಮುಂದೆ ಹೋದಾಗ ಒಬ್ಬ ಹಸಿದ ಬ್ರಹ್ಮರಾಕ್ಷಸ ಎದುರಿಗೆ ಬಂದು "ನಾನು ಹಸಿದಿರುವೆ, ನಿನ್ನನ್ನು ತಿನ್ನಬೇಕು" ಎಂದು ಹೇಳಿತು. ಸುಧಾಮಿ ಬ್ರಹ್ಮರಾಕ್ಷನಿಗೂ ತಾನು ಹೋಗುವ ಉದ್ದೇಶ ತಿಳಿಸಿ ಮರಳಿ ಬರುವಾಗ ತಿನ್ನಬಹುದು ಅಂದಳು. ಅದೂ ಕೂಡ "ಹೋಗು, ನಾನಿಲ್ಲಿ ನಿನಗಾಗಿ ಕಾದಿರುವೆ" ಎಂದು ಹೇಳಿ ಅದೂ ಕೂಡ ಇದೇನು ಸಮಾಚಾರ ತಿಳಿಯಬೇಕು ಎಂದು ಸುಮತಿಯ ಹಿಂದೆ ಹೊರಟಿತು. ಅಂದರೆ ಸುಧಾಮಿಗೆ ತಿಳಿಯದಂತೆ ಬ್ರಹ್ಮ ರಾಕ್ಷಸ, ತಳವಾರ ಮತ್ತು ಕಳ್ಳ ಆಕೆಯ ಹಿಂದೆ ಹೊರಟಿದ್ದರು. ಸುಧಾಮಿ ದೇವದತ್ತನ ಮನೆ ಬಾಗಿಲು ತಟ್ಟಿದಳು. ದೇವದತ್ತನಿಗೆ ಆಶ್ಚರ್ಯ. ಸುಧಾಮಿ ಅಲಂಕಾರ ಮತ್ತು ಸಕಲ ಆಭರಣ ಭೂಷಿತೆಯಾಗಿ ಬಂದಿದ್ದಾಳೆ. ಆಕೆ ತಾನು ಮೊಸಳೆಯಿಂದ ಪ್ರಾಣ ಕಾಪಾಡಿದ ದಿನ ಮಾತು ಕೊಟ್ಟ ಪ್ರಕಾರ ಅವನನ್ನು ಭೇಟಿ ಮಾಡಲು ಬಂದುದಾಗಿ ತಿಳಿಸಿದಳು. ದೇವದತ್ತ "ಅಂದು ಸುಮ್ಮನೇ ಆ ರೀತಿ ಬೇಡಿಕೆ ಇಟ್ಟು ಅಂದೇ ಮರೆತು ಬಿಟ್ಟೆ ಕೂಡ. ಹೋಗು ರಾತ್ರಿ ತುಂಬಾ ಆಗಿದೆ ಬೇಗ ಹೋಗಿ ಮನೆ ಸೇರಿಕೋ" ಎಂದು ಹೇಳಿ ಕಳುಹಿಸಿದ. ಸುಧಾಮಿ ಮೊದಲು ಬ್ರಹ್ಮರಾಕ್ಷಸ ಇರುವೆಡೆಗೆ ಬಂದಳು ಹಾಗೂ "ಈಗ ನೀನು ನನ್ನನ್ನು ತಿಂದುಹಾಕಬಹುದು" ಅಂದಳು. ಬ್ರಹ್ಮ ರಾಕ್ಷಸ "ನೀನು ಸತ್ಯಸಂಧೆ. ನಿನ್ನನ್ನು ನಾನು ತಿನ್ನಲಾರೆ, ಮನೆಗೆ ಹೋಗು" ಎಂದು ಕಳಿಸಿತು. ಸುಧಾಮಿ ಈಗ ತಳವಾರ ಇರುವ ಸ್ಥಳಕ್ಕೆ ಬಂದಳು. ಆ ವೇಳೆಗೆ ಅವನೂ ಅಲ್ಲಿಗೆ ಬಂದಿದ್ದ. ಸುಧಾಮಿ "ಈಗ ನೀವು ನನ್ನನ್ನು ಬಂಧಿಸಬಹುದು ನನ್ನ ಕೆಲಸ ಮುಗಿದಿದೆ" ಅಂದಳು. ತಳವಾರ "ನಾನು ಈ ರಾತ್ರಿ ವೇಳೆ ತಿರುಗಾಡುವ ನೀನು ಅನೈತಿಕ ಸ್ತ್ರೀ ಅಂದುಕೊಂಡಿದ್ದೆ, ನೀನು ಕುಲೀನ ಸ್ತ್ರೀ, ನೀನು ಸುರಕ್ಷಿತವಾಗಿ ಮನೆಗೆ ಹೋಗು" ಎಂದು ಹೇಳಿ ಕಳುಹಿಸಿದ. ಈಗ ಸುಧಾಮಿ ಕಳ್ಳ ಇದ್ದ ಸ್ಥಳಕ್ಕೆ ಆಭರಣ ತೆಗೆದುಕೊಡ ಹೋದಳು. ಕಳ್ಳನಿಗೆ ನಾಚಿಕೆಯಾಯಿತು ಅವನು *ಕ್ಷಮಿಸಿ ತಾಯಿ, ನಿನ್ನಂಥ ಪ್ರಾಮಾಣಿಕ ಹೆಂಗಸಿನ ಆಭರಣ ಅಪಹರಿಸಲಾರೆ. ಮನೆಗೆ ಹೋಗಿ" ಎಂದು ಸುಧಾಮಿಗೆ ಬೀಳ್ಕೊಟ್ಟ...

ಈ ಕಥೆ ಹೇಳಿ ಮುಗಿಸಿದ ಸುಮತಿ ಆ ನಾಲ್ವರು ಭಟರಿಗೆ ನಿಮಗೆ ದೇವದತ್ತ, ಬ್ರಹ್ಮರಾಕ್ಷಸ, ರಾತ್ರಿ ಗಸ್ತು ತಿರುಗುವ ತಳವಾರ ಮತ್ತು ಕಳ್ಳ ಇವರಲ್ಲಿ ಯಾರು ಇಷ್ಟವಾದರು" ಎಂದು ಕೇಳಿದಳು. ಆಗ ಅವರಲ್ಲಿ ಕಳ್ಳನಿದ್ದವ, "ನೋಡಿ ಬೆಲೆಬಾಳುವ ಆಭರಣಗಳನ್ನು ಆಕೆ ತೆಗೆದುಕೋ ಅಂದರೂ ತೆಗೆದುಕೊಳ್ಳದೆ ತ್ಯಾಗ ಮಾಡಿದ ಅವನೇ ಇಷ್ಟ " ಎಂದು ಹೇಳಿದ. ಸುಮತಿ ಅವನಿಗೆ "ನೀನು ಹೇಳಿದ್ದು ಸರಿ, ನಾನು ನಿನ್ನನ್ನು ಮದುವೆಯಾಗ ಬಯಸುವೆ, ನಾವಿಬ್ಬರು ಬೆಳಿಗ್ಗೆ ಓಡಿ ಹೋಗೋಣ, ಆದರೆ ಜೀವನಕ್ಕೆ ನಿನ್ನಲ್ಲಿ ಏನಾದರೂ ಇದೆಯಾ?" ಎಂದು ಕೇಳಿದಳು. ಕಳ್ಳ ತಾನು ಎತ್ತಿದ ಸುಮತಿ ಶ್ರೇಷ್ಠಿಗಳ ಗಂಟು ತಂದು ಕೊಟ್ಟ. ಮರುದಿನ ಬೆಳಿಗ್ಗೆ ಸುಮತಿ ಆ ಕಳ್ಳನನ್ನು ಮತ್ತು ಅವನು ಎಗರಿಸಿದ ಹಣದ ಗಂಟನ್ನು ತಂದೆಗೆ ಒಪ್ಪಿಸಿದಳು.

ಹೀಗೆ ವಡ್ಡರಾಧನೆಯ ಈ ಉಪಕತೆಯಲ್ಲಿ ಮನರಂಜನೆ ಜೊತೆಗೆ ಕಳ್ಳನ ಮನೋಭಾವನೆ ಕಳ್ಳನಂತೆಯೇ ಇರುವುದು ಎಂದು ತಿಳಿಸಿಕೊಡುವರು. ವಡ್ಡರಾಧನೆಯಲ್ಲಿ ಇಂತಹ ಮಾರ್ಮಿಕ ಉಪಕತೆಗಳು ಬಹಳ ಬರುತ್ತವೆ.

ಊಹೇನ ಗಡಿವೊಡೆದು

ಕಾಳಗರ್ಭದಲ್ಲಿ ತಲೆಕೆಳಗಾಗಿ ತೂಗಿತೋ
ಹುಡುಕಿ ಹುಡುಕಿ ಹೊಸತು ಕೇಡು
ಉಡುಕಿಯಾಗಿ ಊಡಿತೋ

ಊಹೇನ ಗಡಿವೊಡೆದು
ಕಟ್ಟೆ ಮುರಿದು ಏರನೇರಿ
ಛಕ ಛಕನೆ ಹಬ್ಬಿತೋ
ಜಗದ ಮೂಲೆ ಮೂಲೆ ತಬ್ಬಿತೋ
ಗಾಳಿಯಲ್ಲಿ ಸೇರಿ ಹಾರಿ
ಎದೆಯನ್ನು ಹೊಕ್ಕಿತೊ
ಬೆಂಕಿಯಾಗಿ ಜೀವವನ್ನೆ ಬಸಿಯಿತೋ

ಕೈಯ ತಪ್ಪಿ ಜಾರಿತೋ
ನಳಿಗೆಯೊಳಗೆ ಗುರಿಯನಿಟ್ಟು
ನರಮೇಧಕೆ ಅಣಿಯಾಯಿತೋ

ಬಿಲ್ಲನಾಟ ಗೇಟನ್ನು ತೆರೆದಿತೋ
ಫಾಸಿಯಾಟ ಪಾಸಿಯನೆಸೆದಿತೋ
ಟ್ರಂಪನಾಟ ಝಿನ್ಪಿಯ ಕಾಟವಾಯಿತೋ

ನಾನೇ ಮೇರು ನಾನೇ ಸೂರು
ನೋಡು ನನ್ನ ಆಟವ
ಜಗದ ಅಟ್ಟವೆನದೆ
ಆಡುವೆ ಮೇಲಾಟವ
ಕಬ್ಬಿಣ ತೆರೆಮರೆಯಲಿ
ಹೆಣೆದು ಬಿಟ್ಟ ಜಾಲವ

ಹೂಣ ಜಾಣ ತಾಣ ಚಾಣದಲ್ಲಿ
ಜಗವು ಕಾಣದಾಗಿ ಹೋಯಿತೋ
ಸ್ತಬ್ದವಾಗಿ ಹಿಮಾಲಯವು
ಕೆನ್ನಾಲಗೆ ಚಾಚಿತೋ

ಯಾರು ಯಾರು ಏನು ಏನು
ಅನ್ನುವಷ್ಟರಲ್ಲಿ ಜಿಗಿದು
ಕುತ್ತಿಗೆಗೆ ಕುತ್ತಾಯಿತೋ
ಉಸಿರು ಗಾಳಿಯಾಯಿತೋ
ಮಾಡಿದಂಥ ತಪ್ಪನೆಲ್ಲ ಒಪ್ಪಮಾಡು
ಮಗನೆ ಎಂದು ನೇಣು ಬಿಗಿಯಿತೋ

ಅಲ್ಲಿ ಇಲ್ಲಿ ಕಲ್ಲಿ ಚೆಲ್ಲಿ ಮೇಲೆ ಕೆಳಗೆ
ಎನ್ನುವಲ್ಲಿ ಎಲ್ಲ ನೆಲಸಮವಾಯಿತೋ
ಹಳ್ಳದೊಳಗೆ ಡಬ್ಬಡಬ್ಬ ಸೇರಿಹೋಯಿತೋ
ಕೋಟಿ ಕೋಟಿ ನೋಟು ಬಾಟು
ಬರಡು ಬೊಂಬೆಯಾಯಿತೋ

ಅಲ್ಲಿ ತಬ್ಬು ಇಲ್ಲಿ ಎಬ್ಬು
ಬವಣೆ ಬೊಬ್ಬೆಯಾಯಿತೋ
ಆನು ತಾನು ನಾನು ನೀನು
ಏನೂ ಅರಿದಾಯಿತೋ

ಕುರುಡರೆಲ್ಲ ಆನೆ ತಬ್ಬಿ
ಕಂಬ ಗಿಂಬ ಬಾಗಿ ಬಳಸು
ಹಾರೆ ಮೊರವು ಎಂದರೋ
ಗಂಟಲನ್ನು ಹರಿದರೋ
ಕಂಠನಾಳ ಪ್ರನಾಳದಲ್ಲಿ
ದ್ರವವ ಸ್ರವಿಸಿ ಹಿಡಿದರೋ

ಅಲೆಯ ಮೇಲೆ ಅಲೆಯ ಫೇರಿ
ಸುತ್ತಲೆಲ್ಲ ಬರಿಯ ಗೋರಿ
ಲಗೋರಿ ಕಾಣದಾಯಿತೊ
ಬಟ್ಟೆ ಬಯಲೆ ಬಟಾ ಬಯಲು
ಮೌನರಾಜ್ಯವಾಳಿತೋ
ಹುಂ... ಊಹುಂ.. ಉಡುಗಿತೋ

ಉಸಿರಿಗಾಗಿ ಮನೆಯು ಮಾರು
ಎಲ್ಲಾ ಸೋರಿ ಹೋಯಿತೋ
ಬಾಡಿದುಸಿರು ಕತ್ತಲನ್ನೆ ತುಂಬಿತೋ
ಸ್ಯಾಮ ಶ್ಯಾಮ ಗೋಮ ಸೋಮ
ಭೀಮರೆಲ್ಲ ಆಡಿದರ್ಥ ಅನರ್ಥವೋ
ಗಮ್ಮತ್ತು ಗಬ್ಬಾಗಿ ಹೊಲಿಗೆ ಹರಿದು
ತೂತು ಮಾತು ಹೊಲಸು ಹರಡಿತೋ

ಕಾಳಸಂತೆಕೋರರೆಲ್ಲ ಚಕೋರರಾದರೋ
ಚಕಾರವನ್ನೆತ್ತಿದವರ ಚಕಚಕನೆ ಹರಿದರೋ
ಬಕಬಕನೆ ಉಂಡರೋ

ಜೀವ ಹೀರಿ ಹಾರಿ ಹಾರಿ ಮಸಣದಲ್ಲಿ
ಸಾಲು ಹೆಣದ ಮಾಟವೊ
ಹಳೆಯ ರೂಪ ಕಳೆದು ಹೊಸದು
ಒಡೆದು ಒಡೆದು ಕೂಡಿ ಒಡೆದು
ಹೊಸದು ಹೊಸೆದು ಬಿಮ್ಮನಾಟವೋ

ಇದುವೆ ಬ್ರಹ್ಮ ಇದುವೆ ವಿಷ್ಣು
ಇದುವೇ ಶಿವನ ತಾಂಡವ
ಹುರಿದು ಮುಕ್ಕಿ ಖಾಂಡವ
ಅಂದು ಕುಣಿದ ಇಂದು ಕುಣಿದ
ಹೆಜ್ಜೆ ಹೆಜ್ಜೆ ತಾಳದ ಅರಿವು
ಅರಳಲಿಹುದೇ ಬಾಳ ಚೆಲುವು

ನನಗೆ ನಾನೇ ನಾನೇ ದೇವ
ಬಿಡುವೆನೆ ವಿತಂಡವ
ತಂಡದಲಿ ತಂಪು ಕಂಡು
ಬೆಳಕು ಮಾಡು ತಾಣವ
ಇದು ಕವಿಚೆದ ರಣಘೋಷವೊ
.

. ಬೆಂಶ್ರೀ ರವೀಂದ್ರ

ಗೀಯ ಗೀಯ ಪದ

ಎಲ್ಲಿರುವಿ ಎಲ್ಲಿರುವಿಯೋ ಸಿವನೇ

ಎಲ್ಲಿರುವಿ ಎಲ್ಲಿರುವಿಯೋ ಸಿವನೆ – ನೀ
ಎಲ್ಲಿರುವಿ ಎಲ್ಲಿರುವಿಯೋ (೨)

ಗೀಯ ಗಾ ಗಾಗೀಯಗಾ
ಗೀಯ ಗೀಯ ಗಾಗೀಯಗಾ ಆ ಆ ಆ.. (೨)

ಹಗಲು ರಾತ್ರಿ ಒದ್ದುಕೊಂಡು
ಹೆಗಲ ಭಾರ ಹೊತ್ತುಕೊಂಡು
ಸಂಪ್ಸಾರಕ್ಕ ಉಣಿಸಲಾರೆ
ಕಂಡು ನಗುತ ಕುಂತೀ ಏನು ಊ ಊ ಊ ಊ....

ಎಲ್ಲಿರುವಿ ಎಲ್ಲಿರುವಿಯೊ ಸಿವನೆ....
ಗೀಯಗಾ ಗಾಗೀಯಗಾ....

ಹೊತ್ತಿಗೆಷ್ಟೊ ಕುತ್ತು ಬಂದೊ
ನೆತ್ತಿಯಿಂದ ಬೆಂಕಿಯುಗಿದೊ
ಬಿತ್ತ ಬೀಜ ನೆಲವೆ ತಿಂದೊ
ಅತ್ತರೇನು ಕೇಳಲೊಲ್ಲಿ ಈ ಈ ಈ ಈ.....

ಎಲ್ಲಿರುವಿ ಎಲ್ಲಿರುವಿಯೊ ಸಿವನೆ....
ಗೀಯಗಾ ಗಾಗೀಯಗಾ....

ಚಚ್ಚಿ ಕೆಡವಿ ಮಳಿಯು ಬಿತ್ತೊ
ಕೊಚ್ಚುತ್ತೆಲ್ಲ ರಾಡಿಯಾತೊ
ಗಚ್ಚು ಗಾರೆ ಬಿದ್ದು ಹೋತೊ
ನೆಚ್ಚಿದೆಮ್ಮ ಕ್ವಾಣ ಹೆತ್ತೊ ಓ ಓ ಓ ಓ...

ಎಲ್ಲಿರುವಿ ಎಲ್ಲಿರುವಿಯೋ ಸಿವನೆ....
ಗೀಯಗಾ ಗಾಗೀಯಗಾ....

ತಪ್ಪದಂತ ಬರುತ್ತಾರ
ಕಪ್ಪಕೊಟ್ಟು ಬೇಡುತಾರ
ಗಪ್ಪ ಕುರಸಿ ಹಿಡಿದು ನಮ್ಮ
ತಿಪ್ಪಿಯೊಳಗ ಕೆಡುವುತಾರ ಆ ಆ ಆ ಅ..

ಎಲ್ಲಿರುವಿ ಎಲ್ಲಿರುವಿಯೋ ಸಿವನೆ....
ಗೀಯಗಾ ಗಾಗೀಯಗಾ....

ಕಾಡ ಮರಗಳೆಲ್ಲ ಇವಗ
ಅಡಿಕಿ ಎಲಿ ಆಗಿಹೋತೊ
ಗಡಿಗಿ ಒಡದು ಮಣ್ಣು ಬಿತ್ತೊ
ಸುಡಗಾಡೆಲ್ಲ ಬದಿಗ ಬಂತೊ ಓ ಓ ಓ ಓ...

ಎಲ್ಲಿರುವಿ ಎಲ್ಲಿರುವಿಯೋ ಸಿವನೆ....
ಗೀಯಗಾ ಗಾಗೀಯಗಾ....

ಕಳ್ಳ ಸುಳ್ಳ ಖದೀಮರು
ಲೂಟಿ ಹೊಡದು ಕುಣಿಯುತ್ತಾರ
ಚಾಟಿ ಬೀಸಿ ಖೂಳರನ್ನ
ಮೂಟೆ ಕಟ್ಟಿ ಎಸಯದಲೆ ಏ ಏ ಏ ಏ....

ಎಲ್ಲಿರುವಿ ಎಲ್ಲಿರುವಿಯೋ ಸಿವನೆ....
ಗೀಯಗಾ ಗಾಗೀಯಗಾ....

ತಣ್ಣ ಹಿಂಗ ಕುಂದರ ಬ್ಯಾಡ
ಕಣ್ಣ ಮೂರ ಇಟಕೊಂಡೀಯ
ಸುಣ್ಣ ಬೆಣ್ಣೆ ಬ್ಯಾರಿ ಮಾಡೊ
ಗಣ್ಣಪ್ಪನ ತಂದಿ ಸಿವನ ಆ ಆ ಆ ಆ ......

ಎಲ್ಲಿರುವಿ ಎಲ್ಲಿರುವಿಯೋ ಸಿವನೆ....
ಗೀಯಗಾ ಗಾಗೀಯಗಾ....

– **ರತ್ನ**

ಜನಪದ ಧಾಟಿಯಲ್ಲಿ ಹೊಸ ಪ್ರಯೋಗದ ನನ್ನ ಗೀಯಗಾ ಗಾಗೀಯ ಗಾ ಗೀಯ ಗೀಯ ಗಾ ಪದ.

ಊರುಕೇರಿ

ನಮ್ಮೂರು–ಮೂರೂರು

ಜೀ.ವಿ. ಹೆಗಡೆ

"ನಮ್ಮೂರ ಹೆಸರು ಮೂರೂರು, ಊರು ಕುಮಟಾಕ್ಕೆ ಸ್ವಲ್ಪ ದೂರು. ನೋಡುಗರ ಮನವ ನೋಡುತಲೆ ಗೆಲುವ ಕಮನೀಯವಾದ ಊರು" ಅಂತ ನನ್ನ ಶಿಕ್ಷಕರೊಬ್ಬರು ನನ್ನ ಊರಿನ ಕುರಿತಾಗಿ ಹೇಳಿದ್ದಾರೆ. ಹಿಂದೊಬ್ಬರು ನಮ್ಮೂರಿನ ವಕೀಲರು 'ಮೂರೂರು ಛೋಟಾ ಕಾಶ್ಮೀರ' ಅಂತ ಹೇಳಿ ಅದರ ಕುರಿತಾಗಿ ಒಂದು ಪುಸ್ತಕವನ್ನೇ ಬರೆದು ವಿವರಿಸಿದ್ದಾರೆ. 'ಹೆತ್ತವರಿಗೆ ಹೆಗ್ಗಣ ಮುದ್ದು' ಅಂತ ನೀವು ಹೇಳಬಹುದು. ಹಾಗಾದರೆ ನನ್ನ ವಿವರಣೆಯನ್ನು ನೀವು ಕೇಳಿ.

ನಮ್ಮೂರು ಅತ್ತ ಮಲೆನಾಡೂ ಅಲ್ಲದ, ಇತ್ತ ಕರಾವಳಿ ಅಂತಲೂ ಹೇಳಿಸಿಕೊಳ್ಳದ ಒಂದು ಹಳ್ಳಿ. ಸಹ್ಯಾದ್ರಿಯ ಪರ್ವತ ಶ್ರೇಣಿಯ ಮೇಲೆ ನಿಂತು, ತನ್ನ ಕೊಡಲಿಯನ್ನು ದೂರ ಎಸೆದು ಸಮುದ್ರ ರಾಜನಿಗೆ ಗಡಿಯನ್ನು ಗುರುತಿಸಿಕೊಟ್ಟನಂತೆ ಕೊಡಲಿರಾಮ. ಮಧ್ಯದ ಭೂಪ್ರದೇಶವನ್ನು ಬ್ರಾಹ್ಮಣರಿಗೆ ದಾನ ಮಾಡಿದ ಅಂತ ಅಂತೆ ಕಂತೆ ಕತೆ.

ಬ್ರಾಹ್ಮಣರಿಗೆ ದಾನ ಮಾಡಿದ್ದಾನೆ ಅಂತ ಗುರುತಿಸಲ್ಪಟ್ಟ ಭೂಪ್ರದೇಶದಲ್ಲಿಯೇ ನಮ್ಮ ಊರು ಬರುತ್ತದೆ. ನಮ್ಮ ಜಿಲ್ಲೆಯನ್ನು ಮಾತ್ರ ಗಣನೆಗೆ ತಂದುಕೊಂಡಲ್ಲಿ ಕಾರವಾರದ ಮಾಜಾಳಿಯಿಂದ ಭಟ್ಕಳದ ಸರ್ಪನಕಟ್ಟೆಯ ತನಕ ಸಮುದ್ರ ತೀರ ಹರಡಿಕೊಂಡಿದೆ. ಉತ್ತರದಲ್ಲಿ ಕ್ಯಾಸಲ್ ರಾಕ್ ನಿಂದ ಹಿಡಿದು ದಕ್ಷಿಣದಲ್ಲಿ ಮಲೆಮನೆ ಘಟ್ಟದ ತನಕ ನಮ್ಮ ಜಿಲ್ಲೆಯ ಮಲೆನಾಡು ವ್ಯಾಪಿಸಿದೆ.

ಸಹ್ಯಾದ್ರಿಯ ಅಕ್ಕಪಕ್ಕ ಹರಡಿದ ದಟ್ಟ ಕಾಡಿನಿಂದ ಕೂಡಿದ ಮಲೆನಾಡಿನ ಪ್ರದೇಶವಲ್ಲ ನಮ್ಮ ಊರು. ಸಮುದ್ರದ ಉಸುಕನ್ನು ಹಾರಿಸಿ ತೂರಿಸಿ ವಾತಾವರಣವನ್ನೆಲ್ಲಾ ಮರಳುಮಯ ಮಾಡುವ ಬಿಸಿಗಾಳಿಯ ಸೋಂಕೂ ನಮ್ಮೂರಿಗಿಲ್ಲ. ಸಹ್ಯಾದ್ರಿಯ ಅಂಚಿನಿಂದ ಸುಮಾರು ಹದಿನೈದು ಇಪ್ಪತ್ತು ಕಿಲೋಮೀಟರ ದೂರ. ಆದರೆ ಸಮುದ್ರದಿಂದ ಕೇವಲ ಆರು ಕಿಲೋಮೀಟರ್ ದೂರ.

ಬೆಟ್ಟದ ಪ್ರದೇಶವನ್ನು ಮಲೆನಾಡು ಅಂತ ಹೇಳಿದಲ್ಲಿ ನಮ್ಮೂರೂ ಮಲೆನಾಡೇ. ಅರವತ್ತು ಎಪ್ಪತ್ತು ವರ್ಷಗಳ ಹಿಂದೆ, ನನ್ನ ಎಳವೆಯಲ್ಲಿ ಹುಲಿ ಓಡಾಡುವ ಪ್ರದೇಶವಾಗಿತ್ತು ನಮ್ಮೂರು. ನನ್ನ ದೊಡ್ಡಪ್ಪನೇ ಒಂದು ಹುಲಿಯನ್ನು ಬಂದೂಕಿನಿಂದ ಕೊಂದಿದ್ದಾನಂತೆ. ನನ್ನ ಅಜ್ಜ ಹುಲಿದಾಳಿಗೆ ಸಿಕ್ಕು ತಲೆಗೆ ಸುತ್ತಿದ್ದ ಮುಂಡಾಸವನ್ನು ಕೈಗೆ ಸುತ್ತಿಕೊಂಡು ಅದನ್ನೇ ಹುಲಿಯ ಬಾಯಿಗೆ ಕೊಟ್ಟು ಬಚಾವಾದನಂತೆ. ನಾಯಿಮರಿ ಅಥವಾ ಕರುವನ್ನು ಕೊಟ್ಟಿಗೆಗೇ ಬಂದು ಒಯ್ಯುತ್ತಿತ್ತಂತೆ. ಬಿಟ್ಟ ದನ ಕೊಟ್ಟಿಗೆಗೆ ಬರದೇ ಇದ್ದಲ್ಲಿ ಹುಡುಕುವ ಅವಶ್ಯಕತೆಯೇ ಇರಲಿಲ್ಲವೆನ್ನಿ.

ಬೆಟ್ಟದ ಪ್ರದೇಶ ಅಂದರೆ ಎತ್ತರವಾದ ಪರ್ವತ, ಹಾಗೇ ತಗ್ಗಿನಲ್ಲಿ ಇರುವ ಆಳವಾದ ಕೊಳ್ಳ. ಕಣಿವೆ ಪ್ರದೇಶ. ಅದಕ್ಕಾಗಿಯೇ ನಮ್ಮ ಊರಿಗೆ ಛೋಟಾ ಕಾಶ್ಮೀರ ಎನ್ನುತ್ತಾರೆ. ಚಾರಣಕ್ಕೆ ಹೇಳಿಮಾಡಿಸಿದ ಪರ್ವತ ಪ್ರದೇಶ ಹಾಗೂ ಅದರ ಮೇಲೆ ಮೈಲಿಗಟ್ಟಲೆ ವಿಸ್ತಾರವಾದ ಪ್ರಸ್ಥಭೂಮಿ. ನೇರಲೆ, ಜಂಬೆ, ಹಲಸು, ಮತ್ತಿ, ಹೊನಗಲು, ಬೀಟೆ ಮೊದಲಾದ ಪಶ್ಚಿಮ ಘಟ್ಟದಲ್ಲಿ ಕಾಣಸಿಗುವ ಅಮೂಲ್ಯ ವೃಕ್ಷ ಸಂಪತ್ತು ನಮ್ಮಲ್ಲಿ ಹೇರಳವಾಗಿ ದೊರಕುತ್ತಿತ್ತು. ಈಗ ಆ ವೃಕ್ಷಗಳನ್ನು ಅಲ್ಲಲ್ಲಿ ಕಾಣಬಹುದಷ್ಟೆ. ಆದರೂ ತಲೆ ಎತ್ತಿರುವ ಅಕೇಶಿಯಾ ತೋಪುಗಳು ಸೂರ್ಯನ ಕೆಂಗಣ್ಣಿನಿಂದ ಭೂಮಿಯನ್ನು ರಕ್ಷಿಸಿವೆ.

ಕರಾವಳಿಯಲ್ಲಿ ಬೆಳೆಯಲು ಕಷ್ಟಸಾಧ್ಯವಾದ ಅಡಿಕೆ ಹಾಗೂ ಬಾಳೆಗಳು ನಮ್ಮೂರಿನಲ್ಲಿ ಯಥೇಷ್ಟವಾಗಿ ಬೆಳೆಯುತ್ತವೆ. ಇವುಗಳ ಜೊತೆ ಕಬ್ಬು, ಜಾಯಿಕಾಯಿ, ಕೋಕೋ, ಹಲಸು, ಮಾವು, ಅನಾನಸು, ಗೇರು, ಭತ್ತ ಮುಂತಾದವು ಉಪಬೆಳೆಗಳು. ಈಗ ಕಬ್ಬಿನ ಹಾಲು ಕುದಿಸಿ ಬೆಲ್ಲ ಮಾಡಲು ಬೇಕಾದ ಕಟ್ಟಿಗೆಯ ಅಭಾವದಿಂದ ಹಾಗೂ ಕೆಲಸಗಾರರ ಕೊರತೆಯಿಂದ ಕಬ್ಬು ಬೆಳೆಯುವದು ಕಡಿಮೆಯಾಗಿದೆ. ಕರಾವಳಿಯ ಮುಖ್ಯ ಬೆಳೆಯಾದ ತೆಂಗಿಗೆ ನಮ್ಮ ಊರೇ ಪ್ರಸಿದ್ಧ. ಈಗಲೂ ಮೂರೂರಿನ ತೆಂಗಿನ ಕಾಯಿಗೆ ಸಿರ್ಸಿಯಂತಹ ಪೇಟೆಗಳಲ್ಲಿ ಹೆಚ್ಚು ಬೇಡಿಕೆ.

ನಮ್ಮೂರು, ಬೆಟ್ಟಗಳಿಂದ ಕೂಡಿದ್ದರೂ ಯಾಲಕ್ಕಿ, ಕಿತ್ತಳೆ ಹಾಗೂ ಕಾಫಿಗಳನ್ನು ನಾವು ಬೆಳೆಯಲು ಸಾಧ್ಯವಾಗುತ್ತಿಲ್ಲ. ಜೊತೆಯಲ್ಲಿ ಆ ಜವುಳು ಪ್ರದೇಶಗಳಲ್ಲಿ ಯಥಾಶಕ್ತಿ ಉಪದ್ರವ ಕೊಡುವ ರಕ್ತ ಪಿಪಾಸುಗಳಾದ ಉಂಬುಳಗಳ ಹಾವಳಿಯೂ ಇಲ್ಲವೆನ್ನಿ. ಆ ಬೆಳೆಗಳನ್ನು ಬೆಳೆಯಲು ಬೇಕಾದ ತಂಪು ಹವಾಮಾನ ನಮ್ಮೂರಿನಲ್ಲಿಲ್ಲದಿದ್ದುದೇ ಕಾರಣ. ಈಗಲೂ ಘಟ್ಟದ ಮೇಲಿನ ಜನ ನಮ್ಮಲ್ಲಿಗೆ ಮಳೆಗಾಲ ಹಾಗೂ ಬೇಸಿಗೆಯಲ್ಲಿ ಬರಲು ಹೆದರುತ್ತಾರೆ. ಅದಕ್ಕೆ ಇಲ್ಲಿಯ ಆರ್ದ್ರತೆಯೇ ಕಾರಣ. ಇದರಿಂದ ಜನ ಬೆವರುತ್ತಾರೆ. ಈ ಬೆವರು ಘಟ್ಟದ ಮೇಲಿನ ಜನರಿಗೆ 'ಅಸಹ್ಯ'ವಾಗುವುದು.

ಊರಿನ ಕೊಳ್ಳದ ಭಾಗದಲ್ಲಿ ಅಡಿಕೆ, ತೆಂಗು, ಕಬ್ಬು, ಭತ್ತ ಮುಂತಾದ ಬೆಳೆಗಳನ್ನು ಬೆಳೆಯುತ್ತೇವೆ. ಸಮುದ್ರ ತೀರದಿಂದ ಪೂರ್ವಭಾಗದಲ್ಲಿ ಪರ್ವತ ಶ್ರೇಣಿ ಅಥವಾ ಬೆಟ್ಟವಿದ್ದಲ್ಲಿ ಅದರ ಪೂರ್ವಕ್ಕೆ ಕರಾವಳಿಯ ವಾತಾವರಣ ಇರುವದಿಲ್ಲ. ಕರಾವಳಿಯಲ್ಲಿ ಅಡಿಕೆ ಬೆಳೆಗೆ ಪೂರಕವಾದ ವಾತಾವರಣ ಇರುವದಿಲ್ಲ. ನಮ್ಮೂರು ಸಮುದ್ರ ತೀರದಿಂದ ಹತ್ತಿರವಾದರೂ ಬೆಟ್ಟದ ಮರುಚಲು ಆದುದರಿಂದ ಪೂರ್ತಿ ಕರಾವಳಿ ಅಲ್ಲ. ಅಲ್ಲಿಯವರು 'ತೋಟಮನೆ' ಪ್ರದೇಶ ಅಂತಲೇ ಗುರುತಿಸುತ್ತಾರೆ. ಅವರಿಗೆ ಇದು ತಂಪು ಪ್ರದೇಶ. ತೆಂಗು ಕಂಗುಗಳಿಂದ ಕಂಗೊಳಿಸವ ಊರು, ಮಲೆನಾಡು ಅಂತ ಹೇಳಿಸಿಕೊಳ್ಳುವ ಉಳಿದೆಲ್ಲ ಲಕ್ಷಣಗಳನ್ನೂ ಹೊಂದಿದೆ. ಹವಾಮಾನದ ರೀತ್ಯ ಕರಾವಳಿಯಂತೆ ಹೆಚ್ಚು ಉಷ್ಣವೂ ಅಲ್ಲದ ಮಲೆನಾಡಿನಂತೆ ಹೆಚ್ಚು ತಂಪೂ ಅಲ್ಲದ 'ಸಮ ಶೀತೋಷ್ಣ ಹವಾಮಾನ'.

ಊರಿನ ಪಕ್ಕದಲ್ಲಿಯೇ ಜಿಲ್ಲೆಯ ಪ್ರಮುಖ ನದಿಯಾದ ಅಘನಾಶಿನಿ ಹರಿದಿದೆ. ನದಿಯಲ್ಲಿ ಹನ್ನೆರಡೂ ತಿಂಗಳು ನೀರು ಸಮೃದ್ಧವಾಗಿರುತ್ತದೆ. ಆದರೇನು ಕೃಷಿಗೆ ಉಪಯೋಗಕ್ಕೆ ಬರುವದಿಲ್ಲ. ಮಳೆಗಾಲದಲ್ಲಿ ತನ್ನ ಎಲ್ಲೆಯನ್ನು ಮೀರಿ ಹರಿದು ಕೆಲವಾರು ತೋಟ ಗದ್ದೆಗಳನ್ನು ಮುಳುಗಿಸಿದರೆ, ಬೇಸಗೆಯಲ್ಲಿ ಬರೀ ಉಪ್ಪು ನೀರು. ಸಮುದ್ರದ ಭರತದ ಕಾರಣಕ್ಕಾಗಿ ಹತ್ತು ಕಿಲೋಮೀಟರಿನಷ್ಟು ನದಿಯಲ್ಲಿ ಒಳಗೆ ಉಪ್ಪು ನೀರು ಬರುವದರಿಂದ 'ಸಮುದ್ರದ ನೆಂಟಸ್ಥನವಾದರೂ ಉಪ್ಪಿಗೆ ಬಡತನ' ಹೇಳಿದ ಹಾಗೆ ಮುಳುಗೇಳುವಷ್ಟು ನೀರಿದ್ದರೂ ಬಳಕೆಗೆ ಪ್ರಯೋಜನವಿಲ್ಲ.

ಉಪ್ಪು ನೀರಿನಿಂದ ನದಿ ತುಂಬಿದ್ದರೂ ಮೀನುಗಾರರಿಗೆ, ಮೀನುಗಾರಿಕೆಗೆ ತೊಂದರೆ ಇಲ್ಲ. ಯಾಂತ್ರಿಕ ದೋಣಿ ಇಲ್ಲದಿದ್ದರೂ ಸಣ್ಣ ಪ್ರಮಾಣದಲ್ಲಿ ಮೀನುಗಾರಿಕೆ ನಡೆಯುತ್ತದೆ ಅನ್ನಿ.

ಒಮ್ಮೆ ನೀವು ನಮ್ಮೂರಿಗೆ ಬಂದು ನನ್ನ ಮಾತನ್ನು ಪುಷ್ಟಿಗೊಳಿಸಿದರೆ ನನಗೆ ಸಂತೋಷ.

ನಗೆಬರಹ

ಹೇರ್ ಕಟ್ಟಿಂಗ್ ಪ್ರಹಸನ

- **ಗೋಪಿನಾಥ್**

ಕೊರೋನಾ ಲಾಕ್ ಡೌನಿನಿಂದಾಗಿ ಎಲ್ಲೂ ಹೋಗದೆ ಮನೆಯಲ್ಲೇ ಇದ್ದು ಬೇಜಾರಾಗಿ ಮನೆಯಿಂದ ಒಂದು ನಾಕು ಹಜ್ಜೆಯಾದರೂ ಹೊರಗಿಡಬೇಕೆನಿಸಿ, ಏನು ಹೇಳಿದರೆ ಹೊರಗೆ ಹೋಗಲು ಅನುಮತಿ ಕೊಡುತ್ತಾರೆಂದು ಯೋಚಿಸಿ ಕೊನೆಗೆ..

'ನಾನು ಹೇರ್ ಕಟ್ಟಿಂಗ್ ಮಾಡಿಸಿಕೊಳ್ಳಬೇಕು ತುಂಬ ಕೂದಲು ಬೆಳದುಬಿಟ್ಟಿದೆ ಹೋಗಿ ಬರುತ್ತೇನೆಂದೆ' ಇವಳಿಗೆ.

'ಈಗೇನು ಹೋಗಲವಸರ ಯಾವ ಮದುವೆಗೆ ಹೋಗಬೇಕಿದೆ ಏನೂ ಬೇಕಿಲ್ಲ ಹೋಗಬೇಡಿ' ಅಂದ ಮಗ, ಅವರಮ್ಮನಿಗಿಂತ ಮುಂಚೆ! ಅವರಮ್ಮನ ಮಗನಲ್ವಾ?

ನಿಮಗೆ ಗೊತ್ತಿರುವ ಹಾಗೆ ಮನೆಯಲ್ಲಿ ನನ್ನ ಯಜಮಾನಿಕೆ ಏನೂ ನಡೆಯಲ್ಲ, ಅವಳು ಕ್ಯಾಪ್ಟನ್, ಮಗ ವೈಸ್ ಕ್ಯಾಪ್ಟನ್.. ನಾನು ಟೀಂನಲ್ಲಿ ಆಟಕ್ಕುಂಟು, ಲೆಕ್ಕಕ್ಕಿಲ್ಲ. ಬೇಜಾರಾಗಿ ಮನದಾಳವನ್ನು ಆಪ್ತಮಿತ್ರ ಸುಬ್ರಹ್ಮಣ್ಯನಿಗೆ ಹೇಳಿಕೊಳ್ಳಬೇಕೆನಿಸಿ ನನ್ನ ಅಳಲನ್ನು ಮೆಸೇಜ್ ಮಾಡಿದೆ...

'ಮಣಿ, ನನ್ನ ಸ್ಥಿತಿ ಹೇಗಾಗಿದೆಯೆಂದರೆ.. ಮನದಲ್ಲಿ ತುಂಬಿಕೊಂಡಿರುವುದನ್ನು ಕೊಡವಿಕೊಳ್ಳಲಾಗುತ್ತಿಲ್ಲ. ತಲೆ ಕೂದಲಾದರೂ ಕತ್ತರಿಸಿಕೊಳ್ಳಬೇಕೆನಿಸಿ ಹೇರ್ ಕಟ್ಟಿಂಗಿಗೆ ಹೋಗಬೇಕಂದೆ. ಹೀಗಾದರೂ ನನ್ನ ಬೇಡಿಕೆ ಸ್ವೀಕರಿಸುತ್ತಾರೆಂದು ಮುಂದಿಟ್ಟೆ. ಆದರೇನು ಅವಕಾಶವೇ ಕೊಡಲಿಲ್ಲ ಕಾಣೋ. ಸ್ವಲ್ಪವಾದರೂ ಕನಿಕರಿಸಲಿಲ್ಲ ಕೊನೆಪಕ್ಷ ತಲೆಕೂದಲ ಭಾರವಾದರೂ ಕಮ್ಮಿಯಾಗುತ್ತಿತ್ತು ಅದೂ ನಡೆಯಲಿಲ್ಲ, ಇನ್ನು ಹೊರಗೆ ಹೋಗುವುದೆಲ್ಲಿಂದ ಬಂತು.'

ಮಣಿ ಅವನೂ ನನಗೆ ಮೆಸೇಜ್ ಕಳಿಸಿದ.. 'ಹೊರಗೆ ಹೋಗುವುದು ಸದ್ಯಕ್ಕೆ ಬಿಡು.. ಅದೇನು ದೊಡ್ಡ ವಿಷಯ ಬಿಡಪ್ಪ ಹೇರ್ ಕಟ್ಟಿಂಗಿಗೆ ಹೋಗಲೇಬೇಕಂತೇನೂ ಇಲ್ಲ, ನಾನು ಹೇರ್ ಕಟ್ಟಿಂಗ್ ಶಾಪ್ಗೆ ಹೋಗೇ ೪೫ ವರ್ಷವಾಯಿತು ! ನಂಬಲ್ವಾ.. ಒಂದ್ಸಲ ಟಿ.ವಿ. ನೋಡುತ್ತಿದ್ದೆ, ಅದರಲ್ಲಿ ಕುರುಡ ಕ್ಷೌರಿಕ ಒಂದು ಬಾಬ್ ಕಟ್ ಹುಡುಗಿಗೆ ಕಟ್ಟಿಂಗ್ ಮಾಡುತ್ತಿದ್ದದ್ದು ನೋಡಿ.. ಅರೆ ಆತನೇ ಕಟ್ಟಿಂಗ್ ಮಾಡಬಹುದಾದರೆ ಕಣ್ಣಿದ್ದವನು ನನಗೇಕೆ ಆಗಲಾರದು ಎಂದು ತೀರ್ಮಾನಿಸಿ ಅಂದಿನಿಂದ ನಾನೇ ಕಟ್ಟಿಂಗ್ ಮಾಡಿಕೊಳ್ಳುವುದು! ಅದಕ್ಕೆ ಬೇಕಿರುವುದು ಮೂರು ಸಲಕರಣೆಗಳಷ್ಟೆ! ಒಂದು ಬಾಚಣಿಗೆ, ಕತ್ತರಿ, ಕನ್ನಡಿಯಾದರೆ ಸಾಕು. ನೀನೂ ಒಮ್ಮೆ ಪ್ರಯತ್ನಿಸು ಸುಲಭ ಕಾಣೋ Enjoy ಮಾಡಬಹುದು ನೋಡು' ಅಂತ ಬರೆದಿದ್ದ.

ಎಲಾ ಇವನ! ಇವನು ಕಟ್ಟಿಂಗ್ ಮಾಡಿಕೊಳ್ಳುವುದಕ್ಕೇನು ಕಷ್ಟಪಡಬೇಕು ಇರುವ ನಾಕು ಕೂದಲಿಗೆ ಅದೂ ಕಿವಿ ಮೇಲ್ಭಾಗದಲ್ಲಿನ ಸಣ್ಣ ಸಣ್ಣ ಕೂದಲು. ಕತ್ತರಿ ಆಡಿಸಿದರಾಯಿತು.. ಸುಲಭ ಕಾಣೋಂತ ಬರೀತಾನೆ. ನಾನವನಿಗೆ ಹೀಗೆ ಮೆಸೇಜ್ ಕಳಿಸಿದೆ..

'ಲೇ ಬೇಜಾರು ಮಾಡಿಕೊಳ್ಳಬೇಡ.. ನಿನ್ನ ತಾಮ್ರದ ತಲೆಯಲ್ಲಿ ಕೂದಲು ಬೆಳದಿರುವುದೇ ಕಾಣಲ್ಲ. ನನ್ನ ತಲೆಕೂದಲು ಹುಲ್ಲುಗಾವಲು.. ಹೇಗೋ ಕತ್ತರಿಸಲಿ, ಏನೋ ಮಾಡಲು ಹೋಗಿ ಮತ್ತೊಂದಾದರೆ? ಇಷ್ಟು..ಇಷ್ಟೂಂತ ಕತ್ತರಿಸಿ ಕತ್ತರಿಸಿ ಕೊನೆಗೆ ನುಣ್ಣಗೆ ಆಗುವವರೆಗೆ ತೆಗಿಬೇಕಾಗಿ ಬಂದರೆ ಬೇಡಪ್ಪಾ' ಅಂತ ಬರೆದೆ.

ಅದಕ್ಕವನು 'ತಾಮ್ರದ ತಲೆ ಇತ್ತೀಚೆಗೆ ಆಗಿರುವುದು ಕಾಣೋ.. ಆದರೆ ಮುಂಚೆ ಅಲ್ಲಿಷ್ಟು ಇಲ್ಲಿಷ್ಟೂಂತ ತಲೇಲಿ ಕೂದಲಿತ್ತು! ಈಗ ಕ್ಷೌರಿಕ ನನ್ನ ತಲೆ ನೋಡಿ ಕೊರಗುವುದು ಬೇಡಾಂತ ತಿಂಗಳಿಗೊಮ್ಮೆ ತಲೇಲಿ ಕೂದಲು ಬೆಳದಿರಲಿ ಬಿಡಲಿ, ಕ್ಷೌರದಂಗಡಿಗೆ ಹೋಗಿ ಮೀಸಲು ಕೊಟ್ಟು ಬರುತ್ತೇನೆ ನೂರು ರೂಪಾಯಿ.. ನೀನೂ ಒಂದು ಸಲವಾದರೂ ನೀನೇ ಕಟ್ಟಿಂಗ್ ಮಾಡಿಕೊಂಡು ನೋಡು ಎಂತಹ ಮಜಾ ಬರುತ್ತೆ' ಅಂತ ಬರೆದಿದ್ದ.

'ನಿನ್ನ ಉಪದೇಶ ನೋಡಿದರೆ ನಾನೇ ಕ್ಷೌರ ಮಾಡಿಕೊಳ್ಳುವಾಗ ಕೋತಿಗಳಿಗೆ ಬೆಕ್ಕು ಕಜ್ಜಾಯ ಹಂಚಿದ ಹಾಗಾಗಲಿ ಎಂದು ಆಸೆ ಪಡುವಂತಿದೆ.. ನಾನು ಕನ್ನಡಿ ನೋಡಿಕೊಂಡು ವಕ್ರಮೂತಿ ಮಾಡಿಕೊಂಡು ಸಿಕ್ಕಸಿಕ್ಕ ಕಡೆ ಕತ್ತರಿಸಿಕೊಂಡು ಅಲ್ಲಿ ಜಾಸ್ತಿಯಾಯಿತು.. ಇಲ್ಲಿ ಕಡಿಮೆಯಾಗಿದೇಂತ ಕತ್ತರಿಸಿ ಕತ್ತರಿಸಿ ಹಲಸಿನಕಾಯಿ ಕೊಚ್ಚಿದ ಹಾಗಾಗಿ ಕೊನೆಗೆ ಬೇರೆ ಮಾರ್ಗವಿಲ್ಲದೆ ಕ್ಷೌರದಂಗಡಿಗೆ ಹೋಗಬೇಕಾಗಿ ಬಂದು.. ಅವನು ಇದನ್ನು ಯಾವ ಶೇಪಿಗೂ ತರೋಕಾಗಲ್ಲಂತ ನುಣ್ಣಗೆ ಬೋಳಿಸಿ ಕಳಿಸಿದರೆ ? ಮೂರು ತಿಂಗಳು ಹೊರಗೇ ಬರದ ಹಾಗಾಗುತ್ತೆ ಬೇಡಪ್ಪಾ' ಅಂತ ಮೆಸೇಜ್ ಮಾಡಿದೆ.

ಅವನು ಅಲ್ಲಿಗೆ ಬಿಡಬೇಕಲ್ಲ... ಹಾಗೇನು ಆಗಲ್ಲ ಆಕಸ್ಮಿಕವಾಗಿ ಒಂದು ವೇಳೆ ತಲೆ ಬೋಳಿಸಿಕೊಂಡರೆ ನನ್ನ ತಮ್ಮ ಎಂದುಕೋ.. ವಯಸ್ಸಿನಲ್ಲಿ ದೊಡ್ಡವನಾಗಿದ್ದರೆ ಅಣ್ಣ ಎಂದುಕೋ. ತಿಳಿತಾ ಗೋಪಿ/ಗೋಪಣ್ಣಂತ ಕಳಿಸಿದ.

ಏನು ಕೆಟ್ಟ ಬುದ್ಧಿ ಇವನದು ಕೊನೆಗೂ ಗುಂಡು ಹೊಡಿಸಿಕೊಳ್ಳುವುದು ಬಯಸುತ್ತಾನಲ್ಲ ನನ್ನಿಂದ. ನನ್ನ ಹೇರ್ ಸ್ಟೈಲ್ ಕಂಡು ಇವನಿಗೆ ಹೊಟ್ಟೆಕಿಚ್ಚು. ನನ್ನ ಪರ್ಸನಾಲಿಟಿಗೆ ಎಷ್ಟ ಚೆನ್ನಾಗಿ ಶೋಭಿಸುತ್ತೆ.. ನನ್ನಿಂದಾಗಲ್ಲ..ನನ್ನಿಂದಾಗಲ್ಲ..

'ರೀ ಏನ್ರಿ ನನ್ನಿಂದಾಗಲ್ಲ.. ನಿಮ್ಮ ಕೈಲೇನಾಗುತ್ತೆ ಹೇಳಿ? ಮೂರು ಹೊತ್ತು ತಲೇಲಿ ಏನಾದರು ಹೊಕ್ಕಿರುತ್ತೆ, ಅದರದೇ ಯೋಚನೆ ಮಾಡುತ್ತಾ ಮಲಗ್ತೀರಿ.. ಇನ್ನೇನಾಗುತ್ತೆ ರಾತ್ರಿಯೆಲ್ಲಾ ಬಡಬಡಿಕೆ. ಆ ಮಗ್ಗುಲಿಗೆ ತಿರುಗಿ ಮಲಗಿ ಎಂದು ಖಾರವಾಗಿ ಹೇಳಿ ಮಲಗಿದಳು, ನಾನೂ ತೆಪ್ಪಗೆ ಮುದುರಿಕೊಂಡೆ !

ಬಹುಮುಖ ಪ್ರತಿಭೆಯ ಸೀತಾರಾಮು

ಕವಿತಾಲಹರಿ, ಕಥಾವಲ್ಲರಿ, ಗಜಲ್, ಶಾಯರಿ
ಅರಿವೇ ಶಿವ: ಅಂತಃಸ್ಸತ್ವ, ನೀತಿ ಶತಕದ ಭರ್ತೃಹರಿ
ನಾನಕದೇವರ ಜೀವನ, ಸಾಧನೆಗಳ ಮೇರುಕೃತಿ
ಬ್ಯಾಂಕಿನ ವಂಚನಾಲೋಕ ಬಿಡಿಸಿಟ್ಟ ವಿಮರ್ಶಾಮತಿ

ತಪ್ಪಿರಲಿಲ್ಲ ಓದಿದ್ದ ಭೂಗರ್ಭಶಾಸ್ತ್ರದ ಪ್ರೀತಿ
ಸ್ಫಟಿಕಲೋಕ,ಕರ್ನಾಟಕದ ಭೂಗೋಲದ ಸ್ಮೃತಿ
ಚಿತ್ರಕಲೆಯ ಕುಸುರಿ, ಕಾಷ್ಠಶಿಲ್ಪಗಳ ರೂವಾರಿ
ಕಾಗದ ಕುಶಲಕಲೆ ಕೊಲಾಜ್ ಜತೆಗೆ ಒರಿಗಾಮಿ.

ವರ್ತನಶಾಸ್ತ್ರದ ಬೋಧನೆಯಲಿ ಇವರು ನಿಷ್ಣಾತ
ವ್ಯಕ್ತಿತ್ವ ವಿಕಸನ ತರಬೇತಿಯಲೂ ಪಳಗಿದ್ದ ಪಂಡಿತ
ರುಚಿಕರ ಭೋಜನದಷ್ಟೇ ಸೊಬಗಿನ ದಿರಿಸೂ ಇಷ್ಟ
ಸಹವರ್ತಿ ಕಿರಿಯ ಸಾಹಿತ್ಯಾಸಕ್ತರಿಗೂ ಸ್ನೇಹದ ಹಸ್ತ

'ನೂರು ಮರ ನೂರು ಸ್ವರ' ಅಂದು ಕವಿವಾಣಿಯಲ್ಲಿ
ಆದರೆ ನೂರು ಸ್ವರವಿತ್ತು ಇದೊಂದೇ ಮರದಲ್ಲಿ

\- **ಮಹಾಬಲ**

ಯಾರಿಗೆ ವರವಾದೆ

ಪ್ರಜಾಪ್ರಭುತ್ವದ ಮಹಾನ್ ಪ್ರಜೆಯೇ
ಭವ್ಯ ಭಾರತದ ನಾಗರೀಕನೇ
ನಿನ್ನ ಅಮೂಲ್ಯ ಮತವ ನೀಡಿ ಯಾರಿಗೆ ಸಮ್ಮತನಾದೆ

ಒಂದೇ ಮನೆತನದ ಸಂಜಾತರಿಗೋ
ಕೃಷಿಪರ ದೇಶದ ಭೂಮಿಪುತ್ರರಿಗೋ
ಅನುಭವ ಅರ್ಹತೆಯ ಅಜಾತಶತ್ರುವಿಗೋ
ವಿದ್ಯೆ ಬುದ್ಧಿ ನ್ಯಾಯ ನೀತಿ ಧರ್ಮಸಂಪನ್ನನಿಗೋ

ಯಾರಿಗೆ ವರವಾದೆ

ಅಧಿಕಾರ ಲಾಲಸೆಯ ಭ್ರಷ್ಟ ದುರಾಕ್ರಮಿಗೋ
ಪಕ್ಷಗಳ ಒತ್ತಡದ ಭಾರಹೊತ್ತ ಪರಾಕ್ರಮಿಗೋ
ತತ್ವ ಸಿದ್ಧಾಂತ ಮರೆತ ಸಮಯಸಾಧಕಗೋ
ಪ್ರಜೆಗಳ ಬಾಳನ್ನು ಗೋಳು ಮಾಡಿದವಗೋ

ಯಾರಿಗೆ ವರವಾದೆ

ಸರ್ವಪ್ರಿಯ ಗುಣಸಂಪನ್ನ ಅಲ್ಪತೃಪ್ತನಿಗೋ
ಸಿಕ್ಕವಕಾಶದಿ ದೇಶಸೇವೆಯ ಗೈದವಗೋ
ಪ್ರಜಾಪ್ರಭುತ್ವದಿ ಪ್ರಜಾಬಲ ತೋರಿದವಗೋ
ಬದುಕು ಬದಲಾವಣೆಗೆ ಬದ್ಧತೆ ತೋರಿದವಗೋ

ಯಾರಿಗೆ ವರವಾದೆ

- ಮನೋಹರ ಎಂ.ಗೋಖಲೆ

ವಾರ್ತಾ ಮಾಧ್ಯಮಗಳಿಗೊಂದು ಮನವಿ

ಏನಾದರೂ ಆಗು ಮೊದಲು ಕನ್ನಡಿಗನಾಗು
"ವ್ಹೂ ವೈ ಹೌ ವಾಟ್ ವೇರ್" ಬಿಟ್ಟು ಸವಿಗನ್ನಡದಿ ಸುದ್ದಿ ನೀಡು
ಅರಚಾಟ ಕಿರುಚಾಟ ಬೈದಾಟ ಮಾತು ದೂರವಿಡು

ಸುದ್ದಿ ಮಾಧ್ಯಮವನು ಕೀಳು ದಂಧೆಯಾಗಿಸಬೇಡ
ಊಹಾಪೋಹ ವೈಭವೀಕರಣ ವಾರ್ತೆ ಬೇಡ
ಸುಳ್ಳು ಸುದ್ದಿ ಸೃಷ್ಟಿಸಿ ಭೀತಿ ಹರಡಲು ಬೇಡ

ಕುಹಕ ವ್ಯಂಗ್ಯ ಪರಿಹಾಸ್ಯವದು ಇಲ್ಲಿ ಬೇಕಿಲ್ಲ
ವೈಯಕ್ತಿಕ ಕೋಪ ತಾಪ ರೋಷ ಶೋಭಿಸುವುದಿಲ್ಲ
ಕನ್ನಡ ಕನ್ನಡಿಗ ಪೋಷಣೆಯನೆ ಮರೆತೆಯಲ್ಲ

ಸುದ್ದಿಮೂಲವ ಪರಾಂಬರಿಸು ಸ್ಥಿತಿಗತಿಯೊಡನೆ
ಸುದ್ದಿ ವಿಶ್ಲೇಷಿಸು ವಿಮರ್ಶಿಸು ವಿದ್ವಾಂಸರೊಡನೆ
ಸತ್ಯ ಸುದ್ದಿಯ ಬಿತ್ತರಿಸು ಸಹಜ ಧ್ವನಿಯೊಡನೆ

ರಾಜ್ಯ ಎಂದರೆ ಬೆಂಗಳೂರು ಒಂದೇ ಅಲ್ಲ
ರಾಷ್ಟ್ರ ಎಂದರೆ ನವದೆಹಲಿ ಒಂದೇ ಸಲ್ಲ
ರೋಗ ಎಂದರೆ ಕೊರೋನ ಒಂದೇನಲ್ಲ

ಸಂಗೀತ ಸಾಹಿತ್ಯ ಕಲೆಗಳ ಸಂಸ್ಕೃತಿಯ ತೋರು
ಸಿದ್ಧಿ ಸಾಧನೆ ಸಾಧಕರ ಸಾದ್ಯಂತ ಸಾರು
ಶ್ರಮ ಶ್ರದ್ಧಾಭಕ್ತಿ ಶಕ್ತಿ ಪರಂಪರೆಯ ಬೀರು
ನಿನ್ನ ನೀ ಅರಿತು ನಡೆ ಉಳಿಸು ಕನ್ನಡನಾಡು.

- ಮನೋಹರ ಎಂ.ಗೋಖಲೆ

ಸಣ್ಣ ಕತೆ

ಅನುರೂಪ ದಾಂಪತ್ಯ

- **ಟಿ. ಎಸ್. ಶ್ರವಣ ಕುಮಾರಿ**

ನಾನು ಈ ಕತೆಯನ್ನು ಹೇಳುತ್ತಿರುವಾಗ ನಿಮಗೆಲ್ಲರಿಗೂ 'ಅರೇ, ಇದು ನಮ್ಮಪ್ಪ ಅಮ್ಮನ ಕತೆಯೆಂದೋ, ಅಥವಾ ಇನ್ಯಾರೋ ನಮ್ಮವರ್ದೇ ಕತೆ'ಯೆಂದೋ ಅನ್ನಿಸಬಹುದು. ಆದರೂ ಏಕೆ ಈ ಕತೆಯನ್ನು ಹೇಳ್ತಿದೀನಿ ಅಂದರೆ ಆ ಕಾಲದ ಗಂಡಹೆಂಡಿರ ಸಾಮರಸ್ಯದೊಳಗೆ ಒಂದು ಇಣುಕುನೋಟ ಬೀರಿ ಒಂದಷ್ಟು ಖುಷಿಪಡಲು ಸಾಧ್ಯವಾದರೆ ಆಗಲಿ ಎಂದಷ್ಟೇ. ಸರಿ, ಈಗೊಂದು ಐವತ್ತು ಅರವತ್ತು ವರ್ಷಗಳ ಹಿಂದೆ ಹೋಗೋಣ ಬನ್ನಿ. ಆಗ ಸಮೃದ್ಧಿಯಿದ್ದ ಕಾಲ. ಸಮೃದ್ಧಿಯೆಂದರೆ ದುಡ್ಡಿನ ಲೆಕ್ಕದಲ್ಲಿ ಹೇಳಲಿಲ್ಲ. ಮನೆತುಂಬಾ ಮಕ್ಕಳು, ಬಂದುಹೋಗುವ ನೆಂಟರಿಷ್ಟರು ಇದ್ದ ಕೂಡುಕುಟುಂಬದ ಕಾಲ. ಒಡವೆ, ಬಟ್ಟೆಗಳಿಗಿಂತ ನಾಲ್ಕುಜನ ಬಂದಾಗ ತಮಗಿದ್ದದ್ದನ್ನೇ ಆತ್ಮೀಯತೆಯಿಂದ ಮಾಡಿ ಬಡಿಸಿ "ಇನ್ನೂ ನಾಕುದಿನ ಇರಿ, ಬೆಟ್ಟದ ಮಲ್ಲಿನಾಥನ್ನ ನೋಡ್ಕೊಂಡು ಬರೋಣ" ಎಂದೋ, "ಕೆರೆ ಕೋಡಿ ಬಿದ್ದಿದ್ಯಂತೆ ಅದನ್ನ ನೋಡ್ದೇನೇ ಹೋಗ್ತೀರಾ" ಎಂದೋ, ಪಿಳ್ಳೆನೆಪಗಳನ್ನೆಲ್ಲಾ ಹೇಳುತ್ತಾ ಹೊರಡುವವರನ್ನು ಇನ್ನೊಂದಷ್ಟು ದಿನ ಇರಿಸಿಕೊಂಡು ಒಂದು ರವಿಕೆ ಬಟ್ಟೆಯನ್ನೇ ಪಟ್ಟೆಪೀತಾಂಬರವನ್ನು ಕೊಟ್ಟಷ್ಟು ಸಂತೋಷದಿಂದ ಕೊಟ್ಟು, ಮನೆಯಲ್ಲಿ ಬೆಳೆದ ಧಾನ್ಯವನ್ನೋ, ಮತ್ತೊಂದನ್ನೋ ಕೊಟ್ಟು, ಕಳಿಸಲು ಬಸ್ ಸ್ಟ್ಯಾಂಡಿನವರೆಗೂ ಹೋಗಿ ವಿದಾಯದ ಸುಖದುಃಖಗಳನ್ನು ಹಂಚಿಕೊಂಡು ಕಣ್ಣೀರಿಡುತ್ತಲೇ ಕಳಿಸುತ್ತಿದ್ದ ಕಾಲವೆನ್ನಿ.

ನನ್ನ ಇಂದಿನ ಕತೆಯ ಪದ್ದಮ್ಮ, ನಾರಾಯಣ ಮೂರ್ತಿಗಳೂ ಆ ಕಾಲಕ್ಕೆ ಸೇರಿದ್ದವರು. ಮನೆಯಲ್ಲಿ ಹಿರಿಯರಿರುವಾಗ ಅವರೆದುರು ಒಬ್ಬರನ್ನೊಬ್ಬರು ಸೀದಾ ನೋಡುವುದೂ ಚೆಲ್ಲುಚೆಲ್ಲು ನಡವಳಿಕೆ ಎಂದುಕೊಂಡಿದ್ದ ಕಾಲವದು. ಒಬ್ಬರಿಗೊಬ್ಬರು ಸಿಗುತ್ತಿದ್ದುದು ಬರಿಯ ರಾತ್ರಿಯ ಕತ್ತಲಿನಲ್ಲೇ ಆದರೂ, ಓಡಾಡುವ ಹೆಂಡತಿಯ ಬಳೆಯ ಸದ್ದು ಕೇಳುತ್ತಿದ್ದರೆ ಒಂದು ಮುದವನ್ನನುಭವಿಸುತ್ತಿದ್ದ, ಗಂಡನ ದನಿ ಕೇಳಿದರೇ ಪುಳಕಗೊಳ್ಳುತ್ತಿದ್ದವರು ಅವರಿಬ್ಬರು. ಇಂತಹ ಪದ್ದಮ್ಮನನ್ನು ಚೊಚ್ಚಲ ಹೆರಿಗೆಗೆಂದು ತವರಿನವರು 'ಬಸುರಿ ಹುಡುಗಿ, ದಿನ ತುಂಬಿದ ಮೇಲೆ ಪ್ರಯಾಣ ಮಾಡೋದ್ಬೇಡ' ಎಂದು ಐದನೇ ತಿಂಗಳಿಗೇ ಕರೆದುಕೊಂಡು ಹೋಗಿ ಹೆರಿಗೆಯಾದ ಮೇಲೆ, 'ಶ್ರಾವಣದ ಹಬ್ಬಸಾಲು ಕಳೀಲಿ, ಗೌರಿ ಹಬ್ಬದ್ಮುಂದೆ ಕಳ್ಸಕ್ಕಾಗುತ್ಯೇ, ದಸರೆಯಲ್ಲಿ ದೇವಿ ಪಾರಾಯಣ ನಡ್ಯೋವಾಗ ಮನೆಮಗಳು ಇರದಿದ್ರೆ ಹೇಗೆ, ಅಳಿಯನೂ ದೀಪಾವಳಿಗೆ ಬರಲಿ, ಆಮೇಲೆ ಒಂದು ಒಳ್ಳೆಯ ದಿನ ಕರ್ಕೊಂಡು ಬರ್ತೀವಿ' ಎಂದು ಸಾವಕಾಶವಾಗಿ ಮಗುವಿಗೆ ಹತ್ತಿರತ್ತಿರ ವರ್ಷವಾಗುತ್ತಾ ಬರುವಾಗ ಕಳಿಸಿದರೆ, ಮೂರ್ತಿಗಳ ಪಾಡೇನು! ಹೋಗಲಿ ಎಂದರೆ ಅಪ್ಪ, ಅಮ್ಮನಾದರೂ ಸೊಸೆಯನ್ನು ಬೇಗನೆ ಕಳಿಸಿ ಎನ್ನಬಾರದೆ; 'ಇನ್ನೂ ಚಿಕ್ಕ ಹುಡುಗಿ, ಮಗೂನ ಸ್ವಲ್ಪ ದೊಡ್ಡು ಮಾಡ್ಕೊಂಡೇ ಬರಲಿ ಬಿಡು' ಎಂದು ಅವರ ಪರವೇ ವಹಿಸುತ್ತಿದ್ದುದು ಮೂರ್ತಿಗಳಿಗೆ ಕಷ್ಟಕ್ಕೆ ಬಂದಿತ್ತು.

ಎರಡನೆಯದಕ್ಕೂ ಇದೇ ಕತೆಯಾದ ಮೇಲೆ, ಮೂರನೆಯ ಬಾಣಂತನದಲ್ಲಿ 'ಮಕ್ಳನ್ನ ನೋಡೋ ಹಾಗಾಗಿದೆ' ಅನ್ನೋ ನೆಪವೊಡ್ಡಿ ಎರಡು ತಿಂಗಳ ನಂತರ ಖುದ್ದಾಗಿ ತಾವೇ ಮಾವನ ಮನೆಗೆ ಹೋಗಿ ಝಾಂಡಾ ಊರಿದರು. ಅಪರೂಪಕ್ಕೆ ಬಂದ ಅಳಿಯನೆಂದು ಮಾವನವರು ಆಳು ತಿಪ್ಪನ ಕೈಲಿ ಚೆನ್ನಾಗಿ ಗಾಣದ ಹರಳೆಣ್ಣೆಯಲ್ಲಿ ನೀವಿಸಿ, ಮಳಮಳಗುಡುತ್ತಿದ್ದ ಹಂಡೆ ನೀರಿನಿಂದ ಮಜ್ಜನ ಮಾಡಿಸಿದಾಗ 'ಅಜ್ಜಯ್ಯನ ಅಭ್ಯಂಜನ'ದಂತೆ ಮಿಂದ ಮೂರ್ತಿಗಳು ಮೂರನೇ ದಿನ "ಎಲ್ಲಿ ತಿಪ್ಪ ಬರಲಿಲ್ವೇ. ಮೊನ್ನೆ ಚೆನ್ನಾಗಿ ನೀವಿದ್ದ. ಬಲುಚೆನ್ನಾಗಿ ನಿದ್ದೆ ಬಂದಿತ್ತು" ಎಂದಾಗ ಕರೆಸದಿರಲು ಸಾಧ್ಯವೇ? ಅಂತೂ ವಾರಕ್ಕೆರಡು ಬಾರಿ ಅಳಿಯನಿಗೆ ಅಭ್ಯಂಜನ ಮಹೋತ್ಸವವಾಯಿತು. ಬಾಣಂತಿಗೆಂದು ಧಾರಾಳವಾಗಿ ಉತ್ತುತ್ತೆ, ಗಸಗಸೆ, ಕೊಬ್ಬರಿ ಹಾಕಿದ್ದ

ಅಂಟಿನುಂಡೆ, ಬಾದಾಮಿ, ದ್ರಾಕ್ಷಿ, ತುಪ್ಪ ಸುರಿದಿದ್ದ ಶುಂಟಿಯಲ್ಲಿ ದಿನದಿನವೂ ತಮ್ಮ ಪಾಲನ್ನೂ ಪಡೆದುಕೊಂಡು, ಅವಳ ಊಟಕ್ಕಿಟ್ಟ ತುಪ್ಪದ ಬಟ್ಟಲನ್ನು ನೋಡಿ, "ಮಗಳಿಗೆ ಮಾತ್ರಾ ತುಪ್ಪವೇ? ಅಳಿಯನಿಗೇನೂ ಇಲ್ಲವೇ?" ಎಂದು ತಮಾಷೆಗೆಂಬಂತೆ ಕೇಳಿ, ವಿಧಿಯಿಲ್ಲದೆ ಅತ್ತೆ ಅಳಿಯನಿಗೂ ಬಾಣಂತನ ಮಾಡುವ ಹಾಗಾಯಿತು. ಅಲ್ಲಿಯೂ ಮನೆತುಂಬಾ ಮಕ್ಕಳು, ಮೊಮ್ಮಕ್ಕಳೇ. ತುಪ್ಪ ತಂದಾಗ 'ನಂಗೂ, ನಂಗೂ' ಎಂದು ಎಂಟುಹತ್ತು ಬಾಯಿಗಳು ಒಟ್ಟಿಗೇ ಕೂಗತೊಡಗಿದರೆ ಮರ್ಯಾದೆ ಉಳಿಸಿಕೊಳ್ಳುವುದಕ್ಕಾದರೂ, ಒಂದೊಂದು ಮಿಳ್ಳೆ ಹಾಕಲೇಬೇಕಲ್ಲವೇ? ಹೇಗೋ ಸಂಭಾಳಿಸುತ್ತಿದ್ದರೆ, ಹದಿನೈದಿಪ್ಪತ್ತು ದಿನವಾದರೂ ಅಳಿಯ 'ಮಕ್ಕಳನ್ನು ನೋಡಿದ್ದು' ಮುಗಿಯಲೇ ಇಲ್ಲ! ಅಳಿಯನ ಸಂಕಟ ಅರ್ಥವಾಗಿ "ಐದು ತಿಂಗ್ಳಿಗೆ ಬಿದ್ದ ತಕ್ಷಣ ಕಳಿಸ್ಬಿಡ್ತೀವಿ ಅಳಿಯಂದಿರೇ. ಹೆಚ್ಚುದಿನ ಇಟ್ಕೊಳಲ್ಲ" ಎಂದು 'ನೀವಿನ್ನು ಹೊರಡಬಹುದು' ಎಂದು ಸೂಚನೆ ಕೊಟ್ಟಾಗ ಕಷ್ಟಪಟ್ಟು ಹೊರಡುವ ಮನಸ್ಸು ಮಾಡಿದ್ದರು ಮೂರ್ತಿಗಳು. ನಾಲ್ಕನೆಯ ತಿಂಗಳು ಮುಗಿಯುತ್ತಾ ಬರುವಾಗಲೇ 'ನಾನೇ ಬರಲೇ ಕರೆದುಕೊಂಡು ಹೋಗುವುದಕ್ಕೆ?' ಎಂದು ಜ್ಞಾಪನಾ ಪತ್ರವನ್ನು ಹೆಂಡತಿಗೆ ಬರೆದಿದ್ದರು. ಹೆಂಡತಿಗೆಲ್ಲಿ ಓದುವುದಕ್ಕೆ ಬರುತ್ತಿತ್ತು? ಮಾವನವರೇ ಓದಿ ಹೇಳಬೇಕು ತಾನೇ?! ತಕ್ಷಣವೇ 'ಇಂತಹ ದಿನ ಮಗುವನ್ನೂ ಬಾಣಂತಿಯನ್ನೂ ಕರೆದುಕೊಂಡು ಬರುತ್ತಿದ್ದೇವೆ' ಎಂದು ಬೀಗರಿಗೆ ಬರೆದಿದ್ದರು. ಅಬ್ಬಾ, ಸಧ್ಯ ಬದುಕಿದೆ! ಎಂದುಕೊಂಡರು ಮೂರ್ತಿಗಳು. ಮುಂದಿನ ಬಾಣಂತನಗಳಿಗೆ ತವರಿನವರು ಕರೆಯಲಿಲ್ಲವೆನ್ನಿ.

ಕಾಲಕ್ರಮೇಣ ಅಪ್ಪ ಅಮ್ಮನೂ ಕಾಲವಾದರು. ಇರುವ ಜಮೀನು ಉಳುವ ರೈತನ ಪಾಲಾಯಿತು. ಕೆಲಸದಲ್ಲಿದ್ದ ತಮ್ಮಂದಿರು ಮನೆಯನ್ನು ಅಣ್ಣನಿಗೆ ಬಿಟ್ಟುಕೊಟ್ಟು ಬೇರೆಬೇರೆ ಸಂಸಾರ ಹೂಡಿದರು. ಮನೆ, ಕೊಟ್ಟಿಗೆಯಲ್ಲಿದ್ದ ಕರಾವು ಇಷ್ಟೇ ಆದಾಗ ಸಹಜವಾಗಿಯೇ ಜೀವನ ನಿರ್ವಹಣೆ ಕಷ್ಟವಾಯಿತು. ಮೂರ್ತಿಗಳು ಅದೂ ಇದೂ ಏಜೆನ್ಸಿ ಹಿಡಿದು, ಹೆಚ್ಚಾದ ಹಾಲನ್ನು ಡೈರಿಗೆ ಹಾಕುತ್ತಾ ಹೇಗೋ ಒಂಭತ್ತು ಮಕ್ಕಳ ಸಂಸಾರವನ್ನು ನಿಭಾಯಿಸಲು ಯತ್ನಿಸುತ್ತಿದ್ದಾಗ ಒಂದಷ್ಟು ಮಿತವ್ಯಯವನ್ನು ಪಾಲಿಸಲೇಬೇಕಲ್ಲವೇ. ಆದರೆ ಸಮೃದ್ಧಿಯನ್ನಷ್ಟೇ ಕಂಡಿದ್ದ ಪದ್ದಮ್ಮನಿಗೆ ಪಾವು ಚಟಾಕುಗಳ ಅಳತೆಯೇ ಗೊತ್ತಿರಲಿಲ್ಲ. ಎಲ್ಲಾ ಸೇರುಗಳಲ್ಲಿಯೇ ಲೆಕ್ಕಾಚಾರ. ಬೇಳೆಯ ಚೀಲದಿಂದ ಬೊಗಸೆಯಲ್ಲಿ ಎತ್ತೆತ್ತಿ ಕೊಳಗಗಳಿಗೆ ಸುರಿದು ಅಡುಗೆಗಿಡುತ್ತಿದ್ದಿದ್ದೇ. ಮೂರ್ತಿಗಳಿಗೋ ಸೇರು ಕೊಳಗಕ್ಕೆ ಸುರಿದರೆ, ಪಾವಷ್ಟನ್ನು ವಾಪಸ್ಸು ಚೀಲಕ್ಕೆ ಸುರಿಯಲಿ ಎನ್ನುವ ನಿರೀಕ್ಷೆ. ಆದರೆ ಅದೆಂದೂ ಸಫಲವಾಗಲೇ ಇಲ್ಲ ಬಿಡಿ, ಹಾಗೇನಾದರೂ ಹೇಳಿದರೆ ಇನ್ನೊಂದರ್ಧ ಬೊಗಸೆ ಹೆಚ್ಚಾಗಿಯೇ ಬೀಳುತ್ತಿತ್ತು. ಎಣ್ಣೆ, ತುಪ್ಪ, ಬೇಳೆ, ಬೆಲ್ಲ, ಸಕ್ಕರೆ ಇಂಥವನ್ನೆಲ್ಲಾ ಅಡುಗೆಗೆ ಹಾಕುವಾಗ ಅದೆಲ್ಲಿರುತ್ತಿದ್ದರೋ ಆ ಕ್ಷಣಕ್ಕೆ ಅಲ್ಲಿ ಪ್ರತ್ಯಕ್ಷರಾಗಿರುತ್ತಿದ್ದರು ಮೂರ್ತಿಗಳು. "ಇದೇನು ಇದೇನು, ಸ್ವಲ್ಪ ಕೈ ಹಿಡಿತ ಇರ್ಲಿ, ಇನ್ನೂ ನಾಕುದಿನ ಬರ್ಲಿ ಸಾಮಾನು, ಇವತ್ತೇ ಮುಗಿಸ್ಬಿಡ್ಬೇಡ" ಎಂದು ಅಲ್ಲೇ ನಿಂತರೆ, ಅವರೆದುರು ಕಮ್ಮಿಮಾಡಿ, ಅವರತ್ತ ಹೋದ ತಕ್ಷಣ ಬೀಳಬೇಕಾದ್ದಕ್ಕಿಂತ ಒಂದಿಷ್ಟು ಹೆಚ್ಚಾಗಿಯೇ ಪಾತ್ರೆಗೋ, ಬಾಣಲೆಗೂ ಬೀಳುತ್ತಿದ್ದದ್ದು ಸತ್ಯ. ಹಾಗೆಂದು ಎಂದೋ ಒಂದು ದಿನ, ಗಂಡ ಇಷ್ಟು ಹೇಳುತ್ತಾರಲ್ಲಾ ಎಂದು ಸಾಮಗ್ರಿಗಳ ಉಳಿತಾಯ ಮಾಡಿ, ರುಚಿ ಕಡಿಮೆಯಾದರೆ ಒಪ್ಪುತ್ತಿದ್ದರೇ ಮೂರ್ತಿಗಳು? "ಇಷ್ಟು ಸಾಮಾನು ತಂದು ಸುರೀತೀನಿ, ರುಚಿಕಟ್ಟಾಗಿ ಮಾಡಕ್ಕೇನು ಕಷ್ಟ?" ಎನ್ನುತ್ತಿದ್ದರು. ಪದ್ದಮ್ಮನವರೇನು ಸುಮ್ಮನಿರುತ್ತಿದ್ದರೆ? "ಸದಾ ಅಡುಗೆಮನೆಗೆ ಬಂದು ತನಿಖೆ ಮಾಡ್ತಿದ್ರೆ ಹಂಗೇ ಆಗೋದು. ಅಡ್ಗೆ ವಿಷ್ಯಕ್ಕೆ ಗಂಡಸ್ರು ತಲೆ ಹಾಕ್ಬಾರ್ದು" ಎಂದು ತಮ್ಮ ವಾದವನ್ನು ಮಂಡಿಸುತ್ತಿದ್ದರು.

ಗಂಡನರ ಉಳಿತಾಯದ ರೀತಿ ಹೀಗಿದ್ದರೆ, ಹೆಂಡತಿಯದು ಇನ್ನೊಂದು ಬಗೆ. ಮೂಟೆ ಅಕ್ಕಿ ಬಂದರೆ ಒಂದೈದು ಸೇರು ಅಟ್ಟದ ಮೇಲಿನ ಯಾವುದೋ ಮೂಲೆಯ ತಪ್ಪಲೆಯಲ್ಲೋ, ಡಬ್ಬದಲ್ಲೋ ಅಡಗಿ ಕುಳಿತುಕೊಳ್ಳುತ್ತಿತ್ತು. ಬೇಳೆ, ಬೆಲ್ಲ, ಏನು ಬಂದರೂ ಅಷ್ಟೇ, ಒಂದು ಭಾಗ ಅಟ್ಟದ ಯಾವ್ಯಾವುದೋ ಸಂದುಗಳಲ್ಲಿ ಜಾಗ ಮಾಡಿಕೊಳ್ಳುತ್ತಿದ್ದವು. ಅಡುಗೆಮನೆಯ ಡಬ್ಬಿಗಳು ತಳ

ಕಾಣುವ ಮೊದಲೇ ಪದ್ದಮ್ಮ ಖಾಲಿ ಡಬ್ಬದ ಸದ್ದು ಮಾಡುತ್ತಿದ್ದರು. "ಹ್ಞೂಂ, ತರೋಣ, ತರೋಣ. ವಾರದ ಕೊನೆಗೆ ಕಮಿಷನ್ ಬರುತ್ತೆ. ಆಮೇಲೆ ತರ್ತೀನಿ" ಎನ್ನುತ್ತಾ ಬೀಸೋ ದೊಣ್ಣೆ ತಪ್ಪಿಸಿಕೊಳ್ಳುತ್ತಿದ್ದರು ಮೂರ್ತಿಗಳು. ಮರುಮಾತಾಡದೆ ಮಾರನೆಯ ದಿನ ಹುಣಿಸೇ ಸಾರೋ, ಮೆಣಸಿನ ಸಾರೋ ಮಾಡಿ, ಏನೋ ಒಂದು ತಂಬುಳಿಯನ್ನು ಊಟಕ್ಕೆ ಬಡಿಸಿದರೆ "ಏನು ದಿವಿನಾಗಿತ್ತು, ಇದನ್ನೇ ಇನ್ನೂ ನಾಕ್ದಿನ ಮಾಡು" ಎನ್ನುತ್ತಿದ್ದರು. ರಾತ್ರಿಯೂಟಕ್ಕೂ ಅದೇ ಪುನರಾವರ್ತನೆಯಾದಾಗ ಮಾತ್ರಾ ಮರುದಿನ ಬೆಳಗ್ಗೆ "ನಾಕ್ದಿನಕ್ಕೆಷ್ಟು ಬೇಕೋ ಅಷ್ಟನ್ನ ಕಿಟ್ಟಿ ಕೈಲಿ ತರಿಸ್ಕೋ" ಎಂದು ಕಾಸು ಕೊಟ್ಟಾಗ ದುಡ್ಡು ಸಾಸುವೆ ಡಬ್ಬಿಯೊಳಗೆ ಅಡಗಿ, ಅಟ್ಟದಿಂದ ಸಾಮಾನು ಇಳಿದುಬರುತ್ತಿತ್ತು. ಅದೇನು ಅವರು ಪಾಪ ತಮಗಾಗಿ ಇಟ್ಟುಕೊಳ್ಳುತ್ತಿದ್ದರೇ? ಹೀಗೇ ದಿಢೀರನೆ ಯಾರೋ ಬಂಧುಬಾಂಧವರು ಬಂದಾಗ 'ಇವತ್ತು ಗಸಗಸೆ ಪಾಯ್ಸ ಮಾಡ್ಬಿಡು' ಅಂತಲೋ 'ಬೋಂಡಾ ಕರಿದ್ಬಿಡು' ಅಂತಲೋ ಅವರೆದುರೇ ಅಪ್ಪಣೆ ಮಾಡಿದಾಗ ಗಸಗಸೆಯೋ, ಕಡಲೇ ಹಿಟ್ಟೋ ಅಟ್ಟದಿಂದ ಉದುರುತ್ತಿರಲಿಲ್ಲವಲ್ಲ! ಆಗ ಸಾಸಿವೆ ಡಬ್ಬಿಯ ಕಾಸು ತಾನೇ ಉದುರಬೇಕು? ಹೀಗೆ ಅಂತೂ ಒಬ್ಬರಿಗಿಂತ ಇನ್ನೊಬ್ಬರು ಜಾಣರು.

ಹೀಗೇ ಸಾರಿನ ಪುಡಿ ಮಾಡುವಾಗ ಜೀರಿಗೆಯೋ, ಮೆಣಸೋ ಏನೋ ಕಮ್ಮಿಯಿದೆಯೆಂದರೆ "ಅದಕ್ಕೆ ಅಡ್ಜಸ್ಟ್ ಮಾಡ್ಕೊಂಡು ಮಿಕ್ಕಿದ್ ಸಾಮಾನನ್ನೂ ಕಮ್ಮಿಕಮ್ಮಿ ಹಾಕಿ ಸ್ವಲ್ಪ ಕಮ್ಮೀನೇ ಪುಡಿ ಮಾಡ್ಬಿಡು. ಖರ್ಚಾದ್ಮೇಲೆ ನೋಡ್ಕೋಳೋಣ" ಅನ್ನುತ್ತಿದ್ದರೇ ಹೊರತು ತಕ್ಷಣವೇ ಹೋಗಿ ತಂದುಕೊಡುತ್ತಿರಲಿಲ್ಲ. ಎಲ್ಲೋ ಅಟ್ಟದ ಮೇಲೆ ಮುಚ್ಚಿಟ್ಟಿರ್ತಾಳೆ, ಅದು ಕೆಳಗವತರಿಸಲಿ ಎನ್ನುವುದು ಅವರ ಇರಾದೆ. ಪದ್ಮಾವತಮ್ಮನೂ "ಸರಿ ಬಿಡಿ, ಹಾಗೇ ಮಾಡ್ತೀನಿ" ಎಂದು ತಮ್ಮ ಗುಪ್ತ ಸಂದೂಕದಲ್ಲಿದ್ದ ಸಾಮಾನುಗಳನ್ನು ಉಪಯೋಗಿಸಿಕೊಂಡು ಮಾಡಿ ಒಂದಷ್ಟು ಪುಡಿಯನ್ನೇ ಮೇಲಕ್ಕೆ ರವಾನಿಸಿಬಿಡುತ್ತಿದ್ದರು. ಅಂತೂ ಮೂರ್ತಿಗಳು ಸಾಮಾನು ತಂದ ಮೇಲೆ ಅವು ಅಟ್ಟಕ್ಕೇರಿ, ಪುಡಿ ಕೆಳಗಿಳಿದು ಬರುತ್ತಿತ್ತು.

ಪದ್ದಮ್ಮನಿಗೋ ಮುಸುರೆ, ಮಡಿಗಳ ಹಾವಳಿ ವಿಪರೀತ. ದಿನಕ್ಕೆ ಮೂರ್ನಾಲ್ಕು ಬಾರಿ ಕಟ್ಟೆಯನ್ನು, ಸ್ಟೋವನ್ನು ತೊಳೆತೊಳೆದು, ಅಡುಗೆಮನೆಯನ್ನೂ ನೀರು ಹಾಕಿ ಪೊರಕೆಯಲ್ಲಿ ಝಾಡಿಸಿ ಒರೆಸಿ ಮಡಿಯಾಗಿಟ್ಟುಕೊಳ್ಳಬೇಕು. ಹಾಗೆಂದು ಭಾವಿಗೆ ಪಂಪು ಹಾಕಿ ನೀರೆಳೆದು, ಎಳೆದು ದಡಕ್ಕೆ ನೆಲಕ್ಕೆ ಸುರಿಯುತ್ತಿದ್ದರೆ ಕರೆಂಟು ಬಿಲ್ಲನ್ನು ಕಟ್ಟುವವರ್ಯಾರು? ಹೇಳಿದರೆ ಕೇಳುವವರೇ ಪದ್ದಮ್ಮ?! ಐದು ನಿಮಿಷಕ್ಕಿಂತ ಜಾಸ್ತಿ ಪಂಪು ಓಡುತ್ತಿದ್ದರೆ ಏನೂ ಅರಿಯದವರಂತೆ ಮೇನ್ ಸ್ವಿಚ್ಚನ್ನು ಆರಿಸಿ ತಣ್ಣಗೆ ಕೂರುತ್ತಿದ್ದರು ಮೂರ್ತಿಗಳು. ಒಳಗಡೆ "ಕರೆಂಟು ಹೋಯ್ತೇನೋ, ಕೆಲಸ ಅರ್ಧವಾಗೋಯ್ತೆ" ಎನ್ನುವ ಸ್ವರ ಕೇಳಿಬಂದರೆ ಅಡುಗೆಮನೆಯೊಳಗೆ ಇಣುಕಿ "ಎಷ್ಟೊತ್ತಿಗೆ ಬರತ್ತೋ ಏನೋ, ಸುಮ್ನೆ ಒದ್ದೆ ಬಟ್ಟೆಯಲ್ಲಿ ಒರೆಸಿ ಕಾಫಿಗೆ ನೀರಿಡು. ದಿನಕ್ಕೊಂದ್ಸಲ ರಾತ್ರಿ ತೊಳುದ್ರೆ ಸಾಕೂಂದ್ರೆ ನೀನು ಕೇಳಲ್ಲ" ಎಂದು ಮೂರ್ತಿಗಳು ಸಧ್ಯಕ್ಕೆ ಗೆದ್ದೆನೆಂದು ಬೀಗುತ್ತಿದ್ದರು. ಅವರು ಕಾಫಿ ಕುಡಿದು ಹೊರಗೆ ಹೊರಟೊಡನೆ "ಕಿಟ್ಟೀ ಮೇನ್ ಸ್ವಿಚ್ ಹಾಕೋ" ಎಂದು ಪದ್ದಮ್ಮ ತಮ್ಮ ಕೆಲಸವನ್ನು ಮುಂದುವರೆಸುತ್ತಿದ್ದರು.

ಹೀಗೆಯೇ ಸಂಸಾರದ ರಥವನ್ನೆಳೆದರು ಮೂರ್ತಿಗಳು ಮತ್ತು ಪದ್ದಮ್ಮನವರು. ಸದಾ ಮನೆ, ಗಂಡ ಮಕ್ಕಳು ಎಂದು ಒದ್ದಾಡುತ್ತಿದ್ದ ಪದ್ದಮ್ಮ ತೀರಾ ಅನಿವಾರ್ಯವಲ್ಲದೆ, ಮನೆಬಿಟ್ಟು ಹೋದದ್ದೇ ಇಲ್ಲ. "ಹದಿನೈದು ದಿನ ಆರಾಮಾಗಿ ತಮ್ಮನ ಮನೇಲಿದ್ದು ಬಾ" ಎಂದು ಕಳಿಸಿಬಿಟ್ಟು ಅವರಿಲ್ಲದಿದ್ದರೆ ದಿಕ್ಕು ತೋಚದಂತಾಗುತ್ತಿದ್ದ ಮೂರ್ತಿಗಳು ನಾಲ್ಕು ದಿನವಾಗುತ್ತಲೇ ಶಿವಮೊಗ್ಗದ ರೈಲನ್ನು ಹತ್ತುತ್ತಿದ್ದದ್ದು ಎಲ್ಲರಿಗೂ ಗೊತ್ತಿದ್ದ ವಿಷಯವೇ. ಹೀಗೆ ಮೇಲ್ನೋಟಕ್ಕೆ ಯಾವುದೇ ಪ್ರೀತಿಯ ಮಾತುಗಳು, ಓಲೈಸುವಿಕೆ ಇಲ್ಲದಿದ್ದರೂ ಒಳಗೊಳಗೇ ಇಬ್ಬರೂ, ಒದ್ದುಕೊಳ್ಳುತ್ತಿದ್ದ, ಸಂಸಾರವನ್ನು ತೂಗಿಸುತ್ತಿದ್ದ ಪರಿಯನ್ನು ನೆನಸಿಕೊಂಡರೆ ಸಂದುಹೋದ ಹಿರಿಯ ಜೀವಗಳ ಸಾರ್ಥಕ ಬದುಕಿನ ರೀತಿ ಮನವನ್ನು ತಂಪಾಗಿಸುವುದಲ್ಲವೇ?

ಅನುಭವ

ನನ್ನ ಕಣ್ಣೀರಿನ ಕಥೆ, ವ್ಯಥೆ

- **ದಾ ಭೀ ಪ್ರಾಣೇಶ ರಾವ್**

ನನ್ನ ಕಣ್ಣೀರು ದುಃಖದ್ದಲ್ಲ, ಆನಂದ ಬಾಷ್ಪವೂ ಅಲ್ಲ. ಕಣ್ಣು ಕೆಂಪಗೆ, ನೋವು, ಒತ್ತುವಿಕೆ ಯಾವುದೂ ಇಲ್ಲ, ಕೊರೋನಾ ಲಕ್ಷಣದ ಭೀತಿ ಇಲ್ಲ. ಯಾರದೋ ಕಷ್ಟಕ್ಕೆ ಬೂಟಾಟಿಕೆಯ ಅನುಕಂಪ ಸೂಚಿಸುವ ಮೊಸಳೆ ಕಣ್ಣೀರೂ ಅಲ್ಲ. ನಿಮ್ಮ ಊಹೆ ಸರಿ, ದೃಷ್ಟಿ ದೋಷ. ಕನ್ನಡಕ ಬದಲಾಯಿಸಿ ಮೂರು ವರ್ಷದ ಮೇಲಾಗಿತ್ತು. ಕಣ್ಣಿನ ಡಾಕ್ಟರಿಗೆ ತೋರಿಸುವಷ್ಟರಲ್ಲಿ ಕೊರೋನಾ ವಕ್ಕರಿಸಿ ಗೃಹಬಂಧನವಾಯಿತು. ಕಣ್ಣಿನಲ್ಲಿ ಸದಾ ಒದ್ದೆಯಾಗಿ ಪದೇಪದೇ ಕರವಸ್ತ್ರ ಉಪಯೋಗಿಸಿ ಕಣ್ಣುಗಳನ್ನು ಮುಟ್ಟುತ್ತಾ ಕೊರೊನಾ ನಿವಾರಕ ನಿಯಮ ಪಾಲಿಸಲಾಗುತ್ತಿರಲಿಲ್ಲ. ಇಷ್ಟೂ ನನ್ನ ಲೇಖನಕ್ಕೆ ಪೀಠಿಕೆ.

ಈಗ ಇದಕ್ಕೆ ಪೂರಕವಾಗಿ ಸ್ವಲ್ಪ ವಿಷಯಾಂತರ. ನನ್ನ ಹಲವು ಹವ್ಯಾಸಗಳಲ್ಲಿ ತಾರಸಿ ಕೃಷಿಯೂ ಒಂದು. ಕೆಲವು ಕುಂಡಗಳಲ್ಲಿ ನಿತ್ಯ ಪೂಜೆಗೆ ಬೇಕಾಗುವ ಹೂಗಳು ಮತ್ತು ಮನೆಗೆ ನಿತ್ಯ ಬಳಸುವ ಇತರ ಕೆಲವು ಗಿಡಗಳನ್ನು ಬೆಳಸಿರುವೆ. ಅವುಗಳ ಯೋಗಕ್ಷೇಮದ ಮಾಲಿ ಕೆಲಸ ನನ್ನ ದಿನಚರಿ. ಕಳೆದ ಆರೆಂಟು ತಿಂಗಳಿಂದ ಅವುಗಳನ್ನು ಸರಿಯಾಗಿ ನೋಡಿಕೊಳ್ಳಲಾಗದೆ ಸ್ವಲ್ಪ ದುಸ್ಥಿತಿಯಲ್ಲಿತ್ತು. ಈಗ ಮೂರು ತಿಂಗಳ ಹಿಂದೆ ದಿನವೂ ಸಂಜೆಯ ಹೊತ್ತು ನನ್ನ ಮಾಲಿ ಕೆಲಸ ಪುನರಾರಂಭವಾಯಿತು.

ಅಂದು ಸಂಜೆ ಇರುವಂತಿಗೆಯ ಕುಂಡದಲ್ಲಿದ್ದ ಕಳೆಕಿತ್ತು ರೀಪಾಟ್ ಮಾಡುವುದರಲ್ಲಿದ್ದೆ. ಒಣಗಿದ ಬಟ್ಟೆಗಳನ್ನು ತೆಗೆದುಕೊಂಡು ಹೋಗಲು ಬಂದ ನಮ್ಮ ಗೃಹಮಂತ್ರಿಗಳು., "ಆರುಗಂಟೆ ಆಯಿತು .ಇವತ್ತಿಗೆ ಸಾಕು, ಮೋಡ ಕವಿದಿದೆ, ಮಳೆ ಬರುವಂತಿದೆ ಇಳಿದು ಬನ್ನಿ" ಎಂದು ಹೇಳಿ ಹೋದರು. ನಾನು ಅರ್ಥಕ್ಕೆ ನಿಲ್ಲಿಸದೆ ಕೆಲಸ ಮುಂದುವರೆಸಿದೆ. ಅಷ್ಟರಲ್ಲಿ, "ಬನ್ನೀ, ಮಳೆ ಷುರು ಆಯಿತೂ", ಕೂಗು ಕೇಳಿಸಿತು. ಧ್ವನಿ ಸ್ವಲ್ಪ ಜೋರಾಗಿಯೇ ಇತ್ತು. ಅವಸರದಿಂದ ಮೆಟ್ಟಿಲುಗಳನ್ನು ಇಳಿಯುತ್ತ ಕೆಳಗೆ ಬಂದೆ.

ರಾತ್ರಿ ಮಲಗುವಾಗ ಕಾಲಿಗೆ ಸ್ವಲ್ಪ ನೋವು ಶಮನ ಮುಲಾಮು ಹಚ್ಚಿದ್ದನ್ನು ನೋಡಿ, "ಯಾಕೆ ಏನಾಯಿತು !?

"ಏನೂ ಇಲ್ಲ, ಸುಮ್ಮನೆ".

"ಏನೋ! ಎಷ್ಟು ಹೇಳಿದರೂ ಕೇಳಲ್ಲ, ಗಂಟೆಗೆ ಇಪ್ಪತ್ತು ಸಲ ದಢಬಢಾ ಅಂತ ಮಾಡಿ ಮೆಟ್ಟಲು ಹತ್ತುತೀರಾ! ಇರೋವರ್ಗೂ ಕಣ್ಣು, ಕೈಕಾಲು ಗಟ್ಟಿಯಾಗಿ ಇಟ್ಟುಕೋಬೇಕು. ಏನಾದರೂ ತೊಂದರೆ ಆದರೆ ಅನುಭವಿಸೋರು ನಾವು ತಾನೇ?"

ನನ್ನ ಆರೋಗ್ಯದ ವಿಚಾರದಲ್ಲಿ ಅವರ ಕಳಕಳಿ ಸಹಜ. ಅವರ ವಾಗ್ಬಾಣದ ಪರಿಣಾಮವೋ ಏನೋ ನನ್ನ ಬಲಗಾಲಿನ ಮೀನಖಂಡದಲ್ಲಿ ಸೆಳೆತದ ನೋವು ಕಾಣಿಸಿತು. .ಎರಡು ಮೂರು ದಿನ ಮನೆಯ ಪ್ರಥಮ ಚಿಕಿತ್ಸೆಗೆ ಕಡಿಮೆಯಾಗಲಿಲ್ಲ. ಸುದ್ದಿ ನಮ್ಮ ಹೆಣ್ಣು ಮಕ್ಕಳಿಗೆ (ಗೃಹ ಸಚಿವರಿಗೆ ಆಪ್ತ ಸಚಿವೆಯರು) ತಿಳಿದ ಕೂಡಲೇ ಚಿಕ್ಕವಳು "ಹೋದವರ್ಷ ಆಗಿತ್ತಲ್ಲಾ ! ಹಾಗೇನಾ?" ಎಂದು ವಿಚಾರಿಸಿದಳು.

ಸುಮಾರು ಒಂದೂವರೆ ವರ್ಷದ ಹಿಂದೆ ಇದೇ ಕಾರಣಕ್ಕೆ ಮೂಳೆತಜ್ಞರು ಪರೀಕ್ಷೆ ಮಾಡಿ ಎಂ ಆರ್ ಐ ಸ್ಕ್ಯಾನ್ ಮಾಡಿಸಿತ್ತು. ಡಿಸ್ಕ್ ಸಮಸ್ಯೆ ಎಂದು ಶಸ್ತ್ರಚಿಕಿತ್ಸೆ ಸಲಹೆ ಮಾಡಿದ್ದರು. ಅದಕ್ಕೆ ಹೆದರಿ ಆಯುರ್ವೇದ ಚಿಕಿತ್ಸೆ, ಬಸ್ತಿ ಸಹಿತ ಅಭ್ಯಂಜನ, ನಾರು ಬೇರಿನ ಪುಡಿಗಳ ಕಷಾಯದ ಸೇವನೆಯಿಂದ ನೋವು ಉಪಶಮನವಾಗಿತ್ತು.

ಅವಳು ಅದೇ ಆಸ್ಪತ್ರೆಯ ವೈದ್ಯರೊಡನೆ ನೋಡಿಯೋ ಸಂವಾದ ಏರ್ಪಡಿಸಿದಳು. ಅವರು ಎರಡು ತರಹದ ಮಾತ್ರೆಗಳು, ಕಷಾಯ ಸಲಹೆ ಮಾಡಿದರು. ಒಂದು ಮಾತ್ರೆಯ ಹೆಸರು ಗ್ರೇ ಸ್ಮಾರ್ಟ್. ನಾನು ನನ್ನ ಬಿಳೀ ಕೂದಲಿಗೆ ಕೊಬ್ಬರಿ ಎಣ್ಣೆ ಹಚ್ಚಿ ಬಾಚಿ, ಸೆಲ್ಫೀ ತೆಗೆದು ಖುಷಿ ಪಟ್ಟೆ. ಮೂರು ದಿವಸವಾದರೂ ನೋವು ಕಡಿಮೆ ಆಗಲಿಲ್ಲ. ಮತ್ತೆ ಮನೆಯವರ ಗೊಣಗಾಟ..

"ಹೋದ ವರ್ಷಾನೇ ಡಾಕ್ಟರು ಮೆಟ್ಟಲು ಹತ್ತುವಾಗ, ಇಳಿಯುವಾಗ ಹುಷಾರಾಗಿರಿ ಅಂತ ಹೇಳಿದ್ದರು. ಆದರೂ ನೀವೆಲ್ಲಿ ಕೇಳ್ತೀರಾ!? ನೀವೇನು ಇಪ್ಪತ್ತು ವರ್ಷದ ಹುಡುಗಾ ಅನ್ಕೊಂಡಿದೀರಾ !?

ವಯಸ್ಸಿನ ವಿಚಾರದಲ್ಲಿ ನನಗೆ ಶತಾಯುಷಿಗಳದೇ ಮನಸ್ಸಿಗೆ ಬರುತ್ತದೆ. ನಮ್ಮ ಹಿರಿಯರೆಲ್ಲರೂ ಶತಕದ ಹತ್ತಿರ ಜೀವಿಸಿದ್ದರು. ನಮ್ಮ ಚಿಕ್ಕಪ್ಪ ನೂರಾ ಒಂದಕ್ಕೆ ಸ್ವಲ್ಪ ಸಮೀಪ ರನೌಟ್ ಆಗಿದ್ದರು. ನನಗೆ ನನ್ನ ವಯಸ್ಸಿನಲ್ಲಿ ಅರವತ್ತು ಮರೆತೇ ಹೋಗಿ, ಇಪ್ಪತ್ತು ಮಾತ್ರವೇ ನೆನಪಾಗುವುದು. ವೈದ್ಯರ ವೈಯಕ್ತಿಕ ಭೇಟಿ ಅನಿವಾರ್ಯವಾಯಿತು. ಮತ್ತೆ ಒಂದು ದಿನ ಅಂಗಮರ್ದನ ಸಹಿತ ಅಭ್ಯಂಜನ, ನಾರುಬೇರಿನ ಪುಡಿಗಳ ಕಷಾಯ, ಮಾತ್ರೆಗಳು. ಸ್ಮಾರ್ಟ್ ವಾಕ್ ಒಂದು ಮಾತ್ರೆಯ ಹೆಸರು. ನನಗೆ ಯೌವನೋತ್ಸಾಹದಿಂದ ಓಡುವ ಮನಸ್ಸಾಯಿತು.

ಚಿಕಿತ್ಸೆಯ ದೃಷ್ಟಿಯಿಂದ ಮಗಳ ಮನೆಯಲ್ಲಿ ಮೊಕ್ಕಾಂ ಆಯಿತು. ಮರುದಿನ ಹತ್ತಿರದ ಪ್ರಸಿದ್ಧ ನೇತ್ರ ಚಿಕಿತ್ಸೆ ಆಸ್ಪತ್ರೆಯ ಭೇಟಿ. ನೇತ್ರ ತಪಾಸಣೆ, ಕನ್ನಡಕ ಬದಲಾಯಿಸಲು ಸಲಹೆ, ಹೊಸ ಕನ್ನಡಕ ಕೊಂಡಾಯಿತು. .ಕಣ್ಣೀರಿನ ಸಮಸ್ಯೆಗೆ ಹಿರಿಯ ತಜ್ಞರ ಭೇಟಿ. 'ಅವರು ಕಣ್ಣು ಗುಡ್ಡೆಯ ಒತ್ತಡದಲ್ಲಿನ ದೋಷ ನಿವಾರಣೆಗೆ ಲೇಸರ್ ಚಿಕಿತ್ಸೆ ಮಾಡಬೇಕು. ನಂತರ ವಯಸ್ಸಿನ ಕಾರಣ ಕೆಳರೆಪ್ಪಗಳು ಒಳಗೆ ಮಡಿಚಿವೆ. ಅದನ್ನು ಸರಿಪಡಿಸಲು ಒಂದು ತಿಂಗಳ ಒಳಗೆ ಶಸ್ತ್ರಚಿಕಿತ್ಸೆ ಮಾಡಬೇಕು' ಎಂದು ಸಲಹೆ ಮಾಡಿದರು. ಸರಿ, ಮನೆಯಲ್ಲಿ ಎರಡನೆಯ ತಜ್ಞರ ಅಭಿಪ್ರಾಯ ಪಡೆಯುವ ವಾದ ವಿವಾದ, ಚರ್ಚೆಗಳಾದವು.

ಕೊನೆಗೆ, ಸೋಮವಾರ ಶಸ್ತ್ರಚಿಕಿತ್ಸೆಗೆ ಸಿದ್ಧ ಎಂದು ಶನಿವಾರ ತಿಳಿಸಿದರು. ಸೋಮವಾರ ಶಸ್ತ್ರಚಿಕಿತ್ಸೆ ಇಲ್ಲ, ಮಂಗಳವಾರ ಎಂದರು. ಮಂಗಳವಾರ ಬೇಡ, ಬುಧವಾರಕ್ಕೆ ಕೇಳಲು ಬುಧವಾರ ಶಸ್ತ್ರಚಿಕಿತ್ಸೆ ಇಲ್ಲ, ಗುರುವಾರ ಎಂದರು. ಒಪ್ಪಿಗೆಯಾಯಿತು. ಆದರೆ ಗುರುವಾರ ಆಸ್ಪತ್ರೆಯಿಂದ, ಹಿರಿಯ ತಜ್ಞರು ರಜೆ, ಶುಕ್ರವಾರ ಅವರ ಡೈರಿ ನೋಡಿಕೊಂಡು ಸಮಯ ತಿಳಿಸುವುದಾಗಿ ದೂರವಾಣಿ ಸಂದೇಶ ಬಂತು.

ಮಗಳಿಗೆ ಹೊಸ ಆಲೋಚನೆಯ ಪರಿಣಾಮ, ಆಯುರ್ವೇದ ಆಸ್ಪತ್ರೆಯಲ್ಲಿ ಚಿಕಿತ್ಸೆ ಇದೆಯೇ ವಿಚಾರಿಸಿದಳು. ಉತ್ತೇಜನಕಾರಿ ಉತ್ತರ. ಆದರೆ ಅಲ್ಲಿನ ನೇತ್ರ ವೈದ್ಯೆ ರಜೆಯಲ್ಲಿರುವುದಾಗಿ ತಿಳಿಯಿತು. ಅವರೊಡನೆ ನೋಡಿಯೋ ಸಂಪರ್ಕ, ವಿಚಾರ ವಿನಿಮಯ. .ಚಿಕಿತ್ಸೆ ಆರಂಭಕ್ಕೆ ಮುಂಚೆ ಮೂರು ದಿನ ಹೊಟ್ಟೆ ಖಾಲಿಯಾಗಲು ವಿರೇಚನ ಔಷಧ. ಸೋಮವಾರದಿಂದ ಚಿಕಿತ್ಸೆ ಆರಂಭಿಸುವುದಾಗಿ ಹೇಳಿದರು. ಅಷ್ಟರಲ್ಲಿ ಮಗಳ ಮನೆಯ ಆಸುಪಾಸಿನಲ್ಲಿ ಕೊರೋನಾ ಎರಡನೆಯ ಅಲೆಯ ಪರಿಣಾಮ ಸೀಲ್ ಡೌನ್ ಸಂಭವದ ಸುದ್ದಿ. ಮಗಳ ಮನೆಯಲ್ಲಿ ನನ್ನ ಮೊಕ್ಕಾಂ ಮುಕ್ತಾಯ. ಮನೆಗೆ ವಾಪಸು.

ಕಾರಣಾಂತರದಿಂದ ಕಣ್ಣಿನ ಚಿಕಿತ್ಸೆ ಬುಧವಾರ ಮಧ್ಯಾನ್ಹಕ್ಕೆ ಗೊತ್ತಾಯಿತು. ಒಂದು ವಾರ ಮಗನ ಸಹಾಯದಿಂದ ಕಾರಿನಲ್ಲಿ ಮನೆಯವರೊಂದಿಗೆ ಮನೆ ಮತ್ತು ಆಸ್ಪತ್ರೆಗೆ ಚಿಕಿತ್ಸೆಗಾಗಿ ಓಡಾಟ. ಮೊದಲೆರಡು ದಿನ ನಸ್ಯ ಚಿಕಿತ್ಸೆ, ನಂತರ ಐದು ದಿನಗಳು ನೇತ್ರ ತರ್ಪಣ, ನಸ್ಯ ಚಿಕಿತ್ಸೆಯ ಜತೆಜತೆಗೆ. ಈ ಚಿಕಿತ್ಸೆಗಳ ಸ್ವಾರಸ್ಯ ಅನುಭವ ಮುಂದಿನ ದಾಸೋಹದಲ್ಲಿ .

ಒಂದು ವಾರದ ಚಿಕಿತ್ಸೆಯ ನಂತರ ವೈದ್ಯರ ಸಲಹೆಗಳು. ಕನ್ನಡಕದ ಬಳಕೆ ದಿನಕ್ಕೆ ಆರು ಗಂಟೆಗಳು ಮಾತ್ರ. ಉಳಿದಂತೆ ಕನ್ನಡಕ ಇಲ್ಲದೆ ಮಾಡಲು ಅಭ್ಯಾಸ ಅವಶ್ಯಕ. ಮೊಬೈಲು ಟೀವಿ ಬಳಕೆ ಆದಷ್ಟೂ ಕಡಿಮೆ ಮಾಡಬೇಕು. ಪ್ರಖರ ದೀಪದ ಬೆಳಕು ನಿಷೇಧ, ಬಿಸಿಲಿಗೆ ಹೋಗಬಾರದು. ಒಂದು ತಿಂಗಳ ನಂತರ ಮತ್ತೆ ಮರುಪರಿಶೀಲನೆ.

ಈ ಮಧ್ಯೆ ಲಾಕ್ ಡೌನ್. ಮುಂದಿನದು ವ್ಯಥೆಯ ಕಥೆ. ವೈದ್ಯರ ಷರತ್ತುಗಳನ್ನು ಪಾಲಿಸುವುದರ ಫಲಿತಾಂಶ.– ಮೂರು ತಿಂಗಳುಗಳಿಂದ ನೋಡಿಯೋ ಕಾರ್ಯಕ್ರಮಗಳಲ್ಲಿನ ಪ್ರಸ್ತುತಿಗಳು, ಮೆಚ್ಚುಗೆಗಳು, ಧನ್ಯವಾದಗಳಿಂದ ನನ್ನ ಚರವಾಣಿ ತುಂಬಿ ಪೂರ್ಣ ಗರ್ಭಿಣಿ. ಹೆಚ್ಚಿನವುಗಳನ್ನು ಓದಲಾಗಿಲ್ಲ. ಪ್ರತಿದಿನ ಪತ್ರಿಕೆಗಳ ವಿಶೇಷ ಲೇಖನಗಳನ್ನು ಓದಲಾಗಿಲ್ಲ. ಭಾನುವಾರ ಪತ್ರಿಕೆಗಳ ಸಾಹಿತ್ಯ ಲೇಖನಗಳನ್ನು ಓದಲಾಗಿಲ್ಲ. ಮೂರು ತಿಂಗಳ ಪತ್ರಿಕೆಗಳು ರದ್ದಿ ಮಾರಾಟವಾಗಿ ಸಂಕಟವಾಗಿದೆ. ಯುಗಾದಿ ವಿಶೇಷ ಸಂಚಿಕೆಗಳನ್ನು ಇನ್ನೂ ಓದಿಲ್ಲ, ಹೆಚ್ಚು ಮೊಬೈಲ್ ಬಳಕೆಗೆ ಮನೆಯವರ ಹಾಗೂ ಮಗನ ಸರ್ಪಗಾವಲು, ಹದ್ದುಗಾವಲು. ಕಣ್ಣೀರಿನ ಸಮಸ್ಯೆಯೂ ೮೦% ಭಾಗ ಮಾತ್ರ ಕಡಿಮೆ.

ಬದುಕೇ ಹೀಗೆ, ನಾವು ಅಂದುಕೊಳ್ಳುವುದೇ ಒಂದು, ಆಗುವುದೇ ಇನ್ನೊಂದು.

ಹನಿಗವನಗಳು

ಸಹಸ್ರ ಚಂದ್ರ ದರ್ಶನ

ಎಂಬತ್ತರ
ವೃದ್ಧ ದಂಪತಿಗಳು
ತಮಗೆ
ಸಹಸ್ರ ಚಂದ್ರ ದರ್ಶನ
ಆಯಿತು ಎಂದರು.
ಖುಷಿಯಿಂದ ಕೇಳಿದ
ಪುಂಡನೊಬ್ಬ
ಅದೇನು ಮಹಾ!
ನನಗೆ
ಎಪ್ಪತ್ತು ವರ್ಷಕ್ಕೇ ಆಗಿದೆ
ಹೆಣ್ಣುಮಕ್ಕಳ ಕಾಲೇಜು
ಮುಂದೆ
'ಚೆಲುವೆಯರ ಕಣ್ಣಲ್ಲಿ'
ಅಂದ

ದಂತ ವೈದ್ಯರು

ನನಗೆ
ನನ್ನಾಕೆಗಿಂತ
ದಂತ ವೈದ್ಯರೇ
ತುಂಬಾ ಇಷ್ಟ
ಕಾರಣ ಅವರು
'ಎಲ್ಲಿ ಬಾಯಿ ತೆಗೆಯಿರಿ'
ಎನ್ನುತ್ತಾರೆ
ಆದರೆ ನನ್ನಾಕೆ
'ಬಾಯಿ ಮುಚ್ಚಿ'
ಎನ್ನುತ್ತಾಳೆ

- **ಜಿಬಿಕೋಟೆ ಅನಂತ್**

ಓಡೋಡಿ ಬನ್ನಿರೋ

ಓಡೋಡಿ ಬನ್ನಿರೋ
ಕಾಫಿಯ ಕುಡಿಯಿರೋ

ನೀರು ಕುದಿಸುವರಂತೆ
ಕಾಫಿ ಪುಡಿ ಹಾಕುವರಂತೆ
ಹಾಲು ಸೇರಿಸುವರಂತೆ
ಸಕ್ಕರೆ ಬೆರೆಸುವರಂತೆ /ಓಡೋಡಿ/

ಕಾಫಿ ಕುಡಿತಿರಬೇಕು
ಚೈತನ್ಯದಿಂದಿರಬೇಕು
ಲವಲವಿಕೆಯಿಂದಿರಬೇಕು
ಚಟುವಟಿಕೆಯಾಗಿರಬೇಕು /ಓಡೋಡಿ/

ಬೆಳಗಾದ ಕೂಡಲೆ ಕಾಫಿ
ಬೇಕು ಎರಡನೆ ಡೋಸ್ ಕಾಫಿ
ಉಪಹಾರದ ನಂತರವು
ಕುಡಿಯಲು ಕಾಫಿ ಬೇಕು /ಓಡೋಡಿ/

ಕಾಫಿ ಮಾಡುವ ವಿಧಾನ ಸರಳ
ಕಾಫಿ ಕುಡಿಯುವ ಮಂದಿಯು ಬಹಳ
ಕಾಫಿ ಕುಡಿಯದಿರುವವರು ಅತಿ ವಿರಳ
ಕಾಫಿ ಕುಡಿಸಿ ನಿಲ್ಲಿಸಬಹುದು ಜಗಳ /ಓಡೋಡಿ/

ಆಪತ್ಕಾದಲಿ ಬೇಕು ಎಂದರೆ
ತತ್ಕಾಲದಲಿ ಮಾಡುವ ಕಾಫಿ
ಹಾಲು ಸಕ್ಕರೆ ಇದ್ದರೆ ಸಾಕು
ತಯಾರಾಗುವುದು ಇನ್ಸ್ಟೆಂಟ್ ಕಾಫಿ /ಓಡೋಡಿ/

ಡಿಕಾಕ್ಷನ್ ಕಾಫಿ ನೆಸ್ಕೆಫೆ ಕಾಫಿ
ಬ್ರೂ ಕಾಫಿ ಲೆವಿಸ್ಟ ಕಾಫಿ
ಆಯ್ಕೆಯು ನಿಮ್ಮದೆ ಸಂತಸ ನಿಮ್ಮದೆ
ಆಸ್ವಾದಕೆ ಇಹುದು ಜನಪ್ರಿಯ ಕಾಫಿ /ಓಡೋಡಿ

–ಎಂಜಿವಿ

ಪ್ರಶ್ನೋತ್ತರ

ನೀವೇಕೆ ಈಗ ಏನನ್ನೂ ಬರೆಯುತ್ತಿಲ್ಲ
ಕೇಳಿದರು ಮಿತ್ರರೊಬ್ಬರು
ಹಾಗೇನಿಲ್ಲ, ಆಗಾಗ್ಗೆ ಬರೆಯುತ್ತಿದ್ದೇನಲ್ಲ
ಹೇಳಿದೆ ನಾನವರಿಗೆ

ಹೌದೆ, ಮತ್ತೆ ವಾಟ್ಸಪ್ಪಿನಲ್ಲಿ ನೋಡಲಿಲ್ಲ
ಪ್ರಶ್ನಿಸಿದರು ಮತ್ತೆ ಅವರು

ಈಗೀಗ ವಾಟ್ಸಪ್ಪಿನಲ್ಲಿ ಬರುತ್ತಿದೆಯಲ್ಲ
ಬಹಳಷ್ಟು ಮಂದಿಯ ಬರಹಗಳು
ಉದ್ದುದ್ದ ಬರಹಗಳು
ಅಡ್ಡಡ್ಡ ಬರಹಗಳು
ಹಳಬರನು ಹಿಂದಿಕ್ಕಿ ಮುನ್ನುಗ್ಗುತ್ತಿರುವ
ಹೊಸಬರ ನವೀನ ಬರಹಗಳು
ಗದ್ಯಗಳು, ಪದ್ಯಗಳು,
ಗುಟುಕರಿಸುವ ಚುಟುಕುಗಳು, ಹನಿಗವನಗಳು,

ಇವುಗಳನೋದಲೇ ಸಮಯ ಸಿಗದಿರುವಾಗ
ಎಲ್ಲ ಬರಹಗಳನು ಶಾಶ್ವತ ಉಳಿಸಲು
ಸ್ಥಳಾವಕಾಶದ ಇತಿಮಿತಿಯೊಳಗೆ
ಅಳಿಸುವ ಪ್ರಕ್ರಿಯೆಯ ನಡುವೆ
ನಾನೂ ಬರೆಯುತ್ತಿದ್ದೇನೆ ಆಗಾಗ್ಗೆ
ಎಂದುತ್ತರಿಸಿದೆ ನಾನವರಿಗೆ

–ಎಂಜಿವಿ

ನಗೆಬರಹ

ಯಮರಾಜನ ಕಂಪ್ಯೂಟರ್ ಯಾಮಾರಿದಾಗ

- ಜಿ.ವಿ.ನಿರ್ಮಲ

"ಬುದ್ಧೀ" ಎಂದು ತನ್ನ ಸ್ವಾಮಿ ಯಮನನ್ನು ಕೂಗುತ್ತಾ ಚಿತ್ರಗುಪ್ತ ಯಮಧರ್ಮರಾಯನ ಕಛೇರಿಗೆ ಓಡೋಡುತ್ತಾ, ಏದುಸಿರು ಬಿಡುತ್ತಾ ಬಂದ.

"ಅಪ್ಪಾ ಚಿತ್ರಾ, ನನ್ನ ಇನ್ಮೇಲೆ ಬುದ್ಧೀ.... ಅಂತ ಕೂಗ್ಬೇಡ. ನನ್ನ ಬುದ್ಧಿ ಕೆಟ್ಟು ಎಷ್ಟೋ ದಿನಗಳಾಗಿವೆ. ಈಗ ಆ ಶಬ್ದ ಕೇಳಿದರೆ ನನ್ನ ಮೈಯೆಲ್ಲಾ ಉರಿಯತ್ತೆ" ಎಂದ ಯಮ.

"ಹಾಗಾದ್ರೆ ನನ್ನ ನೀವು ಚಿತ್ರಾ ಅಂತ್ಲೂ ಕೂಗ್ಬೇಡಿ. ಅದೇನೋ ಬಲು ವಿಚಿತ್ರವಾಗಿ ಕೇಳ್ಸತ್ತೆ. ಹೇಳಿಕೇಳಿ ಅದು ಹೆಣ್ಮಕ್ಕಳ ಹೆಸರೋ ಅಥ್ವಾ ಮತ್ತೇನೋ ಅನ್ಸತ್ತೆ."

"ರಾಮರಾಮ, ಭೂಲೋಕದಲ್ಲಿ ಮಾತ್ರವಲ್ಲ ಯಮಲೋಕದಲ್ಲೂ ಅಲ್ಲೋಲಕಲ್ಲೋಲವಾಗ್ತಾ ಇದೆ. ಈಗ ನಾವಿಬ್ಬರೂ ಭೂಲೋಕದವ್ರ ತರಹ ನಮ್ಮ ಹೆಸರುಗಳ ವಿಷ್ಯಕ್ಕೆ ಜಗಳ ಆಡ್ತಾ ಇದ್ದೀವಲ್ಲಾ., ಸಾಕು ಸಾಕು. ಸರಿ, ಈಗ ಹೇಳು ನೀನ್ಯಾಕೆ ಓಡೋಡಿ ಬಂದೆ?"

"ಸ್ವಾಮಿ... ಎಲ್ಲೋ ತಪ್ಪಾಗ್ಹೋಗಿದೆ"

"ಅಪ್ಪಾ ಮಾರಾಯ. ಎಲ್ಲೋ ಒಂದು ಕಡೆ ತಪ್ಪಾಗಿಲ್ಲ. ಎಲ್ಲ ಕಡೆಯೂ ತಪ್ಪು. ತಪ್ಪುತಪ್ಪೇ ಆಗಿದೆ. ತಪ್ಪು ಗುಪ್ತ್ ಗುಪ್ತ್, ಗಪ್‌ಚಿಪ್ ಆಗಿ ನಮ್ಮನ್ನೆಲ್ಲಾ ಆಟ ಆಡಿಸ್ತಾ ಇದೆ. ಎಲ್ಲಿ ಅಂತ್ಲೇ ತಿಳೀತಾ ಇಲ್ಲ. ನಿಂಗೇನಾದ್ರೂ ತಪ್ಪು ಎಲ್ಲಾಗಿದೆ ಅಂತ ಗೊತ್ತಿದ್ರೆ ಮೊದ್ಲು ಹೇಳು. ಕೋವಿಡ್ ಅನ್ನೋ ಖಾಯಿಲೆಯಿಂದ ಭೂಲೋಕದಲ್ಲಿ ಕೋಟಿ ಕೋಟಿ ಜನ ಸತ್ತು ಸುನಾಮಿಯಂತೆ ಯಮಲೋಕಕ್ಕೆ ಬರ್ತಿದ್ದಾರೆ. ಅವ್ರಿಗೆಲ್ಲಾ ಜಾಗ ಒದಗಿಸೋದೇ ಕಷ್ಟವಾಗಿದೆ."

"ಅದೇ ಸ್ವಾಮಿ ನಾನೂ ಹೇಳ್ತಾ ಇರೋದು. ಅಲ್ಲೇ ತಪ್ಪಾಗಿರೋದು. ಅದಕ್ಕೇ ನಮ್ಗೆ ಜಾಗವಿಲ್ಲದ ಪಾಡು."

"ಹೌದ್ಹೌದು. ಮೊದಲಾಗಿದ್ರೆ ಬಂದಬಂದ್ಹಂಗೆ ಪಾಪ-ಪುಣ್ಯಗಳನ್ನ ವಿಚಾರ್ಸಿ, ಶಿಕ್ಷೆ ಕೊಡ್ತಾ ಇದ್ವು. ಸ್ವಲ್ಪ ದಿನ ಶಿಕ್ಷೆ ಅನುಭವಿಸಿ, ಮತ್ತೆ ಭೂಲೋಕಕ್ಕೆ ಮುಂದಿನ ಜನ್ಮಕ್ಕೆ ವಾಪಸ್ಸಾಗ್ತಾ ಇದ್ರು. ಈಗ ವಿಚಾರಣೆಗೆ ಟೈಂ ಇಲ್ಲ. ಶಿಕ್ಷೆ ಕೊಡೋಕ್ಕೆ ಜಾಗವಿಲ್ಲ. ಭೂಲೋಕದಲ್ಲಿ ಮದುವೆಗಳೇ ಆಗ್ತಾ ಇಲ್ಲ. ಇನ್ನು ಮಕ್ಕಳು, ಮರುಜನ್ಮ ಎಲ್ಲಾ ಯಾವ ಕಾಲಕ್ಕೋ? ಇದೇಕೆ ಹೀಗಾಯ್ತು?" ಎಂದು ತಲೆ ಚಚ್ಚಿಕೊಂಡ ಯಮ.

"ಸ್ವಾಮಿ ನೀವು ಬೈಯ್ಯಲ್ಲಾ ಅಂದ್ರೆ ಒಂದ್ಮಾತು ಹೇಳ್ತೀನಿ"

"ಅಬ್ಬಾ ಅದೇನು ಹೇಳ್ತೀಯೋ ಬೇಗ ಹೇಳು ಮಾರಾಯ. ಆಗ್ಲಿಂದ್ಲೂ ಪೀಠಿಕೇಲೇ ಇದೀಯಲ್ಲಾ? ಮುಂದಕ್ಹೋಗು."

“ಅದೇ ಸ್ವಾಮಿ. ಆ ಹೊಸ ಮಿಷಿನ್ ಅಂದ್ರೆ ಆ ಕಂಪ್ಯೂಟರ್ ತಂದಾಗ್ಲಿಂದ ಇಂಥ ಎಡವಟ್ಟು, ಗಡಿಬಿಡಿ ಆಗ್ತಾ ಇದೆ.”

“ಹಂಗಂತೀಯಾ? ಆದ್ರೆ ನೀನೇ ಕಂಪ್ಯೂಟರ್‌ನಲ್ಲಿ ಕೆಲ್ಸ ಮಾಡಿದ್ರೆ ತಪ್ಪಾಗಲ್ಲ; ಕೆಲ್ಸಾನೂ ಬೇಗ ಅಂತ ಅಂತ ಹೇಳಿ, ಪೀಡ್ಸಿ, ಪೀಡ್ಸಿ, ಒತ್ತಾಯ ಮಾಡಿ, ಕಂಪ್ಯೂಟರ್ ತರ್ಸಿದ್ಯಲ್ಲಾ? ಭೂಲೋಕದಲ್ಲಿ ಎಲ್ಲಾ ಕಛೇರಿಗಳಲ್ಲೂ ಕಂಪ್ಯೂಟರ್‌ನಿಂದ ಕೆಲ್ಸ ಮಾಡ್ತಾ ಇಲ್ವಾ?”

“ಅದು ನಿಜಾನೇ ಸ್ವಾಮಿ. ಈಗ ಭೂಲೋಕದಲ್ಲಿ ಎಲ್ಲಾ ದೇಶಗಳಲ್ಲೂ ಕಂಪ್ಯೂಟರ್‌ದೇ ರಾಜ್ಯ. ಅದ್ರಲ್ಲಿ ಏನೂ ತಪ್ಪಿಲ್ಲ.”

“ಮತ್ತೇನು ಪ್ರಾಬ್ಲಮ್ಮು?”

“ಕಂಪ್ಯೂಟರ್ ಬಳಸಕ್ಕೆ ಸಾಫ್ಟ್ವೇರ್ ಅಂತೆ, ಅದೇನೋ ಪ್ರೋಗ್ರಾಮ್ ಅಂತ ಬರೀತಾರಲ್ಲ ಅಲ್ಲಿ ತಪ್ಪಾಗಿದೆ.”

“ಎಲಾ ಚಿತ್ರಗುಪ್ತ. ನಿಂಗೆ ಅದನ್ನು ಉಪಯೋಗಿಸಕ್ಕೆ ಬರ್ತಿಲ್ಲ ಅಂತ ಹೇಳು. ಒಪ್ಕೋತೀನಿ. ಅದ್ಬಿಟ್ಟು ಅದರೊಳಗೆ ಏನೋ ಸರಿ ಇಲ್ಲ ಅಂತ ಒದರ್ತಾ ಇದ್ಯಲ್ಲಾ? ಅದೂ ಸಾಫ್ಟ್ವೇರ್ ಅಂತ ಎಷ್ಟೋ ತಿಳಿದವನ್ಹಂಗೆ ಹೇಳ್ತಾ ಇದ್ಯಲ್ಲಾ?”

“ಹೌದು. ನಂಗೆ ಚೆನ್ನಾಗಿ ಗೊತ್ತು. ತಪ್ಪಿರೋದು ಅಲ್ಲೇ. ಬೆಳಗಾನ ಇವತ್ತು ಎಷ್ಟು ಜನಕ್ಕೆ ಕುಣಿಕೆ ಹಾಕ್ಬೇಕು ಅಂತ ಒತ್ತಿದ್ರೆ ಸಾಕು. ಪ್ರಿಂಟರ್ ಪಟಪಟ ಅಂತ ಹೊಡ್ಕೊಂಡು, ಝೊಂಯ್, ಝೊಂಯ್ ಅಂತ ರೀಲ್ ಗಟ್ಲೆ ಪೇಪರ್ ಪ್ರಿಂಟರ್‌ನಿಂದ ಹೊರಕ್ಕೆ ಬೀಳುತ್ತೆ. ನನ್ನ ಪುಸ್ತಕ ಎಂದೂ ಅಷ್ಟೊಂದು ಹೆಸರುಗಳನ್ನ ತೋರ್ಸಿರ್ಲಿಲ್ಲ. ಅಷ್ಟೊಂದು ಪುಟಗಳಲ್ಲಿ ಎಷ್ಟು ಹೆಸರುಗಳಿವೆ ಅಂತ ಓದೋಕ್ಕೆ ದಿನಪೂರ್ತಿ ಸಾಲ್ದು. ನಾನು ಅಂದಾಜಿನ ಮೇಲೆ ಒಂದಷ್ಟು ಜನಕ್ಕೆ ಕುಣಿಕೆ ಹಾಕಿ ಎಳ್ಕೊಂಡು ಬರ್ತೀನಿ.”

“ಅರೆ ಪುಣ್ಯಾತ್ಮಾ, ಹಾಗೆಲ್ಲಾ ಅಂದಾಜು, ಗಿಂದಾಜು ನಮ್ಮ ಕೆಲ್ಸದಲ್ಲಿ ಮಾಡಬಾರ್ದು ಅಂತ ಅವತ್ತೇ ಹೇಳಿದ್ನಲ್ಲೋ. ಮತ್ತ್ಹಾಗೇ ಮಾಡ್ತಿದೀಯಾ?”

“ನಾನೇನು ಮಾಡ್ಲಿ ಸ್ವಾಮಿ ನಮಗೆ ಒಂದು ದಿನಾನೂ ರಜ ಇಲ್ಲ. ಅದೇನೋ ಹೇಳ್ತಾರಲ್ಲ 24 x 7 ಅಂತ ಅದನ್ನ ನಮ್ಗೇ ಹೇಳಿ ಮಾಡ್ಸಿದ್ಹಂಗಿದೆ. ನಿಮ್ದೊಳ್ಳೆ ಕಥೆ.”

“ಕಥೆ ಅಂದ್ರೆ ಜ್ಞಾಪಕಕ್ಕೆ ಬಂತು. ಭಾರತದಲ್ಲಿ ಯಾವ್ದೋ ಊರಿನ ಒಂದು ಆಸ್ಪತ್ರೇಲಿ ಕಂಪ್ಯೂಟರ್‌ನಲ್ಲಿ ಕೆಲಸ ಮಾಡೋಕ್ಕೆ ಯಾರೂ ಇರ್ಲಿಲ್ಲವಂತೆ. ಅದಕ್ಕೆ ಸತ್ತು ಹೋದವ್ರ ಹೆಸರುಗಳು ಕಂಪ್ಯೂಟರ್‌ನಲ್ಲಿ ನಮೂದಾಗ್ದೆ ಆಸ್ಪತ್ರೇಲಿ ಬೆಡ್‌ಗಳೇ ಇಲ್ಲ ಅಂತ ಬೋರ್ಡ್ ಹಾಕಿದ್ರಂತೆ”

“ಇದನ್ನೆಲ್ಲಾ ನೀವು ನಂಬ್ತೀರಾ ಸ್ವಾಮಿ. ಸತ್ತು ಹೆಣವಾದವ್ರನ್ನ ಬೆಡ್ ಮೇಲೇ ಮಲಗ್ಸಿರ್ತಾರಾ? ಹೆಣ ಎತ್ಹಾಕಿದ್ಮೇಲೆ ಖಾಲಿಯಾಗಿರೋ ಬೆಡ್ ಕಾಣಲ್ವಾ?”

“ಹೌದಲ್ವಾ? ಕೊನೇ ಪಕ್ಷ ಒಂದಷ್ಟು ದಿನಗಳು ಒಂದು ಪುಸ್ತಕದಲ್ಲಿ ಹೆಸರುಗಳ್ನ ಬರೆಯಕ್ಕೆ ಏನು ಕಷ್ಟ? ಒಬ್ರ ಮೇಲೆ ಮತ್ತೊಬ್ರು ತಪ್ಪು ಹಾಕೋದ್ರಲ್ಲಿ ನಿಸ್ಸೀಮರು. ಅಷ್ಟೆ”

"ಹೌದ್ದೌದು. ನಾನು ಕೈಯ್ಯಲ್ಲಿ ಮಸಿಕುಡಿಕೆ ಪುಸ್ತಕಗಳನ್ನ ಹಿಡ್ಕೊಂಡೇ ಹುಟ್ಟಿದೋನಲ್ವಾ? ಎಷ್ಟೋ ಯುಗಗಳು, ಶತಮಾನಗಳು ಮಣಗಟ್ಲೆ ಭಾರದ ಪುಸ್ತಕಗಳನ್ನ ಹೊತ್ತು, ಹೊತ್ತು. ಕೆಲ್ಸ ಮಾಡಿಲ್ವಾ? ಅದಕ್ಕೆ ಮತ್ತೆ ನನ್ನ ಬೆನ್ನು ಬಾಗ್ಹೋಗಿದೆ. ಅದಕ್ಕೆ ಕಂಪ್ಯೂಟರ್ ಬೇಕು ಅಂತ ಹಟ ಹಿಡ್ದೆ. ಈಗ ಅದೇ ನಂಗೆ ಮುಳವಾಗಿದೆ. ನನ್ನ ಪ್ರಾಣಕ್ಕೇ ಬಂದಿದೆ."

"ಈಗಂತೂ ನೀನು ಸಖತ್ ಬಾಂಬ್ ಹಾಕ್ತಾ ಇದ್ಯಲ್ಲ. ಒಂದು ವೇಳೆ ಬಾಂಬ್ ಹಾಕಿದ್ರೂ ಇಷ್ಟೊಂದು ಜನ ಒಟ್ಗೆ ಸಾಯ್ತಿದ್ರೋ, ಇಲ್ವೋ? ಅದ್ಸರಿ ಈಗ ಹೇಳು. ಖಡಾಖಂಡಿತ್ವಾಗಿ ಕಂಪ್ಯೂಟರ್‌ನಲ್ಲೇ ತಪ್ಪಿದ್ಯಾ?"

"ನೋಡಿ ಸ್ವಾಮಿ, ನನಗಂತೂ ಹಾಗೇ ಅನ್ನಿಸ್ತಾ ಇದೆ. ಇಲ್ದಿದ್ರೆ ಶತಮಾನಗಳಲ್ಲಿ ಆಗ್ದೇ ಇದ್ದ ಸಾವು ಈ ವರ್ಷ ಆಗ್ಬೇಕಾ? ಅದೂ ಮನುಷ್ಯರು ವಿಜ್ಞಾನ ಮುಂದುವರ್ದಿದೆ. ಎಲ್ಲ ಕಾಯಿಲೆ ವಾಸಿ ಮಾಡ್ತೀವಿ ಅಂತ ಜಂಭ ಕೊಚ್ಕೋಳೋ ಕಾಲ್ದಲ್ಲಿ. ನಾನು ಅವತ್ತೇ ಹೇಳ್ದೆ. ಅಗ್ಗ ಅಂತ ಚೀನಾ ದೇಶದ ಕಂಪ್ಯೂಟರ್ ಖರೀದಿ ಮಾಡ್ಬೇಡಿ. 'ಅಗ್ಗದ ಆಸೆಗೆ, ಮುಗ್ಗಿದ ಜೋಳ' ಅನ್ನೋ ಗಾದೇನ ಕೇಳಿಲ್ವಾ? ಆಗ ನೀವೇ ನಮ್ಮ ಕೆಲ್ಸಕ್ಕೆ ಸಾಕು ಅಂತ ಹೇಳಿ ಚೀನಾದಿಂದ್ಲೇ ತರ್ಸಿದ್ರಿ. ಈಗ ಸಾಕು ಸಾಕಾಗ್ತಿದೆ. ಹೌದೋ, ಅಲ್ವೋ?"

"ಸರಿಯಪ್ಪಾ ಸರಿ. ನೀನು ನನ್ನ ಸಹಾಯಕನೋ ಅಥ್ವಾ ಸತಾಯಿಸೋವ್ನೋ? ಮಾಡೋದೆಲ್ಲಾ ಮಾಡಿ ತಪ್ಪನ್ನ ಸುಖವಾಗಿ ನನ್ನ ಮೇಲೆ ಹೇರ್ತಾ ಇದ್ಯಲ್ಲಾ? ಈ ಸಾವುಗಳ ಗೋಳು ಟಿವಿ ಧಾರಾವಾಹಿ ಗೋಳಿಗಿಂತ ಉದ್ದುದ್ದವಾಗಿ ಬೆಳೀತಾ ಇದೆ. ಕೊನೆಯೇ ಕಾಣ್ತಾ ಇಲ್ಲ. ಎರಡನೆ ಅಲೆಯಂತೆ, ಹೊಸ ತರಹದ ವೈರಾಣುವಂತೆ... ಮತ್ತೇನೇನೋ?"

"ಹೌದು ಸ್ವಾಮಿ. ಕಂಪ್ಯೂಟರ್‌ನಲ್ಲಿ ತಪ್ಪಾಗಿರೋದೇ ಇವಕ್ಕೆಲ್ಲಾ ಕಾರಣ. ಮೊದ್ಲು ಅದನ್ನ ರಿಪೇರಿ ಮಾಡ್ಸಬೇಕು. ಇನ್ನೊಂದು ಹತ್ತು ಹನ್ನೆರಡು ವರ್ಷ ಯಾರೂ ಸಾಯಬಾರ್ದು. ಹಾಗೆ ಪ್ರೋಗ್ರಾಮ್ ತಿದ್ದಿಸಿ."

"ಅಬ್ಬಬ್ಬಾ, ಎಂಥಾ ಯೋಚ್ನೆನಪ್ಪಾ ನಿಂದು. ಅದಿರ್ಲಿ ಹಾಗಂತ ನಿಂಗೆ ತಿದ್ದೋಕೂ ಬರಲ್ವಾ?"

"ಅಯ್ಯೋ ಸ್ವಾಮಿ. ಹದಿನೈದು ದಿನಗಳು, ಅದೂ ಬಿಡುವಿನ ಸಮಯದಲ್ಲಿ ನಂಗೆ ತರಬೇತಿ ಕೊಡ್ಸಿದ್ರಿ. ಆಗ್ಲೇ ಹೇಳಿದ್ದಾಗೆ 24 X 7 ನನ್ನ ಕೆಲ್ಸ ಇದ್ದೇ ಇರತ್ತೆ. ನಾನು ತಾನೆ ಎಷ್ಟು ಕಲಿಯೋಕ್ಕೆ ಸಾಧ್ಯ? ನಂಗೆ ಇನ್ನೆಷ್ಟು ಬರತ್ತೆ?"

"ಹಾಗಾದ್ರೆ ಈಗ ಅದನ್ನ ತಿದ್ದಕ್ಕೆ ಚೀನಾ ದೇಶದವ್ರೇ ಬರ್ಬೇಕಾ?"

"ಬುದ್ಧಿ, ಅಲ್ಲಲ್ಲ ಸ್ವಾಮಿಯೋರೇ ಅದು ಮಾತ್ರ ಖಂಡಿತ ಬೇಡ, ಚೀನಾ ಅಂದ್ಕೂಡ್ಲೆ ನಂಗೆ ಕೊರೋನ ನೆನಪಾಗತ್ತೆ. ಅವ್ರು ಇಲ್ಲಿಗೆ ಬರೋವಾಗ ಅದನ್ನೂ ತಂದುಬಿಟ್ರೆ ಯಾವ ದೇವ್ರಿಗೂ ಏನೂ ಮಾಡಕ್ಕಾಗಲ್ಲ. ನಂಗೆ ಈ ಕಂಪ್ಯೂಟರ್ ಸಹವಾಸ್ವೇ ಬೇಡ. ನನ್ನಿಂದ ತಪ್ಪಾಯ್ತು ಸ್ವಾಮಿ. ನಾನು ಐನೂರು ಅಲ್ಲದಿದ್ರೆ ಸಾವಿರ ಪುಟಗಳ, ಮೊಳದುದ್ದದ, ತೋಳ್ಗಾತ್ರದ ಪುಸ್ತಕದಲ್ಲೇ ಅವತ್ತವತ್ತು ಸಾಯೋರ ಹೆಸರುಗಳ್ನ ಹೇಗೋ ಬರ್ಕೋತೀನಿ. ನನ್ನ ಬೆನ್ನು ಸಂಪೂರ್ಣ ಗೂನಾದ್ರೂ ಸರಿ. ಅಷ್ಟಕ್ಕೆ ಅಪ್ಪಣೆ ಕೊಟ್ಟುಬಿಟ್ರೆ ಸಾಕು"

"ಚಿತ್ರಗುಪ್ತಾ ಅಂತೂ 'ಹಳೇ ಗಂಡನ ಪಾದವೇ ಗತಿ'   ಅಂದ್ಹಾಗೆ ಆಯ್ತು. ನೀನು ಹೇಳಿದ್ದಾಗೆ ನೀನು ಪೆನ್ನು, ಪುಸ್ತಕಗಳ ಜೊತೆಯೇ ಹುಟ್ಟಿದವನು. ನಿನ್ನಿಷ್ಟದಂತೆ ಸದ್ಯಕ್ಕೆ ಪುಸ್ತಕಕ್ಕೇ ಶರಣಾಗೋಣ. 'ಪುಸ್ತಕಂ ಹಸ್ತ ಭೂಷಣಂ.' ತಥಾಸ್ತು."

ಹೀಗೊಂದು ಸಂಭಾಷಣೆ

ನಾನೂ ಮತ್ತು ಚಿನ್ಮಯೀ

- ಲಕ್ಷ್ಮೀ ವಿಠಲ್

ನಿನ್ನೆ ನನ್ನ ಮೊಮ್ಮಗಳು 8 ವರ್ಷದ ಚಿನ್ಮಯೀ ವಿಡಿಯೋ ಕಾಲ್ ಮಾಡಿದಳು. ಅವರ ಮನೆಯಲ್ಲಿ ಫೋನ್ ಮಾಡಿದರೆ ಕಾಲ್ ಕನೆಕ್ಟ್ ಆಗುವುದೇ ಇಲ್ಲಾ. ಕನೆಕ್ಟಿವಿಟಿ ಸಮಸ್ಯೆ. ಅದರ ಪರಿಣಾಮ ವಿಡಿಯೋ ಕಾಲ್. ವೈ ಫೈ ಇರುವ ಕಾರಣ ಇದು ಸುಲಭ, ಮಾತನಾಡಲು ಖುಷಿಯೂ ಕೂಡ.

ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾ, ಚಿನ್ಮಯಿ ಮಾತನಾಡುವ ಪರಿ ಸೊಗಸೇ ಸೊಗಸು. ಅವಳಿಗೆ ಮೈಸೂರಿನ ಎಲ್ಲಾ ವಿದ್ಯಮಾನಗಳನ್ನೂ ವಿಷದವಾಗಿ ಹೇಳಬೇಕು. ಎಲ್ಲಿಯೂ ತಪ್ಪಬಾರದು. ಕೊಂಡಿ ತಪ್ಪಿತೆನ್ನುವಾಗ, ಅವಳೇ ಮಾತಿನ ಜಾಡು ಹಿಡಿದು ನಾವು ಟ್ರ್ಯಾಕ್ ಗೆ ಬರುವಂತೆ ಮಾಡುತ್ತಾಳೆ. ಮೈಸೂರಿನಲ್ಲಿ ಬಹಳವೇ ಬಂಧುಗಳಿದ್ದರೂ ಚಿನ್ಮಯಿಯ ಆತ್ಮೀಯರು ನನ್ನ ತಮ್ಮ ಮತ್ತು ತಾಯಿ, ಜೊತೆಗೆ ತಂಗಿ ರಶ್ಮಿ. ಮಾತು ಶುರುವಾಗುವ ರೀತಿ ನೋಡಿ,

"ಏನಜ್ಜಿ, ಏನ್ ಸಮಾಚಾರ"

"ಏನೂ ಇಲ್ಲಾ ಕಂದ ಎಲ್ಲಾ ಮಾಮೂಲು ಕಣೆ", ಇದು ನನ್ನ ಉತ್ತರ.

"ಯಾಕೆ ಅಜ್ಜಿ ಏನೂ ಇಲ್ಲಾ. ಯಾಕೆ ಅಡಿಗೆ ಮಾಡ್ಲಿಲ್ವಾ, ತಿಂಡಿ ತಿನ್ಲಿಲ್ವಾ" ಅವಳ ಮರು ಪ್ರಶ್ನೆ.

"ಅಲ್ಲಾ ಪುಟ್ಟ, ತಿಂಡಿ ಊಟ ಒಂದು ಸಮಾಚಾರವೇನೇ" ಅಂದ್ರೆ ತಟ್ಟನೆ ಅವಳ ಮರುಮಾತು..

"ಅದೇ ಅಜ್ಜಿ ಅಡಿಗೆ ಮಾಡೋದು ದೊಡ್ಡ್ ಸಮಾಚಾರ ಅಲ್ವಾ, ಏನ್ ತಿಂಡಿ ಮಾಡಿದ್ರಿ, ಏನೇನು ಅಡಿಗೆ ಮಾಡಿದ್ರಿ, ತಾತ ಹೆಲ್ಪ್ ಮಾಡಿದ್ರಾ ಇದೆಲ್ಲಾ ಸಮಾಚಾರ ಅಲ್ವಾ ಅಜ್ಜಿ"

ನಂತರ ನೋಡಿ, ತಿಂಡಿ, ಅಡಿಗೆಯ ವಿವರ ಕೊಡ್ಬೇಕು. ಅಲ್ಲಿಗೆ ಒಂದು ಹಂತದ ಮಾತುಕತೆ. ಮತ್ತೆ ಅವಳ ಪ್ರಶ್ನೆ - "ಏನ್ ಗೊತ್ತಾ ಅಜ್ಜಿ, ನೀವು ಅಡಿಗೆ ತಿಂಡಿ ಎಲ್ಲಾ ವಿಚಾರ ಅಲ್ಲಾ ಅಂದ್ರೆ ತಾತನ ಜೊತೆ ಜಗಳ ಅಂತ ನನಗನ್ನುಸ್ತೆ"

ಈಗ ನಾನು ಎಚ್ಚರಿಕೆಯಿಂದ ಉತ್ತರ ಕೊಡಬೇಕು. ನಂತರದ ಮಾತು "ಅಜ್ಜಿ ನಿಮ್ಮನೇಗೆ ಯಾರಾದ್ರೂ ಬಂದಿದ್ರಾ". ಯಾರಾದ್ರು ಬಂದಿದ್ರೆ "ಹುಂ ಪುಟ್ಟ, ರಶ್ಮಿ ಅಜ್ಜಿ ಬಂದಿದ್ರು" ಅಂತೇನಾದ್ರೂ ನಾನು ಹೇಳಿದ್ರೆ ಶುರು, ರಶ್ಮಿ ಚಿಕ್ಕಜ್ಜಿ (ನನ್ ತಂಗಿ) ಏನಂದ್ರು, ನನ್ನನ್ನ ವಿಚಾರಿಸಿಕೊಂಡ್ರಾ, ಸರಿ ಪುಬ್ಬಾ (ತಂಗಿ ಮಗ, ಮೈಸೂರಿಗೆ ಬಂದಾಗ ಅವಳ ಬೆಸ್ಟ್ ಫ್ರೆಂಡ್) ಏನಂತಾನೆ, ಬಾಲು ತಾತಾ ಬಂದಿದ್ರಾ, ಸುನಿಧಿ ಚಿಕ್ಕಿ....". ಓಹ್ ಅವಳ ಮಾತಿಗೆ ನಿಲುಗಡೆ ಇಲ್ಲ.

ನಾನೇನಾದ್ರೂ ಯಾರೂ ಬರಲಿಲ್ಲಾ ಅಂದ್ರೆ "ನೀವೇಲ್ಲೂ ಹೋಗಿಲ್ವಾ, ಕಣ್ಣ ತಾತನ (ನನ್ನ ತಮ್ಮ) ಮನೆಗೂ ಹೋಗಿಲ್ವಾ", ಹೋಗ್ಬೇಕಿತ್ತಲ್ಲಾ ಮುತ್ತಜ್ಜಿ ಅದೇ ಕಮ್ಮು ಡಾರ್ಲಿಂಗ್ (ನನ್ನ ತಾಯಿ ಕಾಮಾಕ್ಷಮ್ಮ). ಗೀತ ಅಜ್ಜಿ ಎಲ್ರನ್ನೂ ನೋಡ್ಕೊಂಡು ಬರಬಹುದಿತ್ತಾ". ಇಷ್ಟೇ ಸಾಲದು ಅಂತ "ಅಜ್ಜಿ ಅಜ್ಜಿ, ಪಿಂಗ ಹೇಗಿದ್ದಾನೆ, ಅದು ತಮ್ಮನ ಮನೆಯ ಬೆಕ್ಕು...." - ಹೀಗೇ ಅವಳ ಭಿತ್ತಿಗೆ ಬಂದ ಆತ್ಮೀಯರನ್ನು ನೆನೆದು ಮಾತನಾಡುವ ಪರಿ.

ಕಳೆದ ವರ್ಷ, ಲಾಕ್ಡೌನ್ ಮೊದಲಿನ ದಿವಸಗಳು, ಅವಳಿಗೆ ಮೈಸೂರಿನ ದೇವರಾಜ ಅರಸ್ ರಸ್ತೆ, ಕೆಲವು ಹೆಸರಾಂತ ಅಂಗಡಿಗಳು, ಮಾರ್ಕೆಟ್ ಏರಿಯಾ ಎಲ್ಲಾ ಸುಪರಿಚಿತ. ಅವಳಿಲ್ಲಿ ಬಂದಾಗ ಇಲ್ಲೆಲ್ಲಾ ತಿರುಗಾಡಿಸಿಕೊಂಡು ಬರುತ್ತಿದ್ದೆವು.

ಹಾಗೇ ತಿರುಗಾಡುವಾಗ, ಮೇನ್ ರಸ್ತೆಯ ಪಕ್ಕದ ಗಲ್ಲಿಯ ತಿರುವಿಗೇ ಒಂದು ಬಜ್ಜಿ, ಬೋಂಡಾ, ಪಕೋಡ ಮಾಡುವ ತಳ್ಳು ಗಾಡಿ. ವಿಠಲರಿಗಾಗಲಿ, ನನಗಾಗಲೀ ರಸ್ತೆ ಬದಿಯ ತಿಂಡಿ ತಿನ್ನಬಾರದು ಎನ್ನುವ ಕಟ್ಟಳೆ ಇಲ್ಲಾ. ರುಚಿಕಟ್ಟಾದ ತಿಂಡಿ ತಿನ್ನಲು ನಾವಿಬ್ಬರೂ ಒಮ್ಮನಸ್ಕರು.

ಅವಳೊಡನೆ ಒಮ್ಮೆ ಹೊರಹೋದಾಗ, ಅದೇ ಜಾಗದಲ್ಲಿ ವಿಠಲ್ ರ ಕಾಲುಗಳು ತಡೆದು, ತಳ್ಳುಗಾಡಿಯ ಕಡೆಗೆ ಹೊರಟರು. ಸುಳಿವು ತಿಳಿದ ಚಿನ್ಮಯೀ, "ಏನ್ ತಾತ, ರಸ್ತೆ ಪಕ್ಕ ಸಿಗೋ ತಿಂಡಿ ತಿನ್ ಬಾರದೂ ಅಂತ ಗೊತ್ತಿಲ್ವಾ ನಿಮಗೆ, ಬನ್ನಿ, ಬನ್ನಿ" ಅಂತ ಎಳೆದುಕೊಂಡೇ ಬಂದಳು.

ಪಕ್ಕದಲ್ಲಿ ನಿಂತಿದ್ದ ಓರ್ವ ಮಹಾಶಯರು "ಹೌದೌದು, ಮಗು ಹೇಳ್ತಿರೋದು ಸರಿ, ರಸ್ತೆ ಬದಿ ತಿಂಡಿ ತಿನ್ ಬಾರದು" ಅಂತ ಹೇಳಿದ್ದು ಕೇಳಿ ಇವಳಿಗೆ ಸಂತಸ.

ಸ್ವಲ್ಪ ಮುಂದೆ ಬಂದೆವು, ಹಾಗೇ ಹಿಂತಿರುಗಿ ನೋಡಿದರೆ ಆ ಮಹಾಶಯರು ಬಜ್ಜಿಯನ್ನು ಸಂತೋಷವಾಗಿ ಸವಿಯುತ್ತಿದ್ದರು. ಚಿಮ್ಮಿಗೆ ತೋರಿಸಿದೆ, ನೋಡಿದವಳು ಬೇಸರಿಸಿ, "ಏನ್ ದೊಡ್ಡವರಪ್ಪ, ಹೇಳೋದೊಂದು, ಮಾಡೋದೊಂದು" ಎಂದಳು. ನನಗೂ, ವಿಠಲರಿಗೂ ನಗು ಉಕ್ಕಿ ಹರಿಯಿತು.

ಮುಂದಿನ ಪ್ರಶ್ನೆ "ಭೀಮಜೀ ಗೆ ಹೋಗಿದ್ರಾ ಅಜ್ಜಿ,"

"ಯಾಕಮ್ಮಾ ಈಗ" ಅಂದ್ರೆ, "ಅದೇ ಅಜ್ಜಿ ಅಲ್ಲಿ ಚೆನ್ನಾಗಿ ಫ್ರಾಕ್ಸ್, ಗೌನ್ ಎಲ್ಲಾ ಸಿಗುತ್ತಲ್ಲ, ನನಗೆ ತರಬಹುದಲ್ವಾ "

ನನಗೆ ಅವಳ ಉಪಾಯ ತಿಳಿದ ಕೂಡಲೇ ಹೇಳುತ್ತಿದ್ದೆ "ಪುಟ್ಟ, ಅಮ್ಮನಿಗೆ ಹೇಳು, ನನ್ನ ಅಕೌಂಟಿಗೆ ದುಡ್ಡು ಹಾಕಿದ್ರೆ ಫ್ರಾಕ್ ಗ್ಯಾರಂಟಿ".

ಸಪ್ಪೆ ದನಿಯಲ್ಲಿ "ಅಜ್ಜಿ ನಿಮಗೆ ಗೊತ್ತಿಲ್ವಾ ನಮ್ಮನೇಲಿ ಚಿಕ್ಕ ಮಕ್ಕಳು ದುಡ್ಡಿನ ವಿಷ್ಯ ಮಾತಾಡಬಾರದು."

ಇಂತಹ ಮಾತಿನ ಮಲ್ಲಿ ನಿನ್ನೆ ಮಾತಾಡುವಾಗ, ಹೇಳಿದಳು "ಅಜ್ಜಿ ಅಮ್ಮಂಗೆ ನನ್ ಮೇಲೆ ಕೋಪ. ಮಾತಾಡಿಸ್ತಾ ಇಲ್ಲಾ "
ಬೇಸರವಾಯ್ತು, "ಯಾಕಮ್ಮ ಏನಾಯ್ತು?" ಎಂದೆ. "ಒಹ್ ಬಿಡಿ ಅಜ್ಜಿ, ಈಗ ಸರಿಹೋಯ್ತು, ಏನಿಲ್ಲ " ಅಂದ್ಲು.

ನನಗೆ ತಡೆಯದೇ "ಇಲ್ಲಾ ಏನೋ ಕಾರಣವಿದೆ ಹೇಳು" ಎಂದು ಬಲವಂತಪಡಿಸಿದೆ. "ನೀವು ಬೈಯಲ್ಲಾ ತಾನೇ" ಎಂದು ಮುಖ ನೋಡಿದಳು. "ನಮ್ ಪುಟ್ಟನ್ನ ನಾನ್ಯಾಕೆ ಬೈತೀನಿ, ತಪ್ಪು ಮಾಡಿದ್ರೆ, ತಪ್ಪು ಮಾಡಿದ್ದೀಯಾ, ಸರಿಯಲ್ಲ, ಸಾರೀ ಕೇಳು ಇನ್ಮುಂದೆ ಹಾಗೇ ಮಾಡ್ಬೇಡ ಅಂತೀನಿ ಅಷ್ಟೇ", ಅಂದೆ.

ಧೈರ್ಯ ಬಂತು, "ನೋಡಿ ಅಜ್ಜಿ, ಅಮ್ಮಾ ಅಪ್ಪಾ ಇಬ್ರೂ ಜಗಳ ಮಾಡ್ತಿದ್ರಾ, ಕೇಳುಸ್ಕೊಳ್ಳೊಕ್ಕೆ ಕಷ್ಟ ಆಯ್ತು "

“ಸರಿ, ಎಲ್ಲರ ಮನೇಲೂ ಜಗಳ ಇರತ್ತೆ, ನಮ್ಮನೇಲೂ ಇರತ್ತೆ, ನೀ ನೋಡಿಲ್ವಾ " ಅಂದೆ.

“ನೋಡಿ ಅಜ್ಜಿ, ನಿಮ್ಮನೇಲಿ ತಾತಾ ಮಾತ್ರ ಜೋರಾಗಿ ಜಗಳ ಮಾಡ್ತಾರೆ, ಆದ್ರೆ ನೀವು ಎಷ್ಟೊಂದು calm ಆಗಿ ಇರ್ತೀರಾ. ಆದ್ರೆ ನಮ್ಮನೇಲಿ ನೋಡಿ, ಇಬ್ರೂ ಕಿರಿಚಾಡ್ತಾರೆ” ಅಂದ್ಲು..

ಒಹ್! ಇದು ತುಂಬಾ ಸೀರಿಯಸ್ ವಿಷ್ಯ ಅಂದ್ಕೊಂಡು "ಅದ್ಸರಿ, ನಿನ್ ಮೇಲೆ ಅಮ್ಮಾ, ಅಪ್ಪಾ, ಯಾಕ್ ಕೋಪ ಮಾಡ್ಕೊಂಡ್ರು" ಅಂದೆ.

"ಅದೇ ನೋಡಿ, ಅವರಿಬ್ಬರ ಕಿರಿಚಾಟ ನೋಡಿ, ನಾನು ನಮ್ಮಪ್ಪಂಗೆ ಸ್ಟಾಪ್ ಇಟ್' ಅಂದೆ. ಅದಕ್ಕೆ ಅಪ್ಪಾ, ಅಮ್ಮಾ ಇಬ್ರು ನನ್ಮೇಲೆ ಕೋಪ ಮಾಡ್ಕೊಂಡು ಮಾತಾಡ್ತಿಲ್ಲ" ಅಂದ್ಲು

ನನಗೆ ಒಂದು ಘಳಿಗೆ ಶಾಕ್ ಆಯ್ತು ಚಿಕ್ಕ ಮಗು ನುಡಿದ ರೀತಿಗೆ, ಅವಳ ತಪ್ಪನ್ನು ತಿದ್ದಬೇಕೇನಿಸಿತು. ಹೇಳಿದೆ- "ಕಂದ, ಅಪ್ಪಾ ಅಮ್ಮಾ ದೊಡ್ಡವರು. ಅವರಿಗೆ ನೀನು ಹೇಳಿದುದು ಸರಿಯೇ? ತಪ್ಪಾಯ್ತು! ಸಾರೀ ಕೇಳಿಬಿಡು, ಸರಿಯಾಗುತ್ತೆ "

"ಅಜ್ಜಿ ನಾನು ಸಾರಿ ಕೇಳಿದ್ದೂ ಆಯ್ತು, ನನ್ನನ್ನು ಅವರು forgive ಮಾಡಿದ್ದೂ ಆಯ್ತು." ಅಂದಳು.

ಪರಿಸ್ಥಿತಿಯನ್ನು ಬ್ಯಾಲೆನ್ಸ್ ಮಾಡುವ ಗುಣ ಕಲಿತಿದ್ದಾಳೆ ಎನಿಸಿ, ಚಿನ್ಮಯಿ ಬಗ್ಗೆ ಮೆಚ್ಚುಗೆ ಉಂಟಾಯ್ತು.

ಇಲ್ಲಿ ನಾನೊಂದು ವಿಷಯ ನಿಮ್ಹತ್ರ ಹೇಳ್ಬೇಕು. ಬೆಳಿಗ್ಗೆ ನಮ್ಮ ಚಟುವಟಿಕೆಗಳು ಪ್ರಾರಂಭ ಆಗೋದು, ಬಾಗಿಲಿಗೆ ರಂಗೋಲಿ ಹಾಕಿ, ಹೂವು ಬಿಡಿಸುವುದರ ಮೂಲಕ. ನಂತರ ಅಡಿಗೆ ತಿಂಡಿಗೆ ತರಕಾರಿ ಹೆಚ್ಚಿಕೊಡುವ ಕೆಲಸ ವಿಠಲ್ ಅವರದ್ದು. ಅದರಲ್ಲಿ ಅವರ 40 ವರ್ಷಗಳ ಸಹಕಾರವಿದೆ. ಈಗ ವಿಶೇಷಣವೊಂದು ಸೇರಿಕೊಳ್ಳುತ್ತೆ.

ಏನೆಂದರೆ “ನಾನು ತರಕಾರಿ ಹೆಚ್ಚಿದ್ರಿಂದ ತಿಂಡಿ, ಅಡಿಗೆ ಚೆನ್ನಾಗಾಯ್ತು” ಎನ್ನುವುದು. ಇದು ದಿನನಿತ್ಯದ ಪ್ರಲಾಪ. ನನಗೆ ನಗು ಬಂದರೂ ಹೌದಪ್ಪ, ಒಲೆ ಮುಂದೆ ನಿಂತು ಕಾಯಿಸಿ ಬೇಯಿಸುವುದು ಲೆಕ್ಕಕ್ಕಿಲ್ಲ, ತರಕಾರಿ ಹೆಚ್ಚುವುದೇ ಅಡಿಗೆ ರುಚಿಯಾಗಲು ಕಾರಣ ಎಂದು ಒಪ್ಪಿಕೊಂಡುಬಿಟ್ಟಿದ್ದೇನೆ. ಇದರಿಂದ ವಿಠಲರಿಗೆ ಸಿಗುವ ಸಂತೋಷಕ್ಕೆ ಪಾರವೇ ಇಲ್ಲ…

ಬಂದಳಲ್ಲ ಚಿನ್ಮಯೀ ರಜೆಯಲ್ಲಿ. ಗಮನಿಸಿದಳು.. ತಾತ ಹೇಳುವ ‘ನನ್ನ ಕೈ, ನನ್ನ ಕೈ, ಹೀಗೇ ತರಕಾರಿ, ಈರುಳ್ಳಿ ಎಲ್ಲಾ ಹೆಚ್ಚಿದ್ರಿಂದಾನೆ ಅಡಿಗೆ ಸಕತ್ ರುಚಿಯಾಗಿದೆ’ ಎನ್ನುವುದನ್ನು ಕೇಳಿ ಹತ್ತಿರ ಬಂದು ನಿಂತು ಮೆಲ್ಲನೆ ನುಡಿದಳು.

"ತಾತ ಜಸ್ಟ್ ಯು ಆರ್ ಹೆಲ್ಪಿಂಗ್ ಅಜ್ಜಿ, ಬೈ ಕಟಿಂಗ್ ವೇಜಿಟೇಬಲ್ ಅಷ್ಟೇ! ಆದ್ರೆ ಅಜ್ಜಿ ಅದನ್ನೆಲ್ಲಾ ಹಾಕಿ, ಜೊತೆಗೆ ಬೇರೆಲ್ಲಾ ingredients ಹಾಕಿ ಸರಿಯಾಗಿ ಕುಕ್ ಮಾಡೋದ್ರಿಂದಾನೆ ಅಡಿಗೆ ರುಚಿಯಾಗಿದೆ. ಸುಮ್ನೆ ತರಕಾರಿ ಕಟ್ ಮಾಡಿ ಕೊಟ್ರೆ ಅಡಿಗೆ ಚೆನ್ನಾಗಿ ಆಗಲ್ಲಾ. ಇಟ್ ಈಸ್ ಓನ್ಲಿ ಎ ಹೆಲ್ಪ್" ಅಂದ್ಲು. ತಾತ ಮಂಕಾಗಿ ಮೊಮ್ಮಗಳನ್ನ ನೋಡ್ತಾ ನಿಂತ್ರು.

ಇಂತಹ ಚಿನ್ಮಯೀ ಎಲ್ಲರ ಮನೆಯಲ್ಲೂ ಇದ್ದಾಳೆ, ಅವಳನ್ನು ಅವಳಂತೆಯೇ ಕಾಣುವ ರೀತಿ ನಾವು ಬೆಳೆಸ್ಕೊಬೇಕು ಅಷ್ಟೇ.

ಭಾವಗೀತೆ

ಭಾವೋದ್ವೇಗ

ಮೋಡ ಮುಸುಕಲು ನವಿಲು ನಲಿಯಿತು
ಕೂಡಿ ಬಾಳಲು ಸಂಗಾತಿ ಒಲಿಯಿತು/
ತಂನಂ ತಂನಂ ಮಧುರ ನಾದಕೆ
ರೆಕ್ಕೆ ತೆರೆದು ಮಯೂರಿ ಕುಣಿಯಿತು//.

ಮಳೆಯ ಹನಿಗಳು ಭುವಿಯ ಸ್ಪರ್ಶಿಸಿ
ಸೆಳೆವ ಪ್ರೇಮ ಸಂಚಲನ ಮೂಡಿಸಿ/
ಮಂದಸ್ಮಿತ ಮಂದಾರ ಹೂವ ಚೆಲುವು
ಮನ ಆವರಿಸಿತು ಸಾನು ರಾಗದಿ//.

ವರ್ಷ ಧಾರೆಯ ಮತ್ತ ಸಿಂಚನದಿ
ಕಾಮನ ಬಿಲ್ಲಿನ ರಂಗು ರಂಗಿನಲಿ/
ಹಸಿರುನೋಕುಳಿ ಚೆಲ್ಲಿ ಪ್ರಕೃತಿಯಲಿ
ಹಸಿರು ಸಿರಿಯ ತಳಿರು ತೋರಣದಲಿ//.

ನೇಸರನ ಹೊಂಗಿರಣದ ಸೊಬಗಲಿ
ಕೋಗಿಲೆಯ ಇಂಪಾದ ಸ್ವರದಲಿ/
ಮನದ ಸುಮಧುರ ಸಂವಹನದಲಿ
ನಿಸರ್ಗದ ಜೀವರಾಶಿಗಳು ಕುಣಿದು ಭಾವೋದ್ವೇಗದಲಿ//.

- **ಎನ್. ಶಂಕರ ರಾವ್**

(ಇದು ನಾನು ಇತ್ತೀಚೆಗೆ ಬಿಡುಗಡೆ ಮಾಡಿದ
'ನನ್ನ ರಚನೆಗೆ ನಿನ್ನ ಧ್ವನಿ' ವಿಡಿಯೋದಿಂದ ಒಂದು ಗೀತೆ)

ಭಕ್ತಿ ಗೀತೆ

ನಿನ್ನಾ....... ಮುದ್ದು ಮಗನಾ

ತೋರೇ ಪಾರ್ವತಿಯೇ--- ತೋರೇ ಪಾರ್ವತಿಯೇ ॥ಪ॥

ಭಾದ್ರಪದ ಮಾಸದಿ ಬರುವವನ
ಚೌತಿಯ ದಿನದಲಿ ಪೂಜಿಪನ॥
ನಿನ್ನಯ ಜೊತೆಗೂಡಿ ಪೋಗುವನಾ
ವಿಶಿಷ್ಟ ರೂಪವ ಪಡೆದವನ॥ ತೋರೇ---
ತೋರೇ ಪಾರ್ವತಿಯೇ ॥೧॥

ಪ್ರಥಮ ಪೂಜೆಯ ಪಡೆವವನ
ಮಾತಾ ಪಿತರನು ಸುತ್ತಿದವನ॥
ಕಾರ್ತಿಕೇಯನ ಅನೂಜನ
ನಿನ್ನ ಪ್ರೀತಿ ಪಾತ್ರ ಸುತನ॥ ತೋರೇ---
ತೋರೇ ಪಾರ್ವತಿಯೇ ॥೨॥

ಆನೆಯ ಮೊಗವ ಹೊಂದಿದನ
ಮೂಷಿಕ ವಾಹನ ಪಡೆದವನ॥
ಆತ್ಮ ಲಿಂಗವ ಕಾಯ್ದವನ
ಗೋಕರ್ಣದಿ ನೆಲೆ ನಿಂದವನ॥ ತೋರೇ---
ತೋರೇ ಪಾರ್ವತಿಯೇ॥೩॥

ನಿನ್ನಾ---ಮುದ್ದು ಮಗನ
ತೋರೇ ಪಾರ್ವತಿಯೇ ತೋರೇ ಪಾರ್ವತಿಯೇ॥

= ಮಂಗಳಾ ನಾಡಿಗ್

ಜಲಜೀವನ

ಅದ್ವಿತೀಯ ನೈವೇಲಿಯ ನೀರಿನ ಕಥೆ

- ಡಾ. ಎಸ್. ಶಿವಪ್ರಸಾದ್

"ಮುಂದಿನ ದಿನಗಳಲ್ಲಿ ಸ್ವಚ್ಛ ನೀರಿನ ಲಭ್ಯತೆ ದುರ್ಲಭವಾಗಲಿದೆ, ಭವಿಷ್ಯದ ದಿನಗಳು ಕರಾಳವಾಗಿ ಗೋಚರಿಸುತ್ತದೆ…, ಇದಕ್ಕಾಗಿ ನಾವು ನೀರನ್ನು ಸಂರಕ್ಷಿಸುವ ಕಾರ್ಯತಂತ್ರವನ್ನು ಈಗಿನಿಂದಲೇ ಹೆಣೆಯಬೇಕು"– ಇದು ಇಂದಿನ ದಿನಪತ್ರಿಕೆಗಳಲ್ಲಿ ಕಾಣಬಹುದಾದ ಮತ್ತು ಸಾರ್ವಜನಿಕ ವೇದಿಕೆಗಳಲ್ಲಿ ಚರ್ಚಾವಸ್ತುವಾಗಿರುವ ವಿಷಯವಾಗಿದೆ. ಇದಕ್ಕಾಗಿ ಕೆಲವು ದೃಷ್ಟಾಂತಗಳನ್ನು ನೀಡಬಹುದು.

ಸಿಂಧೂ ಕಣಿವೆ ನಾಗರಿಕತೆಯಲ್ಲಿ, ಅಂಬರೀಷನ ಪುತ್ರನಾದ, ರಾಜ ಸಿಂಧುದ್ವೀಪ, ವೇದಮಂತ್ರಗಳ ಅನುಯಾಯಿಯಾಗಿದ್ದಾತ. ಈತ ಪ್ರತಿಪಾದಿಸುವಂತೆ ನೀರನ್ನು ಹೊಗಳುತ್ತಾ ಹೇಳುತ್ತಾನೆ- "ನೀರು, ಶಕ್ತಿಯುತ ಮತ್ತು ಗುಣಪಡಿಸುವ ಸಾಮರ್ಥ್ಯ ಹೊಂದಿರುವುದಾಗಿದೆ".

"ಆಪೋ ಹಿಸ್ಟಾ ಮಯೋ ಭುವಃ…" ಎಂಬುವುದು ವೇದಮಂತ್ರವಾಗಿದೆ. ಈ ಶ್ಲೋಕದಲ್ಲೂ ನೀರು, ಭೂಮಿಯ ಮೇಲೆ ಇರುವುದಕ್ಕಾಗಿ ಮೆಚ್ಚುಗೆ ಮತ್ತು ಪ್ರಶಂಸೆಗೆ ಪಾತ್ರವಾಗಿದೆ.

ಇಪ್ಪತ್ತನೆಯ ಶತಮಾನದಲ್ಲಿ, "ಸಾವಿರಾರು ಮಂದಿ ಪ್ರೀತಿ ಇಲ್ಲದೇ ಬದುಕಿದ್ದಾರೆ. ಆದರೆ ನೀರಿಲ್ಲದೆ ಯಾರೊಬ್ಬರೂ ಬದುಕಿಲ್ಲ"- ಹೀಗೆಂದು ನುಡಿದವರು ಪ್ರಮುಖ ಸಾಹಿತ್ಯ ತಜ್ಞರಾದ ಡಬ್ಲೂ.ಹೆಚ್. ಆಡೆನ್ ಅವರು.

2016ರಲ್ಲಿ, ಅಮೇರಿಕಾದ ರಾಷ್ಟ್ರೀಯ ವೈಮಾನಿಕ ಮತ್ತು ಬಾಹ್ಯಾಕಾಶ ಕಾರ್ಯನಿರ್ವಹಣಾ ಸಂಸ್ಥೆ (NASA) ಬಹಿರಂಗ ಗೊಳಿಸಿರುವಂತೆ, ಮೂರನೇ ವಿಶ್ವಯುದ್ಧ ಸಂಭವಿಸಿದರೆ, ಅದು ಸ್ವಚ್ಛ ನೀರಿಗಾಗಿ ಮಾತ್ರವಾಗಿರುತ್ತದೆ. ದಕ್ಷಿಣ ಆಫ್ರಿಕಾದ ಕೇಪ್ ಟೌನ್ ನಗರವು 2019ರಲ್ಲಿ ಸ್ವಚ್ಛ ನೀರಿನ ಕೊರತೆಯನ್ನು ತೀವ್ರವಾಗಿ ಎದುರಿಸಿದೆ. ಈ ಚಿತ್ರಣವು ಜಾಗತಿಕ ಮಟ್ಟದ ವಾಯುಗುಣದ ಬದಲಾವಣೆ ಅಥವಾ ಮಾನವನ ಅತಿಯಾದ ಬಳಕೆಯಿಂದ ಸಂಭವಿಸಿರಬಹುದು.

ಈ ಸಂದಿಗ್ಧ ಸಮಯದಲ್ಲಿ, 'ನೈವೇಲಿ ಜಲ'ದ ಕಥೆಯನ್ನು ವಿವರಿಸಲು ಉತ್ಸುಕನಾಗಿದ್ದೇನೆ. ಇದು ಕೆಲವೊಂದು ನೈಜ ಸಂಗತಿಗಳನ್ನು ಹೊರಹಾಕುತ್ತದೆ. ಈ ಕಥೆಯು ಬಹಳ ಮಂದಿಗೆ ಆಕರ್ಷಣೀಯವಾಗಿದ್ದರೆ, ಕೆಲವರಿಗೆ ಆಶ್ಚರ್ಯ, ಮತ್ತೆ ಕೆಲವರಿಗೆ ನಂಬಲಸಾಧ್ಯವಾಗಿ ತೋರಬಹುದು.

ನೈವೇಲಿಯು ಒಂದು ಸಣ್ಣ ಗಣಿಗಾರಿಕೆಯ ಹಳ್ಳಿ. ದಕ್ಷಿಣ ತಮಿಳುನಾಡಿನ ಜಿಲ್ಲಾ ಕೇಂದ್ರವಾದ ಕಡಲೂರಿಗೆ 40 ಕಿ.ಮೀ. ದೂರದಲ್ಲಿದೆ. ಈ ಪ್ರದೇಶವು ನೈಸರ್ಗಿಕ ಸಂಪನ್ಮೂಲಗಳನ್ನು ತನ್ನಲ್ಲಿ ಹುದುಗಿಸಿಟ್ಟುಕೊಂಡಿರುವ ಅದ್ವಿತೀಯ ಸ್ಥಳವಾಗಿದೆ. ಈ ಸ್ಥಳದಲ್ಲಿ ಮೂರೂವರೆ ದಶಕಗಳಿಗೂ ಹೆಚ್ಚು ಕಾಲ ಕೆಲಸ ಮಾಡುವ ಉತ್ತಮ ಅವಕಾಶ ದೊರೆತದ್ದು ದೈವದತ್ತ ವರ ಎಂದೇ ನಾನು ಭಾವಿಸುತ್ತೇನೆ.

ಇನ್ನು ನೈವೇಲಿಯ ಅದ್ವಿತೀಯ ಸಂಗತಿಗಳನ್ನು ಗಮನಿಸೋಣ. ಮೊದಲಿಗೆ ಈ ಸರಣಿಯಲ್ಲಿ, ನೈವೇಲಿ ಜಲದ ಬಗ್ಗೆ ತಿಳಿದುಕೊಳ್ಳೋಣ. ನೀರು ಎಂದಾಕ್ಷಣ, ನಮ್ಮ ನೆನಪಿಗೆ ಬರುವುದು, ನದಿಗಳು, ಕಾಲುವೆಗಳು, ಹೊಂಡ, ಕೊಳಗಳು – ಮೊದಲಾದವು. ಈಗಲೂ ನಾವು ಇವುಗಳನ್ನು ಕಾಣಬಹುದು.

ನೈವೇಲಿ ಜಲದ ಬಗ್ಗೆ ತಿಳಿಯಲು ನೀವು ಉತ್ಸುಕರಾಗಿರಬಹುದು. 1930–1956ರ ನಡುವೆ, ನೈವೇಲಿಯಲ್ಲಿ ಸ್ಥಳೀಯವಾಗಿ, ಕೊಳವೆ ಬಾವಿಗಳಿಂದ ನೀರು ಯಥೇಚ್ಛವಾಗಿ ಚಿಮ್ಮಿ ಹರಿಯುತ್ತಿದ್ದುದನ್ನು ಹಲವರು ಗಮನಿಸಿದ್ದಾರೆ. ನೈವೇಲಿಯಿಂದ ಸುಮಾರು 36 ಕಿ.ಮೀ. ದೂರದಲ್ಲಿರುವ ಚಿದಂಬರಂನ ನಟರಾಜ ದೇವಾಲಯದಲ್ಲಿಯೂ ಸಹ ಇದರ ಅನುಭವವಾಗಿದೆ. ಇದು ಆಶ್ಚರ್ಯವಾದರೂ ಸತ್ಯವಾಗಿ ಪರಿಣಮಿಸಿದೆ.

ಈರೀತಿ ನೈವೇಲಿ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ, ಭೂಮಿಯ ಅಂತರಾಳದಿಂದ, ತನ್ನಷ್ಟಕ್ಕೆ ತಾನೆ, ಸೂಕ್ಷ್ಮವಾಹಿನಿ (ಕೊಳವೆ) ಮೂಲಕ, ಅತಿ ಒತ್ತಡದಿಂದ ನೀರು ಚಿಮ್ಮುತ್ತಿದ್ದುದು ಯಕ್ಷಿಣಿಯಂತೆ ಕಂಡರೂ, ಸಂಪೂರ್ಣ ವೈಜ್ಞಾನಿಕವಾಗಿದೆ. ನೈವೇಲಿಯತ್ತ ಕ್ಷಣಿಕ ನೋಟ ಹರಿಸಿದಂತೆ, ಈ ಪ್ರದೇಶವು ಬಹಳ ಪ್ರಶಾಂತವಾಗಿರುವುದು ಗೋಚರಿಸುತ್ತದೆ. ಹುಲುಸಾಗಿ ಬೆಳೆದಿರುವ, ಹಚ್ಚ ಹಸಿರಿನಿಂದ ಕೂಡಿದ ಸಮತಟ್ಟಿನ ಭೂಮಿಯ ದೃಶ್ಯ ಕಂಡುಬರುತ್ತದೆ. ಈ ಪ್ರದೇಶದಲ್ಲಿ ಗೋಡಂಬಿ ಮತ್ತು ಹಲಸಿನ ಮರಗಳು ಯಥೇಚ್ಛವಾಗಿ ಬೆಳೆದಿವೆ.

ಈ ಭೂಮಿಯ ತಳಭಾಗದಲ್ಲಿ ಅಮೂಲ್ಯವಾದ ಖನಿಜ ವಸ್ತುಗಳು ಬಹಳಷ್ಟು ಲಭ್ಯ ಇವೆ. ಇವುಗಳಲ್ಲಿ ಒಂದು ಖನಿಜ ಎಂದರೆ 'ಶುದ್ಧ ನೀರು'. ವಿಶೇಷವಾದ ಹಾಗೂ ಅದ್ಭುತವಾದ ಸಂಗತಿಯೊಂದು ಈ ಪ್ರದೇಶದಲ್ಲಿದೆ. ಇಂತಹ ಫಲಭರಿತ ಲಕ್ಷಣವುಳ್ಳ ಸಮೃದ್ಧ ನೀರಿನ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಹಲವಾರು ವೈಜ್ಞಾನಿಕ ಅಧ್ಯಯನ ಸಹ ನಡೆದಿವೆ.

ನೈವೇಲಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ, ಮೇಲ್ಮುಖ ಒತ್ತಡದೊಂದಿಗೆ ಸೀಮಿತ ನೀರಿನ ಬುಗ್ಗೆಯ ಉಪಸ್ಥಿತಿಯ ಪ್ರಕ್ರಿಯೆ ಸ್ವಾಭಾವಿಕವಾಗಿದೆ. ಲಿಗ್ನೈಟ್ ಅಂದರೆ ಕಲ್ಲಿದ್ದಲು ಎಂಬ ಖನಿಜವು ನೀರಿನ ವಲಯದ ಮೇಲ್ಭಾಗವನ್ನು ಮುಚ್ಚಿದರೆ, ಜೇಡಿ ಮಣ್ಣು ಎಂಬ ಮತ್ತೊಂದು ಖನಿಜವು ಕೆಳಭಾಗವನ್ನು ಮುಚ್ಚುತ್ತದೆ. ಜಲಾಗಾರದ ಮೇಲಿನ ಮತ್ತು ಕೆಳಗಿನ ವಲಯಗಳು ರಂಧ್ರರಹಿತ ಖನಿಜಗಳಿಂದ ಮುಚ್ಚಲ್ಪಟ್ಟಿರುವುದರಿಂದ, ಇದನ್ನು 'ಸೀಮಿತ ಜಲಾಗಾರ' (ನಿರ್ಬಂಧಿಸಲಾದ ಆಕ್ವಿಫರ್) ಎಂದು ಕರೆಯಲಾಗುತ್ತದೆ. ಇದು 'ಯು' ಆಕಾರದ ಜಲಾಯನವಾಗಿದೆ. ಇದನ್ನು 'ಸಿಂಕ್ಲೈನ್ ಬೇಸಿನ್' ಎಂದು ಕರೆಯಲಾಗುತ್ತದೆ.

ಮೇಲೆ ಚರ್ಚಿಸಲಾದ ಜಲಾಯನವು ಪೂರ್ವ-ಪಶ್ಚಿಮವಾಗಿ ಸುಮಾರು 60 ಕಿ.ಮೀ ಮತ್ತು ಉತ್ತರ-ದಕ್ಷಿಣವಾಗಿ 58 ಕಿ.ಮೀ. ವಿಸ್ತೀರ್ಣವಾಗಿದೆ, ಜಲಾಗಾರದ ಬೃಹತ್ ಗಾತ್ರವು ಸುಮಾರು 300 ಮೀ. ಇರುತ್ತದೆ ಮತ್ತು ಮಧ್ಯದಲ್ಲಿ 430 ಮೀಟರ್ ಗರಿಷ್ಠ ಆಳವಾಗಿದೆ. ಈ ಜಲಾಗಾರ ವಲಯವು ಪಶ್ಚಿಮದಲ್ಲಿ ರಂಧ್ರಗಳಿರುವ ಮಣ್ಣಿನೊಂದಿಗೆ ಮತ್ತು ಪೂರ್ವದಲ್ಲಿ ಬಂಗಾಳ ಕೊಲ್ಲಿಯೊಂದಿಗೆ ಸಂಪರ್ಕ ಹೊಂದಿದೆ. ನೈವೇಲಿ ವಲಯವನ್ನು 'ಯಾಂತ್ರಿಕ ಕಾರಂಜಿ' ಎಂದು ಕರೆಯಲಾಗುತ್ತದೆ. ನೈವೇಲಿ

ಜಲಾಗಾರ ವಲಯವು ಪೂರ್ವದಲ್ಲಿ ಸಮುದ್ರದ ಕಡೆಗೆ ಏರಿಳಿತವನ್ನು ಹೊಂದಿದೆ, ಅಲ್ಲಿ ನೀರಿನ ಹರಿವು ಸಮುದ್ರದ ಕಡೆಗೆ ಇದೆ. ಈ ಪ್ರಮಾಣದ ಸೀಮಿತ ಜಲಾಗಾರವು ಭಾರತದ ಬೇರೆಡೆಗಳಲ್ಲಿ ಕಂಡುಬರುವುದಿಲ್ಲ.

ನೀರಿನ ಬುಗ್ಗೆಯನ್ನು ಕೊಳವೆ ಭಾವಿಗಳ ಮೂಲಕ ಸಂಪರ್ಕಿಸಿದಾಗ, ನೀರು ನೆಲಮಟ್ಟಕ್ಕೆ ಏರುತ್ತದೆ, ಪಂಪ್ ಮಾಡದೆ ತನ್ನಷ್ಟಕ್ಕೆ ತಾನೇ ಹರಿಯುತ್ತದೆ. ಇದನ್ನೇ 'ಅದ್ವಿತೀಯ ನೈವೇಲಿ' ಎಂದು ಹೇಳುವುದು. ಇದು ವಿಶ್ವದ ಅತಿ ದೊಡ್ಡದಾದ ಮತ್ತು ಸವಾಲಿನ ಜಲಮೂಲಗಳಲ್ಲಿ ಒಂದಾಗಿದೆ. ಇದರ ಆಯಸ್ಸು ಸುಮಾರು 250 ಲಕ್ಷ ವರ್ಷಗಳು. ವಿಶೇಷ ಗುಣವೆಂದರೆ ಇಲ್ಲಿ ದೊರೆಯುವ ನೀರೆಲ್ಲವೂ ಕುಡಿಯಲು ಯೋಗ್ಯವಾಗಿದೆ.

ಇಲ್ಲಿಯವರೆಗೂ ಈ ನೀರಿನ ಗುಣಲಕ್ಷಣಗಳನ್ನು ತಿಳಿದುಕೊಂಡೆವು. ಈ ನೀರಿನ ನಿರ್ವಹಣೆ ಹೇಗೆ ಎಂಬುದನ್ನು ತಿಳಿಯೋಣ. 1956ರಲ್ಲಿ ಭಾರತ ಸರ್ಕಾರ ಸ್ಥಾಪಿಸಿದ ನೈವೇಲಿ ಲಿಗ್ನೈಟ್ ಉದ್ಯಮವು ಗಣಿಗಾರಿಕೆ ಮತ್ತು ವಿದ್ಯುತ್ ಉತ್ಪಾದನಾ ಕಂಪೆನಿಯಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರತಿ 1 ಟನ್ ಲಿಗ್ನೈಟನ್ನು ಸುರಕ್ಷಿತವಾಗಿ ಗಣಿಗಾರಿಕೆ ಮಾಡಲು ಸುಮಾರು 3 – 4 ಪಟ್ಟು ಪ್ರಮಾಣದ ನೀರನ್ನು ತಡೆರಹಿತವಾಗಿ ಹೊರತೆಗೆಯಬೇಕಾಗಿದೆ. ಗಣಿತದ ಲೆಕ್ಕಾಚಾರದನುಸಾರವಾಗಿ ನೀರನ್ನು ಅಕ್ಷರಶಃ ಗಣಿಗಾರಿಕೆ (ಪಂಪ್) ಮಾಡಿ ಹೊರತೆಗೆಯಲಾಗುತ್ತದೆ. ನೀರಿಗೆ 'ಗಣಿಗಾರಿಕೆ' ಎಂದು ಹೇಳುವುದು ಕಟುವಾದ ಪದವಾಗಿರಬಹುದು. ಆದರೆ, ಪಂಪಿಂಗ್ ಪ್ರಮಾಣವನ್ನು ಗಮನಿಸಿದರೆ ಹೀಗೆ ಹೇಳುವುದು ಸರಿಯಾಗಿದೆ ಎನಿಸುತ್ತದೆ.

1960ರಿಂದ ಇಲ್ಲಿಯವರೆಗೆ ಗಣಿಗಾರಿಕೆಯ ಜೊತೆಗೆ ನೀರು ಪಂಪ್ ಮಾಡುವ ಕಾರ್ಯವು ನಿರಂತರವಾಗಿ ಸಾಗಿದೆ. ನೀರಿನ ಹೊರತೆಗೆಯುವಿಕೆಯನ್ನು, ನೀರಿನ ಪುನರ್ಭರ್ತಿಯಿಂದ ಸಮತೋಲನಗೊಳಿಸಲಾಗುತ್ತಿದೆ ಮತ್ತು ಅದನ್ನು ಪದರಪದರವಾಗಿ ಬಜೆಟ್ ಮಾಡಲಾಗುತ್ತಿದೆ. ನೀರಿನ ಹೊರತೆಗೆಯುವಿಕೆಯನ್ನು ಸಂಪೂರ್ಣವಾಗಿ ವೈಜ್ಞಾನಿಕ ರೀತಿಯಲ್ಲಿ ನಿರ್ವಹಿಸುತ್ತಿರುವುದಕ್ಕಾಗಿ, ನೈವೇಲಿ ಲಿಗ್ನೈಟ್ ಕಾರ್ಪೋರೇಷನ್ನನ್ನು ಅಭಿನಂದಿಸಲೇ ಬೇಕು. ಇದರಿಂದ ಕರಾವಳಿಯಲ್ಲಿ ಯಾವುದೇ ಸಮುದ್ರ ನೀರಿನ ಒಳ ನುಸುಳುವಿಕೆ ಸಂಭವಿಸಿಲ್ಲ.

ಗಣಿಗಾರಿಕೆಯ ಸಮಯದಲ್ಲಿ ಪಂಪ್ ಮಾಡುವ ನೀರನ್ನು ವಿದ್ಯುತ್ ಉತ್ಪಾದನೆಗೆ ಬಳಸಲಾಗುತ್ತಿದೆ. ಬಳಕೆಯ ನಂತರ, ನೀರಿನ ಪುನರ್ಭರ್ತಿ (ಕೃತಕ ಮತ್ತು ನೈಸರ್ಗಿಕ ವಿಧಾನಗಳು) ಮಾಡಲಾಗುತ್ತಿದೆ. ನೈವೇಲಿ ನಿಗಮ, ಭವಿಷ್ಯಕ್ಕಾಗಿ ನೀರನ್ನು ಸಂರಕ್ಷಿಸಲು ಪ್ರಾಮುಖ್ಯತೆ ನೀಡುತ್ತಿದೆ, ಏಕೆಂದರೆ ಪ್ರಾಚೀನ ಕಾಲದಲ್ಲಿ ಮತ್ತು ವೇದಗಳಲ್ಲಿಯೇ ನೀರಿನ ಉಪಸ್ಥಿತಿಯನ್ನು ಪ್ರಶಂಸಿಸಲಾಗುತ್ತಿತ್ತು.

ಅದ್ವಿತೀಯ ನೈವೇಲಿ ನೀರಿನ ಕಥೆಯ ಮುಕ್ತಾಯದೊಂದಿಗೆ ಮುಂದಿನ ಸರಣಿಯಲ್ಲಿ ಮತ್ತಷ್ಟು ವಿವರಗಳನ್ನು ತಿಳಿದುಕೊಳ್ಳೋಣ.

ಲಾಕ್ ಡೌನ್ ವಿದೇಶ ಯಾತ್ರೆ

ಅಂತೂ ಇಂತೂ ಅಮೆರಿಕ ಬಂತು

- ಮಾಲತಿಶ್ರೀನಿವಾಸನ್

ಹೊರದೇಶದಲ್ಲಿರುವ ಮಕ್ಕಳನ್ನು ನೋಡಲು ವಲಸೆ ಹಕ್ಕಿಗಳಂತೆ ಬೇಸಿಗೆಯ ಮೇ-ಜೂನ್ ದಿನಗಳಲ್ಲಿ ಪ್ರತಿವರುಷ ಅಥವಾ ಎರಡು ವರುಷಕ್ಕೊಮ್ಮೆಹೋಗಿ ಬರುವುದು ರೂಢಿಯಾಗಿದ್ದ ನಮಗೆ. ೨೦೨೦ರಿಂದ ಪ್ರಾರಂಭವಾದ ಕೋವಿಡ್ ಅವಾಂತರದಿಂದ ಮಕ್ಕಳು ಮೊಮ್ಮಕ್ಕಳನ್ನು ನೋಡುವ ಆಸೆ ಹತ್ತಿಕ್ಕಿ ಪರಿಸ್ಥಿತಿ ಸುಧಾರಿಸಲು ಕಾಯಬೇಕಾಯ್ತು.. ವರುಷ ಕಳೆದು ೨೦೨೧ರಲ್ಲಿ ವೈರಾಣುವಿನ ಪಸರಿಕೆ ನಿಯಂತ್ರಣಕ್ಕೆ ಬರುತ್ತೆಲೇ ಮಕ್ಕಳು ಫೆಬ್ರವರಿಯಲ್ಲೇ ನಮ್ಮ ಪ್ರಯಾಣಕ್ಕೆ ಸಿದ್ಧತೆ ಮಾಡಲಾರಂಭಿಸಿದರು. ಈ ಸಲದ ಪ್ರಯಾಣ ಒಂದು ರೀತಿ ಸಸ್ಪೆನ್ಸ್, ಥ್ರಿಲ್ಲರ್ ಸಿನಿಮಾ ತರಹ ಸದಾ ನೆನಪಲ್ಲಿ ಉಳಿಯೋ ರೀತಿಯಾಯ್ತು.

ಜೂನ್ ೬ರಂದು ನಮ್ಮಿಬ್ಬರ ೫೦ನೇ ವರುಷದ ಮದುವೆ ದಿನದ ಸಂಭ್ರಮವನ್ನು ತಮ್ಮೊಡನೆ ಆಚರಿಸಬೇಕೆಂಬ ಉತ್ಸಾಹದಲ್ಲಿ ಮಕ್ಕಳು ಅಮೆರಿಕಾಕ್ಕೆ ನಮ್ಮನ್ನು ಕರೆಸಿಕೊಳ್ಳಲು ಮುಂಗಡವಾಗಿ ಎಲ್ಲ ಸಿದ್ಧತೆಮಾಡಿ ಮೇ ೨೦ಕ್ಕೆ ಯುರೋಪ್ ಮೂಲಕ ಪಯಣಿಸಲು ಮುಂಗಡವಾಗಿ ಟಿಕೆಟ್ ಖರೀದಿಸಿದ್ದರು. ಎಲ್ಲ ಸರಿ ಇದೆ ಅನ್ನುವ ನೆಮ್ಮದಿಯಲ್ಲಿದ್ದಾಗ ಮಾರ್ಚ್ ನಲ್ಲಿ ಎಲ್ಲೆಡೆ ಪ್ರಾರಂಭವಾದ ವೈರಾಣುವಿನ ಅಬ್ಬರ ನಮ್ಮೆಲ್ಲ ಪ್ಲಾನುಗಳನ್ನು ಬುಡಮೇಲಾಗಿಸಿತು. Man proposes God disposes, ಅನ್ನುವ ರೀತಿ ಇತ್ತು ನಮ್ಮ ಪರಿಸ್ಥಿತಿ. ಏನಾದರಾಗಲಿ ನಮ್ಮನ್ನು ಕರೆಸಿಕೊಳ್ಳಲೇಬೇಕು ಎನ್ನುವ ಪಣ ತೊಟ್ಟಂತ್ತಿದ್ದ ಮಕ್ಕಳು, ಮೇ ೨೦ರ ಟಿಕೆಟನ್ನು ಏಪ್ರಿಲ್ ೨೮ಕ್ಕೆ ಬದಲಾಯಿಸಿದರು.

ಎರಡು ಕೋವಿಡ್ ಲಸಿಕೆ ಹಾಕಿಸಿಕೊಂಡಿದ್ದಾಗಿತ್ತು, ಸುರಕ್ಷತೆಯ ಪರೀಕ್ಷೆ ಆರ್.ಟಿ.ಪಿ.ಸಿ.ಆರ್ ೨ ಸಲ ಮಾಡಿಸಿಕೊಂಡೆವು. ಪ್ರತಿ ಸಲದಂತೆ ೧೦ ಕೆಜಿ ಸಾಂಬಾರ ಪುಡಿಗಳನ್ನು ಮುಂಚೆನೇ ಕೊರಿಯರಿನಲ್ಲಿ ಕಳಿಸಿ ಪ್ರಯಾಣಕ್ಕೆ ಸಿದ್ಧರಾದಾಗ, ಹಠಾತ್ತನೆ ೨೬ನೇ ಏಪ್ರಿಲ್ ಮೊದಲ ವಿಘ್ನ. ಯುರೋಪ್ ವಾಯು ನಿಲ್ದಾಣ ಭಾರತದಿಂದ ಬರುವ ಪ್ರಯಾಣಿಕರಿಗೆ ತಡೆ ಹಾಕಿತ್ತು, ಪ್ಯಾರಿಸ್ ಮೂಲಕ ಹೋಗಬೇಕಾಗಿದ್ದ ವಿಮಾನದ ಪ್ರಯಾಣ ರದ್ಧಾಯಿತು.

ಮುಂದೇನು ಅಂದುಕೊಂಡಾಗ ಛಲ ಬಿಡದ ತ್ರಿವಿಕ್ರಮರಂತೆ ಮಕ್ಕಳು ತಕ್ಷಣ ಬೇರೊಂದು ವಿಮಾನದಲ್ಲಿ ದಿಲ್ಲಿಯಿಂದ ಸೀದಾ ಅಮೆರಿಕಾಕ್ಕೆ ಪಯಣಿಸಲು ಮೇ ೫ನೇ ತಾರೀಖಿಗೆ ಟಿಕೆಟ್ ಖರೀದಿಸಿದರು, ಇನ್ನೇನು ಹೊರೆಟೆವು ಅಂತ ಅನಿಸಿದಾಗ ಮತ್ತೆ ದ್ವಿತೀಯ ವಿಘ್ನ ಎದುರಾಯಿತು.

ಅಮೆರಿಕದ ಅಧ್ಯಕ್ಷ ಬೈಡೆನ್ ಮೇ ೪ ರಿಂದ ಭಾರತದ ವಿಮಾನಗಳಿಗೆ ತಡೆಯಾಜ್ಞೆ ಘೋಷಿಸಿದರು, ದ್ವಿತೀಯ ವಿಘ್ನ ಆಗಿದೆ, ಮಕ್ಕಳನ್ನು ಸೇರುವ ಆಸೆ ಬಿಡೋಣ ಅಂತ ಪ್ರಯಾಣಕ್ಕೆ ಸಿದ್ಧಮಾಡಿದ ಸೂಟ್ ಕೇಸ್ ಗಳನ್ನು ಮಂಚದ ಕೆಳಗೆ ದೂಡಿ, ಹೋಗೋ ಆಸೆ. ಬಿಟ್ಟು ಸುಮ್ಮನಾದಾಗ, ಏಪ್ರಿಲ್ ೩೦ ರಂದು ಮಗಳ ಕರೆ. "ಅಮ್ಮ, ನನಗೋಸ್ಕರ ಇನ್ನೊಂದು ಸಲ ಟೆಸ್ಟ್ ಮಾಡಿಸ್ಕೊಂಡ್ ಬಿಡಿ, ಏನಾದ್ರು ಮಾಡಿ ಮೇ ೩ನೇ ತಾರೀಖು ಅಥವಾ ಅದಕ್ಕೆ ಮುಂಚೆನೋ ಸಿಕ್ಕಿದರೆ ದುಡ್ಡೇಷ್ಟಾದ್ರೂ ಪರವಾಗಿಲ್ಲ ನಾವು ಟಿಕೆಟ್ ಮಾಡಿಸ್ತೀವಿ, ಬಂದ್ಬಿಡಿ" ಅಳುವ ಧ್ವನಿ ಅತ್ತಲಿಂದ. ಇಲ್ಲ ಎನ್ನುವ ಮನಸ್ಸಾಗಲಿಲ್ಲ. ಮನೆಯಲ್ಲಿ ಇಬ್ಬರೂ ೭೦ರ ಆಚೆಯ ವಯಸ್ಸಿನವರು, ಸುತ್ತ ನಗರದಲ್ಲಿ ಪರಿಸ್ಥಿತಿ ಕೆಡುತ್ತಿದ್ದ ಒತ್ತಡ, ಹತ್ತಿರದ ಹಲವರನ್ನು ಕಳೆದುಕೊಂಡ ನೋವು, ಇಲ್ಲ ಅನ್ನಲು ನಮ್ಮಿಬ್ಬವರಿಗೂ ಧೈರ್ಯ ಅಗಲಿಲ್ಲ. ಸರಿ, ಎಂದು ದೇವರ ಇಚ್ಛೆ ಇದ್ದಹಾಗೆ ಆಗುತ್ತೆ ಅಂತ ಒಪ್ಪಿ, ಮೇ ೧ನೇ ತಾರೀಖು ಹತ್ತಿರದ ಅಪೋಲೊ ಆಸ್ಪತ್ರೆಗೆ ಹೋಗಿ ಮತ್ತೊಮ್ಮೆ ಪರೀಕ್ಷೆಗೆ ಸ್ಯಾಂಪಲ್ ಕೊಟ್ಟು ಬಂದೆವು. ಪ್ರತಿ ಸಲ ಪರೀಕ್ಷೆ ಮಾಡಿಸಿಕೊಳ್ಳುವಾಗೆಲ್ಲ

ಆತಂಕ. ಅಲ್ಲೇ ಸೋಂಕು ಹತ್ತಿಕೊಂಡರೆ? .ಎರಡೆರಡು ಮಾಸ್ಕ್ ಧರಿಸಿ ಮತ್ತೆ "ಸಕಾರಾತ್ಮಕ ಚಿಂತನೆ ಮಾಡು ಮನವೇ, ಹತಾಶೆ ಬೇಡ" ಅಂತ ಜಪಿಸುತ್ತ ಇದ್ದಂತೆ ಮೇ ೨ನೇ ತಾರೀಖು ಭಾನುವಾರ ಆತಂಕದಲ್ಲೇ ಕಳೆಯಿತು,

೩ನೇ ತಾರೀಖು ಸೋಮವಾರ ಹಾಸಿಗೆಯಲ್ಲಿ ಎದ್ದು ಕುಳಿತಾಗ 'ಮಕ್ಕಳಿಂದ ಏನೂ ಸಂದೇಶವಿಲ್ಲ ಇನ್ನು ಹೋಗೋದು ಸಾಧ್ಯ ಇಲ್ಲ' □ಂತ ಎಲ್ಲ ಬಟ್ಟೆ ವಾಪಸ್ ಇಟ್ಟು ಮುಂದಿನ ಕೆಲಸ ನೋಡೋಣ ಅಂತ ಕಾಫಿ ಕುಡೀತಾ ಮಾತಾಡ್ತಾ ಇದ್ದಾಗ ಅಪೋಲೊ ಆಸ್ಪತ್ರೆ ಇಂದ ಸಂದೇಶ- 'ನಿಮ್ಮ ಪರೀಕ್ಷೆಯ ರಿಪೋರ್ಟ್ ರೆಡಿ, ಬಂದು ತೆಗೆದುಕೊಂಡು ಹೋಗಿ' ಎಂದು. ಸರಿ, ತಿಂಡಿ ತಿಂದು ಅದನ್ನು ತರಲು ಹೊರಟಾಗ ಮಗಳಿಂದ ದೂರವಾಣಿ ಕರೆ- "ಅಮ್ಮ ಇನ್ನು ೪ ಘಂಟೆಗಳೊಳಗೆ ಹಾರೋಡೋಕ್ಕೆ ರೆಡಿಯಾಗಿ. ನೀವು ದಿಲ್ಲಿಗೆ ೫ ಘಂಟೆಗೆ ಸೇರಿದರೆ, ರಾತ್ರಿ ೩ ಘಂಟೆಗೆ ಸೀದಾ ಸ್ಯಾನ್ ಫ್ರಾನ್ಸಿಸ್ಕೋಗೆ ಹೊರಡೋ ವಿಮಾನದಲ್ಲಿ ೨ ಟಿಕೆಟ್ ಸಿಕ್ಕಿದೆ. ಪ್ಲೀಸ್, ಬಂದ್ಬಿಡಿ. ನಮಗೆ ಇಲ್ಲಿ ನಿದ್ದೆ ಬರ್ತಾ ಇಲ್ಲ. ನಿಮ್ಮದೇ ಯೋಚನೆ" ಮಗಳು ಅಲವತ್ತುಕೊಂಡಾಗ ಅದದ್ದಾಗಲಿ ಎಂದು ಹೊರಡುವ ನಿರ್ಧಾರ ಮಾಡಿ .೨ ಘಂಟೆಗಳೊಳಗೆ ಮನೆ ಜವಾಬ್ದಾರಿ ಮನೆ ಕೆಲಸದವರಿಗೆ ಒಪ್ಪಿಸಿ, ಸಾಮಾನು ಸರಿ ಮಾಡಿ, ಪಕ್ಕದ ಮನೆಯ ದಂಪತಿಗಳ ಮನೆಯಲ್ಲಿ ಊಟ ಮಾಡಿ ಟ್ಯಾಕ್ಸಿ ಹತ್ತಿದೆವು.

ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಧಾವಿಸಿದಾಗ ಘಂಟೆ ಎರಡು. ಅಲ್ಲಿಂದ ಮುಂದಿನದೆಲ್ಲ ಕನಸಿನಲ್ಲಿದ್ದಂತೆ, ಸ್ವಯಂಚಾಲಿತ ಯಂತ್ರದಂತೆ ನಡೆಯಿತು. ದಿಲ್ಲಿಯಲ್ಲಿ ಇಳಿದು, ರಾತ್ರಿ ೩ ಘಂಟೆಗೆ ಅಮೆರಿಕಾಕೆ ಹಾರುವ ವಿಮಾನ ಹತ್ತಿ ಕೂತಾಗ ಒಮ್ಮೆಗೇ ಎಲ್ಲ ಒತ್ತಡ ದೂರಾದಂತೆ ಅನಿಸಿದ್ದು,

"Fasten your seat belts please" ಅಂತ ಗಗನಸಖಿ ಉಲಿದಾಗಲೇ.ಈ ಹದಿನಾಲ್ಕು ಘಂಟೆ ತಡೆರಹಿತ ಪ್ರಯಾಣ ಹೇಗೆ ಅಂತ ಯೋಚಿಸೋ ವ್ಯವಧಾನವೇ ಇರಲಿಲ್ಲ ನಮ್ಮಿಬ್ಬರಿಗೆ. ಸುಸ್ತು, ಆಯಾಸ, ಆತಂಕ ಒಮ್ಮೆಗೇ ದೂರಾದ ನೆಮ್ಮದಿ. ಬರೀ ಊಟ ತಿಂಡಿಗೆ ಮಾತ್ರ ಎಚ್ಚರ, ನಿದ್ರಾದೇವಿಯ ಮಡಿಲಿಗೆ ಜಾರಿ, ಕಣ್ಣು ಬಿಡೋ ಹೊತ್ತಿಗೆ ಮತ್ತೆ ಗಗನಸಖಿಯ ಸುಮಧುರ ವಾಣಿ "please fasten your seat belts, we are alighting at SFO airport shortly." ಸ್ಯಾನ್ ಫ್ರಾನ್ಸಿಸ್ಕೋ ತಲುಪಿದ್ದೆವು. ನಿದ್ರೆಯಿಂದ ಎದ್ದು, ಇದು ಕನಸೋ ನನಸೋ ಎನ್ನುವ ಸ್ಥಿತಿಯಲ್ಲಿ ಹೊರಬಂದೆವು.

ಮುಂದಿನ ಪಯಣ ಮಗನ ಊರು ಅಟ್ಲಾಂಟಗೆ ಮತ್ತೊಂದು ವಿಮಾನ ಹತ್ತಬೇಕಿತ್ತು. ಸುತಮುತ್ತ ವಾಯು ನಿಲ್ದಾಣದಲ್ಲಿ ಮುಸುಕುಧಾರಿಗಳ ಓಡಾಟ, ತಿನಿಸುಗಳ ಘಮಲು, ಸೋಂಕಿನ ನಿರಂತರ ಆತಂಕ, ತಂದಿದ್ದ ಚಪಾತಿ, ಚಟ್ನಿಪುಡಿ, ಕಾಫಿ ಜೊತೆ ತಿಂದು ಮತ್ತೊಂದು ವಿಮಾನ ಹತ್ತಿ .ಮಗನ ಮನೆ ಸೇರಿದಾಗ ಮನಸ್ಸಿಗೆ ಅನಿಸಿದ್ದು, ೪ ಸಲ ಮುಂಗಡ ಟಿಕೆಟ್ ರದ್ದಾಗಿ, ೪ ಸಲ ಕೋವಿಡ್ ಪರೀಕ್ಷೆ ಮಾಡಿಸಿಕೊಂಡ ನಂತರ "ಅಂತೂ ಇಂತೂ ಅಮೆರಿಕ ಬಂತು'". ಈ ಎಲ್ಲ ವಿಘ್ನಗಳನ್ನು ದೂರಾಗಿಸಿ ಮಕ್ಕಳ ಆಸೆ ಪೂರೈಸಿ ನಮ್ಮೆಲ್ಲರನ್ನು ಒಟ್ಟಾಗಿಸಿದ ವಿಘ್ನಹರನಿಗೆ ಕೊನೆಯಲ್ಲಿ ದೊಡ್ಡ ನಮಸ್ಕಾರ .ಹಾಕಿದೆವು.

ಇಷ್ಟೆಲ್ಲ ಸಾಹಸಮಾಡಿ ಹೊರದೇಶಕ್ಕೆ ಬಂದು ಒಂದು ತಿಂಗಳಾದರೂ, ಮಕ್ಕಳು ಮೊಮ್ಮಕ್ಕಳೊಡನೆ ಇದ್ದಾಗ ಮನಸ್ಸಿನಲ್ಲಿ ಸ್ನೇಹಿತರು, ಆತ್ಮೀಯರು, ಪ್ರೀತಿಯಿಂದ ನಮ್ಮನ್ನು ನೋಡುತ್ತಿದ್ದ ಮನೆಕೆಲಸದವರು, ಎಲ್ಲರನ್ನೂ ಇದ್ದಕ್ಕಿದ್ದಂತೆ ಬಿಟ್ಟುಬಂದ ನೋವು, ಪಾಪಪ್ರಜ್ಞೆ ನಮ್ಮಿಬ್ಬರನ್ನೂ ಆಗಾಗ ಕಾಡುತ್ತಿದೆ. ಈ ಸಂಕಟದ ಪರಿಸ್ಥಿತಿ ಆದಷ್ಟು ಬೇಗ ದೂರಾಗಲೆಂದು ಆಶಿಸುತ್ತಿದ್ದೇವೆ.

ಅನುಸೃಷ್ಟಿ

ಪಾತಾಳಕ್ಕಿಳಿದವನ ಕೈಹಿಡಿದು ಮೇಲೆತ್ತಿ
ರಮಿಸಿ–ಪುಸಲಾಯಿಸಿ–ಉಬ್ಬಿಸಿ
ರೆಕ್ಕೆ–ಪುಕ್ಕ ಹಚ್ಚಿ ಪುರ್ರನೆ ಹಾರಿಸಿ
ಆಕಾಶಕ್ಕೇರಿಸಿ,
ಭವ–ಬಂಧನ ಬಿಡಿಸಿ ಪಾರಾದೆ
ಎಂದು, ಭ್ರಮಿಸಿ– ಸುಖಿಸಿ.
ಮೇಲೆ–ಮೇಲೆ ತೇಲುತ್ತಿರುವಾಗ.....।

ಸರ್ರನೆ ಇಳಿಸಿ,
ಪರ್ರನೆ ರೆಕ್ಕೆ–ಪುಕ್ಕ ಹರಿದು
ರಸಾತಳಕ್ಕೆ ಬೀಳಿಸಿ, ಅಟ್ಟಿ–ಅಟ್ಟಾಡಿಸಿ,
ಹಿಡಿದು, ತುಳಿದು, ಮೆಟ್ಟಿ ಹಿಡಿದು, ಗೋಗರೆಸಿ,
ಗೋಣು ಒತ್ತಿ–ಉಸಿರುಗಟ್ಟಿ ಸತ್ತೆನೋ....
ಸತ್ತೇಹೋದೆ। ಎಂದು ವಿಲವಿಲನೆ
ಒದ್ದಾಡುತ್ತಿರುವಾಗ

ಮತ್ತೆ ಬಿಡದೆ ಬೆಂಬತ್ತಿ
ಭುವಿಗೆಳೆದು ಅನುಸರಿಸಿ
ಒಲಿಸಿ–ಮಣಿಸಿ–ಆಸೆ ಹುಟ್ಟಿಸಿ
ನಾಟ್ಯಕಲೆ ಕಲಿಸಿ, ವೇಷ ತೊಡಿಸಿ,
ಬಣ್ಣ ಹಚ್ಚಿ, ತಕ–ಥೈ ಕುಣಿಸಿ
ತಣಿದು–ತಣಿಸಿ, ಮೆಚ್ಚಿ–ಮೆಚ್ಚಿಸಿ,
ಚಿಮ್ಮಿ–ಚಿಮ್ಮಿಸಿ ಮೇಲೆ ಮಿಂಚಿಸುವ
ಆ ನಿನ್ನ ದಿವ್ಯಕ್ಕೆ, ಭಲೇ! ಭಲೇ!
ನಿನ್ನ ಆ ದಿವ್ಯಸೃಷ್ಟಿಗೆ ಭಲೇ! ಎನ್ನದವರಾರು ??

ಪಾರ್ವತಿ .ವಿ .ಹೆಗಡೆ.

.

ಬಂಧ –ಮುಕ್ತಿ

ವರ್ತಮಾನದ ಬದುಕಿಗೆ ಸಹಕರಿಸುವ
ನಿರಾಮಯ ಬದುಕಿಗೆ ಪ್ರೇರೇಪಿಸುವ
ಪರರ ಕಷ್ಟಗಳಿಗೆ ಸ್ಪಂದಿಸುವ
ಇಷ್ಟಾನಿಷ್ಟಗಳೆರಡನ್ನೂ ಸ್ವೀಕರಿಸುವ
ಪ್ರೀತಿ–ಕರುಣೆ–ಸಹನೆ–ವಿಶ್ವಾಸಗಳ
ಹಿತವಾದ–ನವಿರಾದ–ಬಿಗಿಯಾದ–ಪಾಶಗಳ
ಬಂಧಿಯನ್ನಾಗಿ ನನ್ನನ್ನು ಸಜ್ಜುಗೊಳಿಸು.
ಹೇ, ದೇವಾ॥

ಸದಾಕಾಡುವ ಭೂತ–ಭವಿಷ್ಯಗಳ
ಕಹಿನೆನಪು–ಭಯ–ಆತಂಕಗಳ
ಪರರ ಬಗೆಗಿನ ಕೋಪ–ತಾಪಗಳ
ದ್ವೇಷಾಸೂಯೆಗಳ–ಹಿಂಸಾಪ್ರವೃತ್ತಿಗಳ
ಅಷ್ಟಮದಸಹಿತ ಅರಿಷಡ್ವರ್ಗಗಳ
ನನ್ನೊಳಗಿದ್ದು ನನ್ನನ್ನೇ ತಿನ್ನುವ
ನನ್ನ ಈ ವೈರಿಗಳ ಕಾಟದಿಂದ ಮುಕ್ತಿಕೊಡು
ಹೇ, ದೇವದೇವಾ॥

ಪಾರ್ವತಿ .ವಿ .ಹೆಗಡೆ

ನೆನಪು ಕಾಡಿದ ಪ್ರಶ್ನೆ

ತಂಗೀ... ನನ್ನ ತಂಗಿ

- **ರವೀಂದ್ರ ಕುಮಾರ್ ಎಲ್ವೀ., ಮೈಸೂರು.**

"ಪುಟ್ಟಾ ಪುಟ್ಟಾ ಹೆಜ್ಜೆ ಇಟ್ಟು,
ಬಣ್ಣದ ಅಂಗಿ ತೊಟ್ಟಾ ತಂಗಿ,
ಬರ್ತಾಳೆ, ಬಲು ಬಂಗಾರ ತಂಗಿ ಬರ್ತಾಳೆ"...

ಹೀಗೆ ಹಾಡುತ್ತ ಅಮ್ಮನ ಸುತ್ತಾ ಕುಣಿಯುತ್ತಿದ್ದೆ. ನನಗಾಗ ಆರು ವರ್ಷ. ನನ್ನ ತಮ್ಮನಿಗೆ ಮೂರು ವರ್ಷ.

ಮನೆಗೆ ನಮ್ಮ ಜೊತೆಗೆ ಇನ್ನೊಂದು ಪಾಪು ಬರುತ್ತದೆ ಎಂಬುದೇ ಖುಷಿಯ ವಿಚಾರ. ಅಣ್ಣ (ತಂದೆಯನ್ನು ನಾವು ಹೀಗೆಯೇ ಕರೆಯುತ್ತಿದ್ದುದು) ನಿಮಗೆ ಒಬ್ಬಳು ತಂಗಿ ಬರ್ತಾಳೆ ಅಂತ ಹೇಳಿದ್ದು ಕೇಳಿ ನಾನು ಖುಷಿಯಲ್ಲಿ ಓಲಾಡುತ್ತಿದ್ದೆ. ಅದೇ ಖುಷಿಯಲ್ಲಿಯೇ ಆ ಸಿನಿಮಾ ಹಾಡನ್ನು ಹಾಡುತ್ತ ಕುಣಿಯುತ್ತಿದ್ದೆ. ನನ್ನ ಆಟದ ಗೆಳತಿಯರಾದ ಎದುರು ಮನೆಯ ಸೋಡಾ ಅಂಗಡಿ ಪದ್ಮಿನಿ ಮತ್ತು ಅದರ ಪಕ್ಕದ ಸೇಠು ಮನೆಯ ಕಮಲ ಇಬ್ಬರಿಗೂ ಓಡಿ ಹೋಗಿ ಸುದ್ಧಿ ಮುಟ್ಟಿಸಿ ನಲಿದಾಡಿದೆ.

ಅಮ್ಮ ಪಾಪುವನ್ನು ಕರೆದು ತರಲು ತಾತನ ಮನೆಗೆ ಹೋದಳು. ಜೊತೆಗೆ ತಮ್ಮನೂ ಹೋದ. ನನ್ನೊಬ್ಬನ್ನನ್ನು ಇಲ್ಲಿ ಅಜ್ಜಿಯ ಜೊತೆ ಬಿಟ್ಟು ಹೋಗಿದ್ದಕ್ಕೆ ಬೇಜಾರಾದರೂ, ತಂಗಿ ಬರುವುಳಲ್ಲ ಎಂಬ ಖುಷಿಯಲ್ಲಿ ಅಜ್ಜ ಆಜ್ಜಿಯ ಜೊತೆಗೇ ಉಳಿದೆ. ಎಷ್ಟೇ ಆಗಲಿ ಅಜ್ಜಿಯ ಮುದ್ದಿನ ಮೊಮ್ಮಗ ನಾನು.

ತಾತನ ಮನೆಯಿಂದ ಅಂಚೆ ಪತ್ರವೊಂದು ಬಂದಿತು. ನಮ್ಮ ನಿರೀಕ್ಷೆಯಂತೆ ತಂಗಿಯೇ ಹುಟ್ಟಿದ್ದಳು. ಮಗು ಬಾಣಂತಿಯನ್ನು ನೋಡಿ ಬರಲು ಅಣ್ಣ (ತಂದೆ) ಹೊರಟರು. ನಾನೂ ಬರುತ್ತೇನೆಂದು ಕಾಲುಜ್ಜಿ ಅತ್ತೆ. ಇವನನ್ನೂ ಕರೆದು ಕೊಂಡು ಹೋಗು ಅಂತ ಅಜ್ಜಿ ಹೇಳಿದರು. ಸರಿ, ಅಣ್ಣನ ಜೊತೆಯಲ್ಲಿ ಹೋಗಿ ಅಮ್ಮನನ್ನೂ, ತಂಗಿಯನ್ನೂ ನೋಡಿದೆ.

ಯಾರೋ ಜೋಯಿಸರು ಬಂದರು, ಅಣ್ಣನ ಕೈಯಲ್ಲಿ ಏನೋ ಪೂಜೆ ಮಾಡಿಸಿದರು. ತಂಗಿಗೆ 'ಸುಧಾ" ಎಂದು ಹೆಸರಿಟ್ಟರು. ಹೆಸರನ್ನು ಆರಿಸಿದ್ದು ಅಮ್ಮನ ತಂಗಿ ಶಾಂತಕ್ಕ. ಚಿಕ್ಕಮ್ಮ ಆದರೂ ನಾವೆಲ್ಲ ಅವಳನ್ನು ಶಾಂತಕ್ಕ ಎಂದೇ ಕರೆಯುತ್ತಿದ್ದೆವು. ಹೆಸರು ನನಗೂ ಇಷ್ಟವಾಯಿತು. ಅಣ್ಣ, ನಾನು ವಾಪಸು ಬಂದೆವು.

ಮತ್ತಷ್ಟು ದಿನ ಕಳೆದ ಮೇಲೆ ಅಮ್ಮ, ತಮ್ಮ ತಂಗಿ ರೈಲಿನಲ್ಲಿ ಬಂದರು. ಅಣ್ಣ ಬೀರೂರಿಗೆ ಹೋಗಿ ಅಲ್ಲಿಂದ ಎಲ್ಲರನ್ನೂ ಶಂಕರ್ ಬಸ್ಸಿನಲ್ಲಿ ನಮ್ಮೂರಿಗೆ ಕರೆತಂದರು.

ತಂಗಿ ಪಾಪು ಚಟುವಟಿಕೆಯಿಂದ ಕೈಕಾಲು ಆಡಿಸುತ್ತ ಇರುತ್ತಿದ್ದಳು. ನಾನು ತಂಗಿಯನ್ನು ಮುಟ್ಟಿದರೂ ಅಮ್ಮ ಬೈಯುತ್ತಿರಲಿಲ್ಲ.

ತಂಗಿ ಪಾಪು ಮಗ್ಗುಲಾಗಲು ಕಲಿತಳು. ಹಾಗೆಯೇ ಸ್ವಲ್ಪ ದಿನದ ಮೇಲೆ ಬೋರಲಾಗಲೂ ಶುರು ಮಾಡಿದಳು. ಮೊದಮೊದಲು ಬೋರಲಾದಾಗ ಅವಳ ಕೈ ಹೊಟ್ಟೆಯ ಕೆಳಗೆ ಸಿಕ್ಕಿ ಬಿಡುತ್ತಿತ್ತು. ತೆಗೆಯಲಾಗದೇ ಅಳುತ್ತಿದ್ದಳು. ಆಗ ನಾನು ಮೆಲ್ಲನೆ ಅವಳ ಕೈ ಸರಿಸುತ್ತಿದ್ದೆ. ಹಾಗೆ ಮಾಡಿದಾಗ ನನ್ನನ್ನು ನೋಡಿ ನಗುತ್ತಿದ್ದಳು.

ಕೆಲ ಸಮಯದ ನಂತರ ಬೋರಲಾದವಳು ಮುಂದೆ ತೆವಳಲು ಕಲಿತಳು. ಹೊಟ್ಟೆಯ ಮೇಲೆ ತೆವಳುವುದು ಕಷ್ಟವೆನಿಸಿತೋ ಏನೋ ಒಂದು ಕಾಲನ್ನು ಮಡಿಸಿಕೊಂಡು ನೆಲಕ್ಕೆ ಊರಿ ಹೊಟ್ಟೆಯ ಮೇಲಿನ ಭಾರವನ್ನು ಕಮ್ಮಿ ಮಾಡಿಕೊಂಡು ಮುಂದೆ ಸಾಗುವುದನ್ನು ಕಲಿತಳು. ಅವಳ ಈ ಆಟಗಳನ್ನು ನೋಡುವುದು ಬಹಳ ಖುಷಿ ಕೊಡುತ್ತಿತ್ತು.

ಸ್ವಲ್ಪ ದಿನಕ್ಕೇ ಅವಳು ಎರಡೂ ಕಾಲು ಮಡಿಸಿಕೊಂಡು ಮೊಣಕಾಲು ಉಪಯೋಗಿಸಿ ಹೊಟ್ಟೆಯನ್ನೆತ್ತಿ ಅಂಬೆಗಾಲಿಡಲು ಕಲಿತಳು. ಕೆಲವು ದಿನಕ್ಕೇ ಅಂಬಗಾಲಿಟ್ಟು ರಭಸದಿಂದ ಮುಂದೆ ಹೋಗಲು ಶುರುಮಾಡಿದಳು.

ಮುಂದೆಮುಂದೆ ಹೋಗುತ್ತಾ ಅವಳು ಮಧ್ಯದಲ್ಲಿ ಕುಳಿತುಕೊಳ್ಳಲು ಪ್ರಯತ್ನಿಸಿದಳು. ಮೊದಮೊದಲು ಕೂರುವಾಗ ಸಮತೋಲನ ತಪ್ಪಿ ಬೀಳುತ್ತಿದ್ದಳು. ಬರುಬರುತ್ತಾ ಸರಿಯಾಗಿ ಕೂರಲೂ ಕಲಿತಳು.

ಈಗ ಮನೆ ತುಂಬಾ ಹರಿದಾಡುತ್ತಿದ್ದಳು. ಹಾಗೆಯೇ ಅವಳ ಚೇಷ್ಟೆಗಳೂ ಹೆಚ್ಚತೊಡಗಿದವು. ಎಲ್ಲವನ್ನೂ ಎಳೆಯುತ್ತಿದ್ದಳು, ಎಸೆಯುತ್ತಿದ್ದಳು, ಬೀಳಿಸುತ್ತಿದ್ದಳು.

ಅವಳು ಬಹಳ ಚುರುಕಾಗಿ ಅಂಬೆಗಾಲಿಟ್ಟು ಸರಿಯುತ್ತಿದ್ದಳು. ಅವಳನ್ನು ಹಿಡಿಯುವುದೇ ಕಷ್ಟವಾಗಿತ್ತು. ಹಿಡಿದು ಎತ್ತಿಕೊಂಡರೆ ನುಣಿಚಿಕೊಂಡು ತಪ್ಪಿಸಿಕೊಳ್ಳುತ್ತಿದ್ದಳು.

ಅವಳ ಹರಿದಾಟ, ಚೇಷ್ಟೆ ಹೆಚ್ಚಾಗುತ್ತಲೇ ಹೋಯಿತು. ಈಗ ಅವಳ ಹರಿದಾಟವನ್ನು ಕಮ್ಮಿ ಮಾಡಲು ಅವಳ ಒಂದು ಕಾಲಿಗೆ ಹಗ್ಗ ಕಟ್ಟಿ ಅದರ ಇನ್ನೊಂದು ತುದಿಯನ್ನು ನಡುಮನೆಯ ಪಕ್ಕದ ರೂಮಿನ ಮಂಚಕ್ಕೆ ಕಟ್ಟುತ್ತಿದ್ದರು. ಹಗ್ಗದ ವ್ಯಾಪ್ತಿಯಲ್ಲೇ ಸುತ್ತಾಡಿಕೊಂಡು ಇರುತ್ತಿದ್ದಳು. ಕಟ್ಟುವುದು ಇಷ್ಟವಾಗುತ್ತಿರಲಿಲ್ಲ. ಕಟ್ಟಿದ್ದ ಹಗ್ಗವು ನಡುಮನೆಯ ಬಾಗಿಲವರೆಗೆ ಬರುತ್ತಿತ್ತು. ಅವಳು ಹಾಗೆಯೇ ನಡುಮನೆ ಬಾಗಿಲಿಗೆ ಬಂದು ಅಲ್ಲಿ ಕುಳಿತು ಕಟ್ಟಿದ ಕಾಲನ್ನು ಹಜಾರದ ಕಡೆಗೆ ಚಾಚಿಕೊಂಡು ಕುಳಿತು ಹಜಾರದಲ್ಲಿ ಬಂದವರು ತನ್ನ ಕಾಲು ಬಿಚ್ಚಲಿ ಎಂಬ ಆಸೆಯಿಂದ ಹಜಾರಕ್ಕೆ ಬಂದವರಿಗೆ ಕಾಲು ತೋರಿಸುತ್ತಿದ್ದಳು.

ಅವಳಿಗಾಗಿ ಒಂದು ಕಬ್ಬಿಣದ ಸ್ಟಾಂಡ್ ತೊಟ್ಟಿಲು ಮಾಡಿಸಿದ್ದರು. ಅದರಲ್ಲಿ ಅವಳನ್ನು ಮಲಗಿಸಿದರೆ, ನಿದ್ದೆ ಮಾಡಿ ಎದ್ದ ಮೇಲೆ ತೊಟ್ಟಿಲೊಳಗೆ ಕುಳಿತು ತಾನೇ ಜೋರುಜೋರಾಗಿ ತೊಟ್ಟಿಲನ್ನು ತೂಗಿಕೊಳ್ಳುತ್ತಿದ್ದಳು. ಅದೆಷ್ಟು ಜೋರಾಗಿ ತೂಗಿ ಕೊಳ್ಳುತ್ತಿದ್ದಳೆಂದರೆ ನೋಡಿದವರಿಗೆ ಇವಳು ಪಲ್ಟಿ ಹೊಡೆದು ಬೀಳುತ್ತಾಳೆನೋ ಎಂದು ಭಯವಾಗುತ್ತಿತ್ತು.

ಹೀಗೆಯೇ ಬೆಳೆಯುತ್ತ ಬಂದಳು. ನಡೆಯುವುದನ್ನು ಕಲಿತಳು, ಓಡುವುದನ್ನವಳು ಕಲಿಯಲೇ ಬೇಕಿರಲಿಲ್ಲ, ಅವಳು ನಡೆಯುವುದೇ ಓಡುವಂತಿತ್ತು. ಜೊತೆಗೇ ಅವಳ ಚೇಷ್ಟೆ ಹೆಚ್ಚಾಗುತ್ತಾ ಹೋಯಿತು. ಅವಳ ಮೇಲೆ ನಿಗಾ ಇಡಲು ಯಾರಾದರೊಬ್ಬರು ಯಾವಾಗಲೂ ಇರಬೇಕಿತ್ತು.

ಮುಂದೆ ಮಾತು ಕಲಿತಳು. ಅರಳು ಹುರಿದಂತೆ ಮಾತನಾಡುತ್ತಿದ್ದಳು. ಮನೆಯ ತುಂಬಾ, ಅಂಗಳದ ತುಂಬಾ ಇವಳ ಓಡಾಟವೇ ಓಡಾಟ. ಕಾಲಿಗೆ ಹಾಕಿದ ಗೆಜ್ಜೆಯ ನಾದ ಅವಳ ಓಡಾಟಕ್ಕೆ ವಿಶೇಷತೆಯನ್ನು ತಂದಿತ್ತು.

ಅವಳು ಹುಟ್ಟಿದಾಗಲೇ, ಅವಳ ಜೊತೆಗೇ ನಮ್ಮನೆಗೆ ಬಂದಿದ್ದ ಪರ್ಷಿಯನ್ ಜಾತಿಯ ಬೆಕ್ಕೊಂದು ಅವಳ ಆಟದ ಪ್ರಮುಖ ಆಟಿಕೆಯಾಗಿತ್ತು. ಶುದ್ಧ ಬಿಳೀ ಬಣ್ಣದ ಮೈತುಂಬಾ ತುಪ್ಪಟವಿದ್ದ ಬೆಕ್ಕು ನೋಡಲು ಅತ್ಯಾಕರ್ಷವಾಗಿತ್ತು. ತಂಗಿಯು ಯಾವುದೇ ಅಂಜಿಕೆ ಇಲ್ಲದೇ ಅದನ್ನು ಎತ್ತಿ ಮುದ್ದು ಮಾಡುತ್ತಿದ್ದಳು. ಅದನ್ನು ಹಿಡಿದು ಮೇಲಕ್ಕೆ ಎಸೆದು ಬಿಡುತ್ತಿದ್ದಳು. ಆದನ್ನು ಹೇಗೇ

ಎಸೆದರೂ ಅದು ನೆಲಕ್ಕೆ ಸರಿಯಾಗಿ ಇಳಿಯುತ್ತಿದ್ದುದನ್ನು ನೋಡಿ ಖುಷಿಪಡುತ್ತಿದ್ದಳು. ಅವಳ ಬೆಕ್ಕಿನ ಜೊತೆಯ ಈ ಆಟ ನಮಗೂ ನೋಡಲು ಚಂದವಾಗಿಯೂ ಆಶ್ಚರ್ಯಕರವಾಗಿಯೂ ಇರುತ್ತಿತ್ತು.

ಬೆಕ್ಕಿನೊಂದಿಗೆ ಅವಳ ಮುದ್ದಿನಾಟದ ಮತ್ತೊಂದು ವಿಶೇಷವೆಂದರೆ ಬೆಕ್ಕಿನ ಎರಡೂ ಮುಂದಿನ ಕಾಲುಗಳನ್ನು ಹಿಡಿದು ಅದನ್ನು ಭುಜದ ಮೇಲೆ ಹಾಕಿಕೊಂಡು, ಬೆಕ್ಕಿನ ದೇಹ ಭಾಗ ತನ್ನ ಬೆನ್ನ ಮೇಲಿರುವಂತೆ ಮಾಡಿಕೊಂಡು, ಮಕ್ಕಳನ್ನು 'ಕೂಸುಮರಿ' ಮಾಡುವ ಭಂಗಿಯಲ್ಲಿ ನಡೆಯುತ್ತಿದ್ದಳು. ಕೆಲವೊಮ್ಮೆ ಬೆನ್ನ ಮೇಲೆ ಬೆಕ್ಕು ಇರುವಂತೆಯೇ ಬೆನ್ನು ನೆಟ್ಟಗೆ ಮಾಡಿ ಕೊಂಡು ರಾಜಗಾಂಭೀರ್ಯದಿಂದ ನಡೆಯುತ್ತಿದ್ದಳು. ಆಶ್ಚರ್ಯವೆಂದರೆ, ನಾವೇನಾದರೂ ಸ್ವಲ್ಪ ಸಲುಗೆಯಿಂದ ಬೆಕ್ಕನ್ನು ಎಳೆದಾಡಿದರೆ, ಗುರ್ ಎನ್ನುತ್ತಿದ್ದ ಬೆಕ್ಕು ಅವಳೇನು ಮಾಡಿದರೂ ಸಹಿಸಿ ಕೊಂಡು ಅವಳಾಟಕ್ಕೆ ಸಹಕರಿಸುತ್ತಿತ್ತು.

ತಂಗಿಯನ್ನು ಶಾಲೆಗೆ ಹಾಕಿದರು. ಆದರೆ ಅವಳ ಆಟೋಟಗಳು ಚೇಷ್ಟೆ ಏನೂ ಕಮ್ಮಿಯಾಗಲೇ ಇಲ್ಲ.

ಸಂಕ್ರಾಂತಿಯಲ್ಲಿ ಹಬ್ಬದ ಮರುದಿನ ನಮ್ಮಲ್ಲಿ 'ಬೊಂಬೆ ಎಳ್ಳು ಬೀರುವುದು' ಪದ್ಧತಿ. ತಂಗಿಗೆ ರೇಷ್ಮೆ ಲಂಗ ಹಾಕಿ ಎರಡು ಜಡೆ ಹೆಣೆದು ಶೃಂಗಾರ ಮಾಡುತ್ತಿದ್ದರು. ಅವಳು ಒಂದು ಅಂದದ, ಕಣ್ಣು ಮುಚ್ಚಿ ತೆರೆಯುತ್ತಿದ್ದ, ಕೈಕಾಲು ಮಡಿಸಲು ಬರುತ್ತಿದ್ದ ಒಂದೂಕಾಲು ಅಡಿ ಉದ್ದದ ಎತ್ತರದ ಗೊಂಬೆಯನ್ನು ಎತ್ತಿಕೊಂಡು ಮುಂದೆ ಹೋಗುತ್ತಿದ್ದಳು. ಅವಳ ಹಿಂದೆ ನಾನೂ ನನ್ನ ತಮ್ಮನೂ ಎಳ್ಳಿನ, ಪೆಪ್ಪರುಮಿಂಟಿನ ಡಬ್ಬಿಯನ್ನು ಹಿಡಿದು ಹೋಗುತ್ತಿದ್ದೆವು. ನಮ್ಮ ಕೇರಿಯ ಪ್ರತಿ ಮನೆಗೂ ಹೋಗಿ, ನಮ್ಮ ಕೈಯಿಂದ ಡಬ್ಬಿಗಳನ್ನು ತೆಗೆದುಕೊಂಡು ಬೊಂಬೆ, ಎಳ್ಳು ಬೀರುವಾಗ ಅವಳ ಗತ್ತೇ ಬೇರೆಯದಾಗಿರುತ್ತಿತ್ತು.

ನವರಾತ್ರಿಯಲ್ಲಿ ಇನ್ನೊಂದು ತೆರನ ಸಂಭ್ರಮ. ಅವಳನ್ನು ಕರೆದುಕೊಂಡು ಮನೆಮನೆಗೂ ಹೋಗಿ, ಅಲ್ಲಿ ಅವರು ಪ್ರದರ್ಶನಕ್ಕೆ ಇಟ್ಟಿದ್ದ ಬೊಂಬೆಗಳನ್ನು ನೋಡಿಕೊಂಡು ಅವರು ಕೊಡುತ್ತಿದ್ದ "ಬೊಂಬೆ ಬಾಗಿನ"ವನ್ನು ತೆಗೆದುಕೊಂಡು ಬಂದು ಮನೆಯಲ್ಲಿ ತಿನ್ನುವುದು ಬೇರೆಯೇ ಮಜಾ ಕೊಡುತ್ತಿತ್ತು..

ನಮ್ಮ ಮನೆಯಲ್ಲೂ ಮರಳಿನಿಂದ ಒಂದು ಬೆಟ್ಟದ ಆಕಾರ ಮತ್ತು ಒಂದು ಉದ್ಯಾನವನದ ಆಕಾರವನ್ನು ಮಾಡಿ ಅಲ್ಲಿ ರಾಗಿ ಪೈರನ್ನು ಬೆಳಸಿ, ಮಧ್ಯದಲ್ಲಿ ಗೊಂಬೆಗಳನ್ನು ಇಡುತ್ತಿದ್ದಲ್ಲದೇ ಪಕ್ಕದಲ್ಲೇ ಮೂರು ಮೆಟ್ಟಲುಗಳನ್ನು ಮಾಡಿ ಅವುಗಳ ಮೇಲೆ ಪಟ್ಟದ ಗೊಂಬೆಯ ಜೊತೆಗೆ ಇತರ ಆಕರ್ಷಕ ಗೊಂಬೆಗಳನ್ನು ಇಡುತ್ತಿದ್ದೆವು. ಬೊಂಬೆಗೆ ಆರತಿ ಮಾಡಿ, ಬಂದ ಮಕ್ಕಳಿಗೆಲ್ಲ ಬೊಂಬೆ ಬಾಗಿನಕ್ಕಾಗಿ ಮಾಡಿದ ತಿಂಡಿಯನ್ನು ಹಂಚುವುದೆಂದರೆ ನನ್ನ ತಂಗಿಗೆ ಬಹಳ ಖುಷಿ ಸಿಗುತ್ತಿತ್ತು.

ಕಾಲ ಉರುಳಿತು. ಅಮ್ಮ ಒಂದು ದಿನ ತಂಗಿ ದೊಡ್ಡವಳಾದಳೆಂದಳು. ತಂಗಿ ಬಹಳ ಬದಲಾಯಿಸಿದಳು. ಚೇಷ್ಟೆ, ಹುಡುಗಾಟ ಮಾಯವಾಯಿತು. ಮಾತು ಕಡಿಮೆಯಾಯಿತು.

ತಂಗಿ ಹೈಸ್ಕೂಲ್ ಪೂರೈಸಿದಳು. ಎಸ್ಸೆಸ್ಸೆಲ್ಸಿ ಪಾಸಾಗಲಿಲ್ಲ. ಅವಳೂ ಮತ್ತೆ ಪ್ರಯತ್ನಿಸಲಿಲ್ಲ.

ಸಮಯ ಮತ್ತೂ ಸರಿಯಿತು. ನನ್ನದು ಪದವಿ ಪರೀಕ್ಷೆ ಮುಗಿಯಿತು. ಬ್ಯಾಂಕಿನಲ್ಲಿ ಕೆಲಸವಾಯಿತು. ಅಜ್ಜಿ ತೀರಿ ಹೋದರು.

ಈಗ ತಂಗಿ ಅಮ್ಮನಿಗೆ ಎಲ್ಲಾ ಕೆಲಸದಲ್ಲೂ ಸಹಾಯ ಮಾಡುತ್ತಿದ್ದಳು. ಮನೆಯ ಎಲ್ಲ ಕೆಲಸಗಳಲ್ಲಿ ತನ್ನನ್ನು ತೊಡಗಿಸಿ ಕೊಳ್ಳುತ್ತಿದ್ದಳು. ಅಮ್ಮ ತಿಂಗಳ ರಜೆ ಮಾಡಿದಾಗ ನಾನು ಎಲ್ಲರಿಗೂ ತಿಂಡಿ ಮಾಡಿಕೊಟ್ಟು ಆಫೀಸಿಗೆ ಹೋಗುತ್ತಿದ್ದೆ. ಆ ವೇಳೆಗೆ ಸುಧಾ ಸ್ನಾನ ಮಾಡಿ ಬಂದು ಅಡುಗೆ ಮಾಡುವ ಕೆಲಸ ವಹಿಸಿಕೊಳ್ಳುತ್ತಿದ್ದಳು.

ಸುಧಾಳ ಮನಸ್ಸಷ್ಟೇ ಕೈಯೂ ದೊಡ್ಡದು. ಅಮ್ಮ ರಜೆಯಿದ್ದರೆ ಅವಳು ರಾತ್ರಿಯೂ ಎಲ್ಲರಿಗೂ ಬಡಿಸಿ ನಂತರ ಊಟ ಮಾಡುತ್ತಿದ್ದಳು. ಬಡಿಸುವಾಗ ಪ್ರೀತಿಯಿಂದ ಒತ್ತಾಯ ಮಾಡಿ ಎಲ್ಲರಿಗೂ ಬಡಿಸುತ್ತಿದ್ದಳು. ಒಂದು ದಿನ ನನ್ನ ಊಟವಾದ ಮೇಲೆ ಅವಳು ಊಟ ಮಾಡುವಾಗ ಅಡುಗೆ ಮನೆಗೆ ಏತಕ್ಕೋ ಹೋದೆ. ನೋಡಿದರೆ ಅವಳು ಅವಲಕ್ಕಿ ಮೊಸರು ಕಲಸಿಕೊಳ್ಳುತ್ತಾ ಇದ್ದಳು. ಸಂಕಟವಾಯಿತು. 'ಯಾಕೆ ಹೀಗೆ ಮಾಡಿದೆ. ನಮಗೆಲ್ಲಾ ಬಲವಂತ ಮಾಡಿ ಹೆಚ್ಚು ತಿನ್ನಿಸಿ ನಿನಗೇ ಅಡುಗೆ ಉಳಿಯದಂತೇಕೆ ಮಾಡಿಕೊಂಡೆ." – ಎಂದೆ.

"ಏ ನನಗೂ ಅಡುಗೆ ಇದೆ. ಸಾಲದಕ್ಕೆ ಮೊಸರವಲಕ್ಕಿ ತಿನ್ನುತ್ತೇನೆ. ಅದು ನನಗೆ ಬಹಳ ಇಷ್ಟ" ಅಂದಳು. ಮಾತನಾಡಿದರೆ ಉಪಯೋಗವಿಲ್ಲವೆನ್ನಿಸಿತು. ಅಂದಿನಿಂದ ನಾನು ಊಟ ಮಾಡುವಾಗ ಮನೆಯ ಅಡುಗೆ ಪಾತ್ರೆಯನ್ನೂ ಗಮನಿಸುವುದನ್ನು ಅಭ್ಯಾಸ ಮಾಡಿಕೊಂಡೆ. ಒಂದು ವೇಳೆ ತಯಾರಿಸಿದ ಅಡುಗೆ ಕಮ್ಮಿ ಬೀಳುತ್ತದೆ ಎನಿಸಿದರೆ ಇದ್ದುದ್ದನ್ನು ಎಲ್ಲರೂ ಹಂಚಿ ಕೊಂಡು ತಿಂದರೆ ಆಯಿತು ಎನ್ನುವುದು ನನ್ನ ಅಭಿಪ್ರಾಯ.

ಈಗಲೂ ಪಾತ್ರೆ ನೋಡುವ ಅಭ್ಯಾಸ ಉಳಿದಿದೆ. ನನ್ನಾಕೆ 'ನೀವು ಪಾತ್ರೆ ನೋಡುವುದನ್ನು ಬಿಟ್ಟು ನಿಮಗೆಷ್ಟು ಬೇಕೋ ಅಷ್ಟು ಹಾಕಿಸಿಕೊಂಡು ಊಟ ಮಾಡಿ ಎದ್ದು ಹೋಗಿ' ಎಂದು ಪ್ರೀತಿಯಿಂದ ಗದರುತ್ತಾಳೆ. ಈ ಅಭ್ಯಾಸ ಹಳೆಯದು ಮತ್ತು ನನ್ನ ತಂಗಿಯ ಕಾರಣ ಬೆಳಸಿಕೊಂಡದ್ದು ಎಂಬುದು ಅವಳಿಗೆ ಈವರೆಗೂ ತಿಳಿದಿಲ್ಲ.

ಇಂತಹ ನಿರ್ಮಲ ಅಂತಃಕರಣದ ತಂಗಿಯ ಮದುವೆಗೆ ವರನ ಹುಡುಕಾಟ ಆರಂಭವಾಯಿತು.

ನನ್ನ ಚಿಕ್ಕಮ್ಮ, ಚಿಕ್ಕಪ್ಪ ಅವರಿಗೆ ಪರಿಚಯದವರ ಮಗನೊಬ್ಬ ವರನಿದ್ದಾನೆಂದು ತಿಳಿಸಿದರು. ವರ ಇಂಜಿನಿಯರಿಂಗ್ ಮುಗಿಸಿ ಬೆಂಗಳೂರಿನ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕನಾಗಿದ್ದ. ಅವರಿಬ್ಬರ ನಡುವೆ ವಯಸ್ಸಿನ ಅಂತರ ತುಸು ಹೆಚ್ಚೇ ಇತ್ತು.

ಹುಡುಗ ನೋಡಲು ಚೆನ್ನಾಗಿದ್ದ. ತಂಗಿಯನ್ನು ಅವನೂ ಒಪ್ಪಿದ. ತಂಗಿಯೂ ಅವನನ್ನು ಒಪ್ಪಿದಳು.

ಹುಡುಗನ ಕಡೆಯವರದು ಒಂದೇ ಒಂದು ಬೇಡಿಕೆ. ಅದೆಂದರೆ ಬೆಂಗಳೂರಿನಲ್ಲೇ, ಅದೂ ಆಗಿನ ಕಾಲಕ್ಕೆ ಹೆಸರುವಾಸಿಯಾಗಿದ್ದ ಕುಚಲಾಂಬ ಛತ್ರದಲ್ಲೇ ಮದುವೆ ಮಾಡಿಕೊಡಬೇಕು ಎಂಬುದು. ನಮ್ಮಪ್ಪ ಒಪ್ಪಿ ಕೊಂಡರು.

ಆಗೆಲ್ಲ ಈಗಿನಂತೆ ಮದುವೆ ಗುತ್ತಿಗೆದಾರರು/ಈವೆಂಟ್ ಮ್ಯಾನೇಜರುಗಳು ಇರಲಿಲ್ಲ. ಊರಿಂದ ಊರಿಗೆ ಬಂದು ಮದುವೆ ಮಾಡುವುದು ಸಾಧಾರಣದ ಮಾತಾಗಿರಲಿಲ್ಲ.

ಪುಣ್ಯಕ್ಕೆ ಆ ವೇಳೆಗೆ ನಾನು ಬಡ್ತಿಯಾಗಿ ಬೆಂಗಳೂರಿಗೇ ಬಂದಿದ್ದೆ. ನಮ್ಮ ದೊಡ್ಡಪ್ಪನವರ, ಅವರ ಅಳಿಯಂದಿರೊಬ್ಬರ ಮತ್ತು ಇನ್ನೊಬ್ಬ ಬಂಧುಗಳ ಸಹಾಯದಿಂದ ಮದುವೆ ಮಾಡಿದೆವು. ನಮ್ಮ ಮಟ್ಟಕ್ಕೆ ಮದುವೆ ಅದ್ದೂರಿಯಾಗಿಯೇ ಆಯಿತೆಂದು ಎಲ್ಲರೂ ಹೇಳಿದರು. ವರನ ಕಡೆಯವರೂ ಸಂತೋಷಗೊಂಡಿದ್ದರು.

ನಮ್ಮ ತಂಗಿ ಅವರ ಮನೆ ತುಂಬಿದಳು. ಅವರದು ಒಟ್ಟು ಕುಟುಂಬ. ಅತ್ತೆ ಮಾವ ಮೂರು ಗಂಡು ಮಕ್ಕಳು, ಅತ್ತೆಯ ತಂಗಿ ಮತ್ತು ಅವರ ಮೂರು ಹೆಣ್ಣು ಮಕ್ಕಳೂ ಇವರೊಂದಿಗೆ ಇದ್ದರು. ತುಂಬು ಸಂಸಾರ.

ಅವಳ ಅತ್ತೆಗೆ ಅರೋಗ್ಯ ಅಷ್ಟಕ್ಕಷ್ಟೇ. ಮಾವ ಪ್ರಾಂಶುಪಾಲರಾಗಿದ್ದವರು. ಬಹಳ ಖಡಕ್ ಮನುಷ್ಯ. ನಿವೃತ್ತಿಯ ನಂತರವೂ ದುಡಿಯುತ್ತಿದ್ದರು. ಭಾವನ ಕೊನೆಯ ತಮ್ಮ ಎಂಬಿಬಿಎಸ್ ಮುಗಿಸಿ ಎಂಡಿ ಮಾಡುತ್ತಿದ್ದರು. ಇವರಿಬ್ಬರ ಮಧ್ಯದ ತಮ್ಮನಿಗೆ ಅರೋಗ್ಯ ಸ್ವಲ್ಪ ಅಷ್ಟಕ್ಕಷ್ಟೇ ಇತ್ತು. ಅವರಿಗಾಗಿ ಮನೆಯಲ್ಲೇ ಒಂದು ಅಂಗಡಿ ಮಾಡಿದರು.

ಇಂತಹ ತುಂಬು ಕುಟುಂಬದಲ್ಲಿ ನನ್ನ ತಂಗಿ ತನ್ನ ಸಂಸಾರ ಶುರು ಮಾಡಿದಳು. ತನ್ನ ನಿರ್ಮಲ ಮನಸ್ಸು, ತಾಳ್ಮೆ, ಅವರೆಲ್ಲರೂ ನನ್ನವರೆಂಬ ಭಾವದಿಂದ ಅಲ್ಲಿ ಎಲ್ಲರಿಗಾಗಿ ದುಡಿದಳು.

ಅವಳಿಗೂ ಒಬ್ಬಳು ಮಗಳು ಹುಟ್ಟಿದಳು.

ಭಾವನ ಚಿಕ್ಕಮ್ಮನ ಮೂರೂ ಹೆಣ್ಣು ಮಕ್ಕಳ ಮದುವೆ, ಅವರುಗಳ ಬಾಣಂತನವನ್ನೂ ನಗುನಗುತ್ತಲೇ ಮಾಡಿದಳು. ನಮ್ಮ ಭಾವನ ಚಿಕ್ಕಮ್ಮ ಯಾವಾಗ ನಮ್ಮ ಅಮ್ಮನನ್ನು ಕಂಡರೂ, ನನ್ನ ತಂಗಿಯನ್ನು ತುಂಬು ಕಂಠದಿಂದ ಹೊಗಳಿ "ನಿಮ್ಮ ಮಗಳು ನಮ್ಮ ಮನೆ ಸೇರಿದ್ದಕ್ಕೆ ನಾನು ಬಚಾವಾದೆ" ಎನ್ನುತ್ತಿದ್ದರು. ಭಾವನ ಚಿಕ್ಕಮ್ಮನ ಹೆಣ್ಣು ಮಕ್ಕಳಿಗೂ ತಂಗಿಯನ್ನು ಕಂಡರೆ ಅತೀವ ವಿಶ್ವಾಸ, ಪ್ರೀತಿ.

ಭಾವನ ತಮ್ಮನಿಗೂ ಮದುವೆ ಮಾಡಿದರು. ಆಕೆ ಮನೆ ಕೆಲಸಕ್ಕೆ ಸ್ವಲ್ಪ ಸಹಾಯಮಾಡಿ ಮಿಕ್ಕಂತೆ ಗಂಡನ ಅಂಗಡಿಯನ್ನು ನೋಡಿಕೊಳ್ಳುತ್ತಿದ್ದರು. ಅವರಿಗೆ ಒಂದು ಗಂಡು ಮಗುವಾಯಿತು.

ಈ ಕುಟುಂಬದ ಎಲ್ಲ ಮಕ್ಕಳೂ ತಂಗಿಯನ್ನು "ಸುಧಾ ಮಮ್ಮಿ" ಎಂದೇ ಕರೆಯುತ್ತಿದ್ದರು.

ಭಾವನ ಕೊನೆಯ ತಮ್ಮ ಡಾಕ್ಟರಿಗೂ ಮದುವೆಯಾಯಿತು. ಆ ಹುಡುಗಿಗೆ ತುಂಬು ಕುಟುಂಬದ ಸನ್ನಿವೇಶ ಹೊಂದಲಿಲ್ಲ. ಅನೇಕ ರೀತಿಯ ಕಿರಿಕಿರಿ ಉದ್ಭವವಾಯಿತು. ತಂಗಿ ಎಲ್ಲವನ್ನೂ ನಗುನಗುತ್ತಲೇ ಸಹಿಸಿ ಕೊಂಡು ತನ್ನ ಕರ್ತವ್ಯ ಮಾಡುತ್ತಲೇ ಇದ್ದಳು.

ಡಾಕ್ಟರನ ಹೆಂಡತಿಗೆ ಅವಳಿಜವಳಿ ಗಂಡು ಮಕ್ಕಳಾದವು. ಭಾವನ ಚಿಕ್ಕಮ್ಮನ ಮಕ್ಕಳು ಮದುವೆಯಾಗಿ ಮನೆ ಬಿಡುವವರೆಗೆ, ಮೈದುನನಂದಿರ ಮೂರು ಮಕ್ಕಳು. ತನ್ನದೇ ಮಕ್ಕಳು ಎಂಬಂತೆ ಅವುಗಳನ್ನು ತಂಗಿ ನೋಡಿಕೊಂಡಳು. ಒಂದು ದಿನಕ್ಕೂ ಬೇಸರಿಸದೆ, ಸಿಡುಕದೆ ಆ ಮನೆಯ ಎಲ್ಲರ ಒಳಿತಿಗಾಗಿ ದುಡಿದಳು.

ತಂಗಿಯ ಮಗಳು ಇಂಜಿನಿಯರಾದಳು. ಅವಳ ಮದುವೆಯೂ ಆಯಿತು. ಮಗಳು ಅಮ್ಮನಿಗೆ ಸಹಾಯವಾಗಿದ್ದಳು. ಇವಳ ದುಡಿಮೆಯ ತ್ಯಾಗದ ಅರಿವು ಅಳಿಗಿತ್ತು. ಅವಳಿಗೂ ಒಂದು ಹೆಣ್ಣು ಮಗುವಾಯಿತು. ಅವಳ ಬಾಣಂತನವನ್ನೂ ಮಾಡಿದಳು.

ಕಾಲ ಓಡುತ್ತಲೇ ಇತ್ತು. ತಂಗಿಯ ಅತ್ತೆ ತೀರಿಕೊಂಡರು. ಡಾಕ್ಟರನ ಹೆಂಡತಿ, ಕಡೆಗೂ ತನ್ನ ಹಠ ಸಾಧಿಸಿ ಬೇರೆ ಮನೆ ಮಾಡಿಯೇ ಬಿಟ್ಟಳು. ಭಾವನಿಗೂ, ಅವರ ತಂದೆಗೂ ಈಗ ನನ್ನ ತಂಗಿಯ ದೊಡ್ಡ ಮನಸ್ಸಿನ ಅರಿವಾದಂತೆ ಕಂಡಿತು.

ಭಾವನ ಮೊದಲ ತಮ್ಮನ ಮಗನೂ ಇಂಜಿನಿಯರಿಂಗ್ ಮುಗಿಸಿದ. ಅವನ ಮದುವೆಯೂ ಆಯಿತು. ಆ ಹುಡುಗಿಯೂ ಇಂಜಿನಿಯರಿಂಗ್ ಮುಗಿಸಿ ಬೆಂಗಳೂರಿನಲ್ಲೇ ಕೆಲಸದಲ್ಲಿದ್ದಳು. ಬೇರೆ ಹೋಗಿದ್ದ ಡಾಕ್ಟರನ ಅವಳಿಜವಳಿ ಮಕ್ಕಳಲ್ಲಿ ಒಬ್ಬ ಎಂಬಿಬಿಎಸ್ ಮಾಡಿದ, ಮತ್ತೊಬ್ಬ ಇಂಜಿನಿಯರನಾದ.

ಎಲ್ಲವೂ ಚೆನ್ನಾಗಿತ್ತು. ಕಾಲಕ್ಕೆ ಅದು ಇಷ್ಟವಾಗಲಿಲ್ಲವೇನೋ. ಭಾವನವರಿಗೆ ಹೃದಯದ ಬೈಪಾಸ್ ಶಸ್ತ್ರಚಿಕಿತ್ಸೆ ಆಯಿತು. ತಂಗಿ ಮತ್ತು ಮಗಳು ಅವರನ್ನು ಜೋಪಾನವಾಗಿ ನೋಡಿಕೊಂಡರು.

ಭಾವನ ತಂದೆಯವರು ವಯೋಸಹಜ ಕಾರಣಗಳಿಂದ ಕಾಲವಾದರು. ಅವರ ದಹನಕ್ರಿಯೆಯಷ್ಟೇ ನಡೆಸಲು ಸಾಧ್ಯವಾಗಿದ್ದು. ಕಾರಣ ಭಾವನವರ ತಮ್ಮ (ಅಂಗಡಿ ಇಟ್ಟಿದ್ದವರು), ಅವರ ಮಗ ಮತ್ತು ನನ್ನ ತಂಗಿಗೆ ಕೊರೋನಾ ಅಂಟಿಕೊಂಡಿತು.

ಭಾವನ ತಮ್ಮ ಮತ್ತು ನನ್ನ ತಂಗಿಯನ್ನು ಆಸ್ಪತ್ರೆಗೆ ಸೇರಿಸಲಾಯ್ತು. ಭಾವನ ತಮ್ಮನ ಮಗ ಕೋವಿಡ್ ಕೇರ್ ಸೆಂಟರಿನಲ್ಲಿದ್ದು ಗುಣವಾಗಿ ಬಂದ. ಭಾವನ ತಮ್ಮ ಕೋವಿಡ್ ಗೆ ಬಲಿಯಾದರು.

ತಂಗಿ ಆಸ್ಪತ್ರೆಯಲ್ಲಿ ಚೇತರಿಸಿಕೊಂಡು ಗುಣಮುಖಳಾಗಿ ಮನೆಗೆ ಬಂದಳು. ತಂಗಿಯ ಮಾವನವರ ಮತ್ತು ಭಾವನವರ ತಮ್ಮನ ಉತ್ತರ ಕ್ರಿಯೆಗಳನ್ನು ಪುರೋಹಿತರೊಬ್ಬರಿಂದ ಮಾಡಿಸಿದರು.

ಸಂಸಾರ ಹೇಗೋ ಸಾಗುತ್ತಿತ್ತು. ಇದ್ದಕ್ಕಿದ್ದ ಹಾಗೆ ಒಂದು ಬೆಳಗಿನ ಜಾವ ತಂಗಿಗೆ ಉಸಿರಾಡಲು ಕಷ್ಟವಾಯಿತು. ಎದ್ದು ಬಂದು ಹೀಗಾಗುತ್ತಿದೆಯೆಂದು ಹೇಳಿದಳು. ಡಾಕ್ಟರಿಗೆ ಫೋನ್ ಮಾಡಿ ತಿಳಿಸಿ ಅವರು ಬರುವುದರೊಳಗೆ ನನ್ನ ತಂಗಿ ಹೊರಟೇ ಬಿಟ್ಟಳು.– – ಡಾಕ್ಟರೂ ಸೇರಿ ಯಾರ ಸೇವೆಗೂ ಕಾಯಲೇ ಇಲ್ಲ.

ಮಗಳಿಗೆ ತಿಳಿಸಿದರು. ಅವಳು ನಮಗೆ ತಿಳಿಸಿದಳು. ನಾವು ಅಣ್ಣತಮ್ಮಂದಿರು ಅಮ್ಮನನ್ನೂ ಕರೆದುಕೊಂಡು ತಂಗಿಯ ಮನೆಗೆ ಹೋದೆವು.

ಶಾಂತವಾಗಿ ನಿದ್ರಿಸುತ್ತಿರುವಂತೆ ಚಿರ ನಿದ್ರೆಯಲ್ಲಿದ್ದಳು. ದುಃಖ ತಡೆಯಲಾಗಲಿಲ್ಲ. "ನಮ್ಮಣ್ಣ – ನಮ್ಮಣ್ಣ" ಎಂದು ಕಕ್ಕುಲತೆಯಿಂದ ನನ್ನನ್ನು ಕಾಣುತ್ತಿದ್ದ ನನ್ನ ತಂಗಿ ಎಲ್ಲರನ್ನೂ ಬಿಟ್ಟು ಹೋಗಿದ್ದಳು.

ಶವ ವಾಹನ ಬಂದಿತು. ದಹನ ಕ್ರಿಯೆ, ಉತ್ತರಕ್ರಿಯೆ ಯಾರು ನಡೆಸಬೇಕೆಂಬ ಚರ್ಚೆ ಎದ್ದಿತು.

ಭಾವ ಅವರ ಅನಾರೋಗ್ಯದ ಕಾರಣ ಮುಂದಿಟ್ಟರು. ತಂಗಿಯ ಡಾಕ್ಟರ್ ಮೈದುನನ್ನೂ ಮತ್ತು ತಂಗಿಯ ಇನ್ನೊಬ್ಬ ಮೈದುನನ ಮಗನನ್ನೂ ನನ್ನ ತಂಗಿಯ ಮಗಳು ಬೇಡಿಕೊಂಡಳು. ತಂಗಿಯ ಡಾಕ್ಟರ್ ಮೈದುನ ತಾನು ಕೇವಲ ದಹನಕ್ರಿಯೆಯಷ್ಟನ್ನೇ ಮಾಡುವುದಾಗಿಯೂ, ಮುಂದಿನ ಉತ್ತರಕ್ರಿಯಾ ಸಂಸ್ಕಾರಗಳನ್ನು ಮಾಡುವುದಿಲ್ಲವೆಂದು ಹೇಳಿಯೇಬಿಟ್ಟರು. ತಂಗಿಯ ಇನ್ನೊಬ್ಬ ಮೈದುನನ ಮಗ ಮಾತೇ ಆಡಲಿಲ್ಲ.

“ನಿಮ್ಮ ಮನೆಯವರಿಗೆ ನನ್ನ ತಂಗಿಯ ಉತ್ತರ ಕ್ರಿಯೆಗಳನ್ನು ಮಾಡುವ ಅಧಿಕಾರವಿದೆ. ನಿಮಗೇ ಮೊದಲ ಪ್ರಾಶಸ್ತ್ಯ. ನೀವುಗಳು ಮಾಡುವುದಿಲ್ಲವೆಂತಾದರೆ ನಾವು ಮಾಡುತ್ತೇವೆ” ಎಂದೆ. ನನ್ನ ಕೊನೆಯ ತಮ್ಮ ಮುಂದೆ ಬಂದು ನಾನು ಮಾಡುತ್ತೇನೆಂದ. ಅದಕ್ಕೆ ಭಾವನ ಮನೆಯವರು ಒಪ್ಪಿದರು.

೩೮ ವರ್ಷಗಳ ಕೆಳಗೆ ನನ್ನ ಪ್ರೀತಿಯ ತಂಗಿಯನ್ನು ಯಾವ ಮನೆಗೆ ಒಪ್ಪಿಸಿಕೊಟ್ಟು ಬಂದಿದ್ದೆನೋ, ಅದೇ ಮನೆಯಿಂದ ಅವಳನ್ನು ಪರಲೋಕಕ್ಕೆ ಕಳಿಸಲೂ ನಾನೇ ಹೋಗಿದ್ದೆ.

ಯಾವ ನನ್ನ ತಂಗಿ ೩೮ ವರ್ಷಗಳ ಕಾಲ ಗಂಡನ ಮನೆಯ ಎಲ್ಲರನ್ನೂ ತನ್ನವರೆಂದುಕೊಂಡು, ಪ್ರೀತಿಯಿಂದ ಎಲ್ಲರನ್ನೂ ನೋಡಿಕೊಂಡು, ಎಲ್ಲರಿಗಾಗಿ ತನ್ನ ಜೀವ ಸವೆಸಿದಳೋ ಅಂತಹ ನನ್ನ ತಂಗಿಯ ಉತ್ತರಕ್ರಿಯೆ ನಡೆಸಲೂ ಹಿಂಜರಿಯುವ ಮನೋಭಾವದವರನ್ನು ಏನೆಂದು ಕರೆಯಬೇಕು?

ಇದ್ದಾಗ ಚೆನ್ನಾಗಿ ನೋಡಿಕೊಂಡರೆ ಆಯಿತು. ಸತ್ತ ಮೇಲೆ ಏನೂ ಮಾಡಬೇಕಿಲ್ಲ ಎಂಬ ಭಾವನೆ ಈ ಕಾಲದಲ್ಲಿ ಹೆಚ್ಚಾಗುತ್ತಿದೆ.

ಇದ್ದಾಗ ಚೆನ್ನಾಗಿ ನೋಡಿಕೊಂಡರೆ ಬಾಂಧವ್ಯದ ಋಣ ಮುಗಿಯಿತೇ?

ಸಾಕು ಪ್ರಾಣಿಗಳನ್ನೂ ನೋಡಿಕೊಳ್ಳುತ್ತೇವೆ. ಸತ್ತ ಮೇಲೆ ಮಣ್ಣು ಮಾಡುತ್ತಾರೆ. ಮಾನವ ಸಂಬಂಧಗಳು ಸಹ ಇಷ್ಟೇಯೇ ! ಅಥವಾ ಅವು ಬೇರೆಯೇ ನೆಲೆಯಲ್ಲಿ ನಿಲ್ಲುತ್ತವೆಯೇ?

ಬೇರೆ ಮನೆಯಿಂದ ಬಂದು, ನಮ್ಮವರನ್ನು ತನ್ನವರೆಂದುಕೊಂಡು ನಮಗಾಗಿ ದುಡಿಯುವ ಜೀವವೊಂದನ್ನು ಸತ್ತ ನಂತರವೂ ಕೃತಜ್ಞತೆಯಿಂದ ಸ್ಮರಿಸಿ ಉತ್ತರಕ್ರಿಯೆಗಳನ್ನು ಮಾಡಬಾರದೆ?

ಹೆಣ್ಣು ಮಕ್ಕಳು ತಮ್ಮ ಹಿರಿಯರ ಉತ್ತರಕ್ರಿಯೆ ಏಕೆ ಮಾಡಬಾರದು?

ಈ ಎಲ್ಲ ಪ್ರಶ್ನೆಗಳೂ ನನಗೆ ಶೇಷಪ್ರಶ್ನೆಗಳಾಗಿಯೇ ಉಳಿದಿವೆ.

ಹನಿಗವನಗಳು

ಅಜ್ಜಿ ಹೇಳಿದ್ದು

ಪುಟ್ಟೀ
ನಿನಗೆ
ಬಾಯ್ ಫ್ರೆಂಡ್ಸ್
ಇರುವಂತೆ
ನನಗೂ ಇದ್ದಾರೆ
ರಮಾ ಬಾಯ್
ಉಮಾ ಬಾಯ್
ಮೀರಾ ಬಾಯ್

ಪತಿವ್ರತೆ

ನನ್ನಾಕೆ ಥೇಟ್
ಪತಿವ್ರತೆ
ದಿನಾ ಕಾಯುತ್ತಾಳೆ
ನನಗಾಗಿ
ಕಾರಣ
ನಾನೇ ಅಡಿಗೆ
ಮಾಡಬೇಕು

- **ಜಿಬಿಕೋಟೆ ಅನಂತ್**

–

ಪ್ರವಾಸಾನುಭವ

ಸುಖಾಂತ್ಯ ಕಂಡ ರೈಲು ಪ್ರಯಾಣದೊಳಗಿನ ಪ್ರಯಾಸಗಳು

– ಸ್ನೇಹಲತಾ ಮೋಡಕ್

ಸಾಮಾನ್ಯವಾಗಿ ಪ್ರಯಾಣ ಸುಖಕರವಾಗಲಿ ಎಂದು ಹಾರೈಸುವುದು ವಾಡಿಕೆ.

ಒಂದು ಸರ್ತಿ ಮಹಾರಾಷ್ಟ್ರದ ರತ್ನಾಗಿರಿಗೆ ನಮ್ಮ ನಾದಿನಿ ಮನೆಗೆ ಹೋಗಿದ್ದೆವು. ಅಲ್ಲಿಂದ ಬರಬೇಕಾದರೆ ನಮ್ಮ ಬಂಧು ಮಿತ್ರರ ಅಪೇಕ್ಷೆಯಂತೆ ಸುಪ್ರಸಿದ್ಧ ಅಲ್ಫೋನ್ಸೋ ಮಾವಿನ ಹಣ್ಣುಗಳನ್ನೂ ಕೈಗೊಂದರಂತೆ ಮೂರು ಜನ ಆರು ಪೆಟ್ಟಿಗೆಗಳನ್ನು ತಂದಿದ್ದೆವು. ರೈಲ್ವೆ ಸ್ಟೇಶನ್‌ನಲ್ಲಿ ಸ್ವಲ್ಪ ಕಷ್ಟ. ಅದು ಬಿಟ್ಟರೆ ನಾವೇನೂ ಹೊರಬೇಕಾಗಿಲ್ಲ. ರತ್ನಾಗಿರಿ-ಗೋವಾ ಒಂದು ರೈಲು, ಗೋವಾದಿಂದ ಬೆಂಗಳೂರು ಇನ್ನೊಂದು ರೈಲು ಅಷ್ಟೇ. ಸಣ್ಣ ಪ್ರಾಯ ಬೇರೆ ಆಗ. ಮಧ್ಯಾಹ್ನ ರತ್ನಾಗಿರಿಯಿಂದ ರೈಲನ್ನು ಹತ್ತಿ ಕುಳಿತ ಮೇಲೆ ಟಿ.ಟಿ. ಬಂದು ಟಿಕೇಟ್ ವೀಕ್ಷಿಸತೊಡಗಿದ. ಆಮೇಲೆ ಗೋವಾ ತನಕ ನಾವೇ, ನಮ್ಮದೇ ರೈಲು.

ಆ ರೈಲಿನಲ್ಲಿ ಒಬ್ಬ ವಿದೇಶಿ ಪ್ರಜೆ ಇದ್ದ. ಅವನೋ ಮದ್ಯ ಬೇರೆ ಸೇವಿಸಿದ್ದ. ಬೋಗಿಗಳ ತುಂಬಾ ಓಡಾಡಿ ಟಿಕೇಟು ತಗೊಳ್ಳದೇ ಟಿಟಿಗೇ ಚಳ್ಳೆ ಹಣ್ಣು ತಿನ್ನಿಸ್ತಾ ಇದ್ದ. ಪ್ರಯಾಣ ಹೀಗೆ ಮುಂದುವರೆದಿತ್ತು. ಇನ್ನೇನು ಗೋವಾ ಹತ್ತಿರ ಬರುತ್ತಿದ್ದಂತೆ, ನಾವಿದ್ದ ರೈಲು ತುಂಬಾ ಹೊತ್ತು ನಿಂತೇ ಇತ್ತು. ಸುಮಾರು ಅರ್ಧ ಗಂಟೆ, ಒಂದು ಗಂಟೆ ಎರಡು ಗಂಟೆ! ಯಾಕೆಂದು ನೋಡಿದರೆ ಆಮೇಲೆ ಗೊತ್ತಾಯಿತು. ಆ ವಿದೇಶಿ ಪ್ರಜೆ ಹೃದಯಸ್ಥಂಭನದಿಂದ ತನ್ನ ಜೀವನದ ಪಯಣವನ್ನೇ ಮುಗಿಸಿದ್ದ. ಆಯಿತು. ವಿದೇಶಿ ಪ್ರಜೆ ಬೇರೆ. ಪೋಸ್ಟ ಮಾರ್ಟಂ, ಪೋಲೀಸ್, ತನಿಖೆ ...... ಒಂದೇ ಎರಡೇ .... ಮಧ್ಯದಲ್ಲಿ ಅಂತೆಕಂತೆ ಕಥೆಗಳು ಬೇರೆ. ನಾವಿನ್ನೂ ಗೋವಾ ತಲುಪಬೇಕು. ಗೋವಾದಿಂದ ಬೆಂಗಳೂರು ಟ್ರೈನ್ ಹತ್ತಬೇಕು. ಮರುದಿನ ಆಫೀಸಿಗೆ ಬೇರೆ ಹೋಗಬೇಕು. ಬಸ್ಸಲ್ಲಿ ಹೋಗೋಣ ಎಂದರೆ ಬಸ್ ನಿಲ್ದಾಣ ಬೇರೆ ಹತ್ತಿರವಿಲ್ಲ. "ಅತ್ತ ದರಿ ಇತ್ತ ಪುಲಿ" ನಮ್ಮ ಲಗೇಜು, ಮಾವಿನ ಹಣ್ಣುಗಳ ಪೆಟ್ಟಿಗೆಗಳು ಬೇರೆ ಸಾಲದ್ದಕ್ಕೆ. ಗೊತ್ತಿಲ್ಲದ ಊರು. ಮೂರುಸಂಜೆ. ದೇವರೇ ಗತಿ. ಸಂಕಟ ಬಂದಾಗ ವೆಂಕಟರಮಣ, ವಿಷ್ಣು ಸಹಸ್ರನಾಮ, ರಾಮರಕ್ಷಾ ಎಲ್ಲವೂ ಆಯಿತು. ಅಂತೂ ನನ್ನ ತಪಸ್ಸಿನ ಫಲವೋ ಏನೋ ರೈಲು ೪ ಗಂಟೆ ತಡವಾಗಿ ಗೋವಾ ತಲುಪಿತು. ನಾವೂ ಗೋವಾದಿಂದ ತಡವಾಗಿ ಹೊರಡುವ ರೈಲನ್ನೇ ಬುಕ್ ಮಾಡಿದ್ದರಿಂದ ಏನೋ ಬೆಂಗಳೂರಿಗೆ ಬರುವ ರೈಲು ನಮ್ಮ ಬರುವಿಕೆಯನ್ನೇ ಕಾಯುತ್ತಿತ್ತು. ಅಷ್ಟೊತ್ತಿಗೆ ಹೊಟ್ಟೆಯಲ್ಲಿ ತಾಳ, ತಳಮಳ. ಮಾವಿನ ಹಣ್ಣುಗಳನ್ನಾದರೂ ತಿನ್ನೋಣ ಎಂದರೆ ಅವು ಇನ್ನೂ ಕಾಯಿ ಕಾಯಿ ಹುಳಿ. ಬರೀ ಬಿಸ್ಕಿಟ್ ತಿಂದು ಮಲಗಿ ಬೆಳಗ್ಗೆ ಬೆಂಗಳೂರು ತಲುಪಿದ್ದಾಯಿತು.

ಇನ್ನೊಮ್ಮೆ. ಬೆಂಗಳೂರಿನಿಂದ ಹುಬ್ಬಳ್ಳಿಗೆ ಹೋಗಬೇಕಾದಾಗ ರೈಲು ಲೆವೆಲ್ ಕ್ರಾಸಿಂಗಲ್ಲೇ ನಿಂತಿದೆ. ಸಾಧಾರಣವಾಗಿ ಗಂಡಸರಿಗೆ ರೈಲು ನಿಂತಾಗ ಸಮಯವಿದ್ದರೆ ಕೆಳಗೆ ಇಳಿಯುವ ಅಭ್ಯಾಸ. ನಮ್ಮ ಎದುರಿನ ಸೀಟಿನಲ್ಲಿದ್ದವರೂ ಕೆಳಗೆ ಇಳಿದು ಬಿಟ್ಟಿದ್ದರು. ರೈಲು ಹೊರಟು ಸುಮಾರು ೧೦ ನಿಮಿಷಗಳಾದರೂ ಅವರು ಬರದಿದ್ದಾಗ ಅವರ ಹೆಂಡತಿಯ ಚಡಪಡಿಕೆ ಯಾರಿಗೂ ಬೇಡ. ಅವರು ಅಳಲಾರಂಭಿಸಿದರು. ಅವರ ಜತೆ ನಮಗೂ ಅಳು ಬರುತ್ತಿತ್ತು. ಅರ್ಧ ಗಂಟೆ ನಂತರ ಆ ಮನುಷ್ಯ ಆರಾಮವಾಗಿ

ಬರುತ್ತಿದ್ದಾಗ ಎಲ್ಲಾ ಪ್ರಯಾಣಿಕರಿಗೂ ಆನಂದ ಬಾಷ್ಪ ಬಂತು. ಅವರು ಯಾವುದೋ ಬೋಗಿಯನ್ನು ಹತ್ತಿ ತನ್ನ ಪರಿಚಯದವರಲ್ಲಿ ಉಭಯ ಕುಶಲೋಪರಿ ಮಾತು ಮುಗಿಸಿ ಬಂದಿದ್ದರು. ಮನೆಗೆ ಹೋದಮೇಲೆ ಆ ಬಡಪಾಯಿದ್ದು ಅವಸ್ಥೆಯೇ.. ಬಿಡಿ, ಪಾಪ.

ಪ್ರಸಿದ್ಧ ಕ್ಷೇತ್ರ ಪರಳಿಯಿಂದ ಸ್ವಲ್ಪ ದೂರದಲ್ಲೇ ನಮ್ಮ ಕುಲದೇವರ ದೇವಸ್ಥಾನ. ಪ್ರತಿಸಲದಂತೆ ದೇವರ ನೈವೇದ್ಯ ಮಹಾಪ್ರಸಾದ ತಗೊಂಡು ಬರುವ ಕ್ರಮ. ಆವತ್ತು ಹೊರಗೆ ಹೋಟೇಲಿನಲ್ಲಿ ಊಟ ಮುಗಿಸಿ ಅಲ್ಲಿಂದ ಸುಮಾರು ನಾಲ್ಕು ಗಂಟೆಗಳ ರಸ್ತೆ ಪ್ರಯಾಣದ ನಂತರ ಬಿಜಾಪುರದಿಂದ ರೈಲು ಹತ್ತುವ ಧಾವಂತ. ರಾತ್ರೆ ರೈಲೇನೋ ಹತ್ತಿದೆವು. ಆದರೆ ಊಟ? ಎಲ್ಲೂ ಸಿಗಲೇ ಇಲ್ಲ. ಬಿಸ್ಕಿಟುಗಳೂ ಇಲ್ಲ. ಮೈಯೆಲ್ಲಾ ಹಸಿವೆಯಿಂದ ನಡುಗಲಾರಂಭಿಸಿತ್ತು. ಕೊನೆಗೆ ಇನ್ನೇನು ತಣ್ಣೀರು ಕುಡಿದು ಮಲಗಬೇಕೆನ್ನುವಷ್ಟರಲ್ಲಿ ನಮ್ಮ ಚಡಪಡಿಕೆ ನೋಡದೆ ರೈಲಲ್ಲಿದ್ದ ಕೆಲಸಗಾರನೊಬ್ಬ ಜೋಳದ ರೊಟ್ಟಿ ಪಲ್ಯ ಮತ್ತು ಚಿತ್ರಾನ್ನ ತಂದುಕೊಟ್ಟ. ಆಹಾ! ಮೃಷ್ಟಾನ್ನ ಭೋಜನದ ರುಚಿಯಂತಿತ್ತು. ಬಹುತೇಕ ಅದು ದೇವರ ಪರೀಕ್ಷೆಯೋ ಏನೋ. ಶ್ರೀ ಸತ್ಯನಾರಾಯಣ ಕಥೆಯಲ್ಲಿ ಬರತ್ತಲ್ಲ ಪ್ರಸಾದವನ್ನು ಯಾವತ್ತೂ ಕಡೆಗಣಿಸಬಾರದು ಎಂದು ಅದೇ ನೆನಪಾಯಿತಾಗ. ಅಲ್ಲಿಂದ ಪ್ರಯಾಣ ಸುಖಕರವಾಯಿತೆನ್ನಿ. !

ಒಮ್ಮೆ ಕೊಲ್ಲಾಪುರದಿಂದ ಬೆಂಗಳೂರಿಗೆ ಪ್ರಯಾಣ. ಬೆಳಗಾಂ ತನಕ ನಮ್ಮ ಮುಂದಿನ ಸೀಟಿನಲ್ಲಿ ಯಾರೂ ಇರಲಿಲ್ಲ. ನಮ್ಮ ಮನೆಯವರು ವಿಶ್ರಮಿಸಿಕೊಂಡು ಅಲ್ಲೇ ಕುಳಿತಿದ್ದರು. ಯಾರಾದರೂ ಬೆಳಗಾವಿಯಲ್ಲಿ ಬರುತ್ತಾರೆಂದು ನಿರೀಕ್ಷೆಯೂ ಇತ್ತು. ಬೆಳಗಾಂಗೆ ರೈಲು ಇನ್ನೂ ಬಂದು ನಿಂತಿದೆ ಅಷ್ಟೇ. ಒಬ್ಬರು ಹೊರಗಡೆಯಿಂದ ನಮ್ಮ ಮನೆಯವರಿಗೆ ಸಿಕ್ಕಾಪಟ್ಟೆ ಬೈಯ್ಯಲಾರಂಭಿಸಿದರು. ಯಾಕೆ ಬೇರೆಯವರ ಸೀಟಿನಲ್ಲಿ ಕುಳಿತಿದ್ದೀರಿ? ಏಳ್ರಿ ಮೇಲೆ? ಆ ಸೀಟಿನವರು ಎಲ್ಲಿ ಕುಳಿತುಕೊಳ್ಳಬೇಕು ಇತ್ಯಾದಿ. ಇತ್ಯಾದಿ. ನಮ್ಮ ಸಹ ಪ್ರಯಾಣಿಕನಿಗೋ ಒಳಗೆ ಬಂದ ಕೂಡಲೇ ಹೊರಗಿದ್ದ ಚಿಕ್ಕಪ್ಪನನ್ನು ಕಂಡು ದಿಗಿಲು. ಇಲ್ಲಿ ನಮ್ಮ ಭಯ! ಅಲ್ಲಿ ಚಿಕ್ಕಪ್ಪನ ಕೂಗಾಟ. ಅವನು ಸುಮಾರು ೧೮–೨೦ ವರ್ಷದ ಹುಡುಗ. ಒಬ್ಬನೇ ಪಯಣಿಗ. ತುಂಬಾ ಒಳ್ಳೆಯ ಹುಡುಗ. ತನ್ನ ಚಿಕ್ಕಪ್ಪನ ಅವಿವೇಕಿತನಕ್ಕೆ ಅವನಿಗೂ ಬೇಸರವಾಗಿತ್ತು. ಸ್ವಲ್ಪ ಹೊತ್ತು ಮೌನ. ಪಾಪ. ಆಮೇಲೆ ಆ ಹುಡುಗನೇ ನಮ್ಮಲ್ಲಿ ಕ್ಷಮೆ ಕೇಳಿ ನಂತರ ನಮ್ಮ ಜತೆ ಚೆನ್ನಾಗಿ ಬೆರೆತ. ಹಾಗೇ ಮಾತನಾಡುತ್ತಾ ಗೊತ್ತಾಯಿತು. ಅವನು ನಮ್ಮ ಪರಿಚಯದವರ ಪೈಕಿನೇ, ಅವನ ಅಜ್ಜೀ ಮನೆ ನನ್ನ ತವರು ಮನೆ ಒಂದೇ ಊರು ಎಂದು. ಅಂದಿನ ದಿನ ಭವಿಷ್ಯದಲ್ಲಿ ಮನಸ್ಸಿಗೆ ಕಿರಿಕಿರಿ ಎಂದು ಬರೆದಿತ್ತೋ ಏನೋ !

ಇಷ್ಟು ಹೊತ್ತು ನೀವು ಕೇಳಿದ್ದು ರೈಲು ಪ್ರಯಾಣದಲ್ಲಿ ನಡೆದ ಕಥೆಗಳೇ ಸ್ವಾಮಿ ! ನಾನೇನು ರೈಲು ಬಿಟ್ಟಿದ್ದು ಅನ್ಕೊಂಡ್ರಾ?

ಹೀಗೆ ಜೀವನವೆಂಬ ಪಯಣದಲ್ಲೂ ಎಷ್ಟೋ ವಿಷಯಗಳು ಆ ಸಮಯಕ್ಕೆ ತುಂಬಾನೇ ಧೃತಿಗೆಡಿಸುತ್ತವೆ. ತಲ್ಲಣಿಸದಿರು ಕಂಡ್ಯ ತಾಳು ಮನವೇ ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ ಎಂದು ಜೀವನ ಸಾಗಿಸಬೇಕು. ಈಗಿರುವ ಮಹಾಮಾರಿ ಬೇಗ ತೊಲಗಲಿ ಎಲ್ಲರೂ ತಮ್ಮ ಜೀವನದ ಪಯಣವನ್ನು ಆರಾಮವಾಗಿ ಕಳೆಯುವಂತಾಗಲಿ ನಮ್ಮ ಮುಂದಿನ ಪ್ರಯಾಣ ಸುಖಕರವಾಗಲಿ ಎಂದು ಪ್ರಾರ್ಥಿಸೋಣ. ಹಾರೈಸೋಣ. ಏನಂತೀರಿ?

ಹುಡುಗಾಟದ ದಿನಗಳು

ಮಾಸದ ನೆನಪುಗಳು

- **ಗೌರಿ ಭಟ್ಟ**

ಮನುಷ್ಯನ ಜೀವನದಲ್ಲಿ ಬಾಲ್ಯ ಅಮೂಲ್ಯ ಹಾಗೂ ಸುಂದರ. ನನ್ನ ಬಾಲ್ಯದ ಸುಂದರ ನೆನಪುಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಬಯಸುತ್ತೇನೆ.

೧. ನಾವೆಲ್ಲ ಸಣ್ಣದಿರುವಾಗ ತಿನ್ನಲು ವಿಶೇಷವಾಗಿ ಏನೂ ಇರುತ್ತಿರಲಿಲ್ಲ. ಒಮ್ಮೆ ಅಮ್ಮ ರವೆಉಂಡೆ ಹಾಗೂ ಚಕ್ಕುಲಿ ಮಾಡಿ ಡಬ್ಬಿಯಲ್ಲಿ ತುಂಬಿ ಇಟ್ಟಿದ್ದಳು. ನನಗೂ, ನನ್ನ ತಂಗಿಗೂ ಅದನ್ನು ನೋಡಿ ಬಾಯಲ್ಲಿ ನೀರು ಬರುತ್ತಿತ್ತು. ಅಮ್ಮ ನಮಗಿಬ್ಬರಿಗೂ ಒಂದೊಂದು ಉಂಡೆ, ಚಕ್ಕುಲಿ ತಿನ್ನಲು ಕೊಟ್ಟು ಉಳಿದಿದ್ದನ್ನು ಡಬ್ಬಿಯಲ್ಲಿ ತುಂಬಿ ಇಟ್ಟಿದ್ದಳು. ನನಗೂ ನನ್ನ ತಂಗಿಗೂ ಡಬ್ಬಿ ಮೇಲೇ ಕಣ್ಣು. ಉಂಡೆ, ಚಕ್ಕುಲಿ ಕದ್ದು ತಿಂದರೆ ಲೆಕ್ಕ ಕಡಿಮೆಯಾಗಿ ಅಮ್ಮನಿಗೆ ಗೊತ್ತಾಗಿಬಿಡುತ್ತದೆ. ಆದ್ದರಿಂದ ಉಪಾಯವಾಗಿ ಉಂಡೆಯಲ್ಲಿರುವ ದ್ರಾಕ್ಷಿ, ಗೋಡಂಬಿಯನ್ನೂ, ಚಕ್ಕುಲಿಯ ಕಡೆಯ ಸುತ್ತನ್ನೂ ಸ್ವಾಹಾ ಮಾಡಿದೆವು. ಮನೆಗೆ ಬಂದ ಅಪ್ಪನ ಗೆಳೆಯರಿಗೆ ಅಮ್ಮ ಅವಸರದಿಂದ ಪ್ಲೇಟಿನಲ್ಲಿ ಇಟ್ಟು ತಿನ್ನಲು ಕೊಟ್ಟರೆ ರವಾಉಂಡೆಯಲ್ಲಿ ಒಂದೇ ಒಂದು ದ್ರಾಕ್ಷಿಯಾಗಲೀ ಗೋಡಂಬಿಯಾಗಲೀ ಕಾಣಸಿಗಲಿಲ್ಲ. ಅಮ್ಮನಿಗೆ ನಾಚಿಕೆ ಹಾಗೂ ನಮ್ಮ ಮೇಲೆ ಸಿಟ್ಟು ಒಟ್ಟಿಗೇ ಆಗಿತ್ತು. ಕಡೆಯ ಸುತ್ತಿಲ್ಲದ ಸಣ್ಣ ಚಕ್ಕುಲಿಯನ್ನು ಅಪ್ಪನ ಗೆಳೆಯರು ಖಾಲಿಮಾಡಿದ್ದರು. ಈಗಲೂ ದೊಡ್ಡ ಚಕ್ಕುಲಿ, ರವೆಉಂಡೆ ನೋಡಿದರೆ ನಮ್ಮ ಕಿತಾಪತಿ ನೆನಪಾಗುತ್ತದೆ.

೨. ಒಂದು ಸಲ ಊಟಕ್ಕೆ ಸಾರು ಮಾಡಲು ಅಪ್ಪ ಟೊಮೆಟೊ ತಂದು ಒಂದು ಚೀಲದಲ್ಲಿ ಹಾಕಿ ಗೋಡೆಯ ಗೂಟಕ್ಕೆ ನೇತು ಹಾಕಿದ್ದರು. ನಾನೊಂದು, ತಂಗಿಯೊಂದು, ಅಣ್ಣ, ಅಕ್ಕ ಎಲ್ಲಾ ಒಂದೊಂದಾಗಿ ಗುಟ್ಟಾಗಿ, ಟೊಮೆಟೊ ತಿಂದೆವು. ಅಮ್ಮ ಸಾರಿಗಾಗಿ ಟೊಮೆಟೊ ತೆಗೆಯಲು ಚೀಲದಲ್ಲಿ ಕೈ ಹಾಕಿದಾಗ ಚೀಲ ಖಾಲಿ. ನಾನಂತೂ ಒಂದೇ ಟೊಮೆಟೊ ತಿಂದದ್ದು. ಟೊಮೆಟೊ ಖಾಲಿಯಾಗಿದ್ದು ಹೇಗೆ? ಎಂದು ನಮ್ಮೆಲ್ಲರ ವಾದ. ಹಾಗಾದರೆ ಚೀಲವೇ ಖಾಲಿ ಮಾಡಿರಬೇಕೆಂದು ಅಮ್ಮ ಹೇಳಿ ನಕ್ಕುಬಿಟ್ಟಳು.

೩. ನಾವು ಸಣ್ಣದಿರುವಾಗ ಬಾಯಿಲೆಕ್ಕ ಅಂತ ಕೇಳುತ್ತಿದ್ದರು. ಒಮ್ಮೆ ನನ್ನ ತಂಗಿಗೆ ಅಣ್ಣ ಲೆಕ್ಕ ಕೇಳಿದನು. ಅವಳು ಬಹಳ ಚೂಟಿ ಹಾಗೂ ಚುರುಕು. ನನಗೆ (ಗೌರಕ್ಕಂಗೆ) ಮೂರು ಚಾಕಲೇಟು ಹಾಗೂ ನಿನಗೆ ಎರಡು ಚಾಕಲೇಟು ಒಟ್ಟೂ ಎಷ್ಟಾಯಿತು? ಅಂತ. ಅವಳು ಕೂಡಲೇ ಹೇಳಿದಳು, ಆರು ಅಂತ. ಎಷ್ಟೇ ಸಲ ಕೇಳಿದರೂ ಅವಳದು ಅದೇ ಉತ್ತರ. ಹೇಗೆ ಎಂದು ವಿವರಿಸಲು ಕೇಳಿದಾಗ ಅವಳು ಹೇಳಿದ್ದು ಗೌರಕ್ಕಂಗೆ ಮೂರು ಚಾಕಲೇಟು ಆದ್ರೆ ನನಗೆ ಹೇಗೆ ಎರಡು? ನನಗೂ ಮೂರೇ ಚಾಕಲೇಟು ಸಿಗಬೇಕು. ಅಣ್ಣ ನಕ್ಕು ಸುಮ್ಮನಾದನು. ತಂಗಿಯೂ ಅವಳ ಪ್ರಕಾರ ಸರಿಯಾಗೇ ಹೇಳಿದ್ದಳು.

೪. ಒಮ್ಮೆ ಚವತಿಗೆ ಚಕ್ಕುಲಿ ಮಾಡಿ ಅಮ್ಮ ಅಟ್ಟದ ಮೇಲೆ ಯಾರಿಗೂ ಕಾಣದಹಾಗೆ ದೊಡ್ಡ ಡಬ್ಬಿಯಲ್ಲಿ ಹಾಕಿ ಮುಚ್ಚಿಟ್ಟಿದ್ದಳು. ನಂಗೂ, ನನ್ನ ತಂಗಿಗೂ ಅದು ಗೊತ್ತಾಗಿಹೋಗಿತ್ತು. ಜಿಹ್ವಾಚಾಪಲ್ಯ ತಡೆಯಲು ಆಗ್ತಾನೇ ಇಲ್ಲ. ಹೇಗಾದರೂ ಮಾಡಿ ತಿನ್ನಲೇಬೇಕು. ಕೇಳಿದರೆ ಯಾರೂ ಕೊಡಲಿಕ್ಕಿಲ್ಲ. ಅಮ್ಮ ಚಕ್ಕುಲಿ ಇಟ್ಟ ಎತ್ತರಕ್ಕೆ ಇಬ್ಬರೂ ಇಲ್ಲ. ಉಪಾಯ ಮಾಡಿದೆವು. ಅಲ್ಲೇ ಇದ್ದ ಎತ್ತರದ ಬಾನಿಯ (ದೊಡ್ಡ ಮಣ್ಣಿನ ಪಾತ್ರೆ) ಮೇಲೆ ನಾನು ಹತ್ತಿ ಚಕ್ಕುಲಿ ತೆಗೆಯುವುದು, ನನಗಿಂತಲೂ ಕುಳ್ಳಗಿರುವ ನನ್ನ ತಂಗಿ ಅಟ್ಟದ ಬಾಗಿಲಲ್ಲೇ ನಿಂತು ಯಾರಾದರೂ ಬಂದರೆ ನನಗೆ ಸೂಚನೆ ಕೊಡುವುದು ಎಂದು. ಎತ್ತರದ ಬಾನಿಯ ಮೇಲೆ

ಕಷ್ಟಪಟ್ಟು ಕಾಲಿಟ್ಟಿದ್ದೇನಷ್ಟೇ, ಪಟ್ ಪಟಾಂತ ದೊಡ್ಡ ಶಬ್ದ ಮಾಡಿ ಒಡೆದು ಹೋಯಿತು. ಶಬ್ದ ಕೇಳಿ ಎಲ್ಲರೂ ಅಟ್ಟ ಏರುವ ಮೊದಲೇ ನಾವಿಬ್ಬರೂ ಜಾಗ ಖಾಲಿ ಮಾಡಿದ್ದೆವು.

೫. ಚಿಕ್ಕವನಿದ್ದಾಗ ನಾನು ತಿಂಡಿಪೋತಿಯಾಗಿದ್ದೆ. ಯಾವಾಗಲೂ ಏನಾದರೂ ತಿನ್ನುತ್ತಾನೇ ಇರುತ್ತಿದ್ದೆ. ಸರಿಯಾಗಿ ಅಕ್ಕ ನನ್ನ ಅಂಗಿಗೆ ಯಾವಾಗಲೂ ಕಿಸೆ ಇಡುತ್ತಿದ್ದಳು. ಅದರಲ್ಲಿ ಕಡ್ಲೆಬೀಜ, ಹಪ್ಪಳದ ಚೂರು. ಹುಣ್ಸೇಕಾಯಿ, ಹುಣ್ಸೇಬೀಜ, ಉಪ್ಪಲ್ಲಿ ಹಾಕಿದ ಜಾಯಿಕಾಯಿ ಹೀಗೇ ಏನಾದರೂ ಇರುತ್ತಿತ್ತು. ಅದಕ್ಕೆ ಸರಿಯಾಗಿ ನನ್ನ ಹಿಂದೆ ಗೆಳೆಯರ ಹಿಂಡೇ ಇರುತ್ತಿತ್ತು. ಅಕ್ಕ ಒಂದು ಸಲ ಅವಳ ನೈಲಾನ್ ಸೀರೆಯಲ್ಲಿ ಎರಡು ಪದರುಮಾಡಿ ನನಗೆ ಒಂದು ಫ್ರಾಕ್ ಹೊಲಿದು ಕೊಟ್ಟಿದ್ದಳು. ಅದಕ್ಕೆ ಕಿಸೆ ಇರಲಿಲ್ಲ. ಗೆಳೆಯರೆಲ್ಲಾ ಸೇರಿ ಆಟ ಮುಗಿಸಿ ಬರುವಾಗ ದಾರಿಯಲ್ಲಿ ಪೇರಲ ಹಣ್ಣು, ನೇರಳೆ ಹಣ್ಣು, ಜಂಬೂ ಹಣ್ಣು, ಪುನರ್ಪುಳಿ, ಗೇರು ಹಣ್ಣು ಎಲ್ಲಾ ಸಿಗುತ್ತದೆ. ಬೇಕಾದಷ್ಟು, ಸಾಕಾದಷ್ಟು ತಿಂದಾದರೂ ಆಸೆ ತೀರಲಿಲ್ಲ. ಅದನ್ನು ಬಿಟ್ಟು ಹೋಗಲು ಮನಸಾಗಲಿಲ್ಲ. ಒಂದು ಉಪಾಯ ಹೊಳೆಯಿತು. ನನ್ನ ಫ್ರಾಕಿಗೆ ನನ್ನ ಸೊಂಟದ ಭಾಗದಲ್ಲಿ ಹರಿದು ಒಂದು ಒಟ್ಟೆ ಮಾಡಿದೆ. ಆ ರಂಧ್ರದಲ್ಲಿ ಎಲ್ಲರೂ ಸೇರಿ ಮಿಕ್ಕಿದ ಹಣ್ಣುಗಳನ್ನು ತುಂಬಿದೆವು. ಖುಷಿಯಲ್ಲಿ ಏನೋ ಸಾಧಿಸಿದಂತೆ ಮನೆಗೆ ಬಂದೆವು. ಆಗ ನನ್ನ ಫ್ರಾಕ್ ನಿಂದ ಎಲ್ಲಾ ಹಣ್ಣುಗಳ ರಸ ಸೇರಿಕೊಂಡು ಇಳೀತಾ ಇರುವ ಅರಿವು ನನಗೆ ಬಂತು. ಎಲ್ಲಾ ಹಣ್ಣುಗಳ ಬಣ್ಣಗಳೂ ಫ್ರಾಕಿನಲ್ಲಿ ಉಳಿದು ಮತ್ತೆ ಆ ಫ್ರಾಕನ್ನು ಧರಿಸಲೇ ಆಗಲಿಲ್ಲ.

೬. ಅಮ್ಮ ನಮ್ಮ ಪರೀಕ್ಷೆ ಬಂದಾಗ ಅಥವಾ ನೌಕರಿಗೆ ಸಂದರ್ಶನಕ್ಕೆ ಹೋಗುವಾಗ ಒಟ್ಟಿನಲ್ಲಿ ನಮ್ಮ ಒಳ್ಳೆಯದಕ್ಕೆ ದೇವರಿಗೆ ತುಪ್ಪದ ದೀಪ ಹಚ್ಚುತ್ತಿದ್ದಳು. ನಾನು ನಮ್ಮ ಅಮ್ಮನಿಗೆ ಹೇಳ್ತಾ ಇದ್ದೆ. ಈ ಸಲ ನಾನು ಮೊದಲ ನಂಬರ್ ಬರಲೇಬೇಕು. ನಿನ್ನ ದೇವರಿಗೆ ಹೇಳು, .ಇಲ್ಲದಿದ್ದರೆ ನಾನು ಬೇರೆ ದೇವರನ್ನು ನೋಡಿಕೊಳ್ಳುತ್ತೇನೆ ಎಂದು. ಅಮ್ಮ ಅವರ ಎರಡೂ ಕೆನ್ನೆಗೂ ಹೊಡೆದುಕೊಂಡು 'ದೇವರ ಹತ್ತಿರ ಏನು ಹುಡುಗಾಟ '?ಅಂತ ಗದರುತ್ತಿದ್ದರು.

ಬಾಲ್ಯದ ನೆನಪು ಮರುಕಳಿಸುವಂತೆ ಮತ್ತೆ ಬಾಲ್ಯ ಮರುಕಳಿಸುವಂತಿದ್ದರೆ ಎಷ್ಟು ಚೆನ್ನ ಅಲ್ಲವೇ?

ಮತ-ಭಾರ ಪ್ರಭುಗಳು

ಚುನಾವಣೆ ಸಮಯ ಕಾಣಿಸ್ಕೊಳ್ತಾರೆ
ನಮಸ್ಕಾರ ಹೇಳ್ತಾರೆ ಕಾಲಿಗೆ ಬೀಳ್ತಾರೆ
ಗೆದ್ಮೇಲೆ ಊರಿಂದ ನಾಪತ್ತೆಯಾಗ್ತಾರೆ
ತೋರ್ಸಿದ ಜಾಗದಲ್ಲಿ ಕೂರೋದಿಲ್ಲ
ಕೊಟ್ಟ ಕೆಲಸ ಮಾಡೋದಿಲ್ಲ
ಭೇಟಿಗಂತೂ ಸಿಗೋದೆ ಇಲ್ಲ
ಒಳ್ಳೆ ಕೆಲ್ಸಕ್ಕೆಲ್ಲ ಕ್ಯಾತೆ ತೆಗೀತಾರೆ
ಸದ್ದಿಲ್ಲದೆ ಅಭಿವೃದ್ಧಿ ನಿಲ್ಸಿಬಿಡ್ತಾರೆ
ಹೋಟೇಲ್ ರಿಸಾರ್ಟ್ ಅಂತ ಸುತ್ತಾಡ್ತಾರೆ
ಹೋದಲ್ಲೆಲ್ಲ ಬೈದಾಡ್ತಾರೆ ಹೊಡೆದಾಡ್ತಾರೆ
ರಾಜಧಾನಿಯಿಂದ ತಲೆ ಮರೆಸ್ಕೊತಾರೆ
ಟೀವೀಲಿ ಮಾತ್ರ ಮುಖ ತೋರಿಸ್ತಾರೆ

ಬೊಗಳ್ತಾರೆ ಅರಚ್ತಾರೆ ಕಿರಿಚ್ತಾರೆ
ಸಾವಿನ ಮನೆಯಲ್ಲಿ ಫೋಸ್ ಕೊಡ್ತಾರೆ
ಯಾರದೋ ಶವಯಾತ್ರೆಗೆ ಹೆಗಲು ಕೊಡ್ತಾರೆ
ಸರ್ಕಾರದ ದುಡ್ಡಲ್ಲೇ ಓಡಾಡ್ತಾರೆ
ಖಜಾನೆ ಹಣದಲ್ಲೇ ಉಣ್ತಾರೆ ತೇಗ್ತಾರೆ
ಕಾಯಿಲೆ ಬಂದ್ರೆ ವಿದೇಶಕ್ಕೆ ಹೋಗ್ತಾರೆ
ಹೇಳಬೇಕಾದ ಮಾತು ಹೇಳೋದಿಲ್ಲ
ಮಾಡಬೇಕಾದ ಕೆಲಸ ಮಾಡೋದಿಲ್ಲ
ಇವರ ಸ್ವಾರ್ಥದಾಟ ಖಾಲಿ ರಾಜ್ಯಕೋಶ
ಪ್ರಜಾಪ್ರಭುತ್ವ ನಾಶ ಅಳಿಯುವುದು ದೇಶ.

- **ಮನೋಹರ.ಎಂ.ಗೋಖಲೆ**

ನಗೆಬರಹ

ಮದುವೆ ಮನೆಗೆ ಹೋಗಿದ್ದು

-= ಪತ್ತಂಗಿ ಎಸ್. ಮುರಳಿ

ಇದು ಸುಮಾರು ಐದು ವರ್ಷಗಳ ಹಿಂದೆ ನಡೆದ ಘಟನೆ. ನನಗೆ ಪರಿಚಿತರೂ ಹಾಗೂ ಎಲ್ಲಿ ಸಿಕ್ಕಿದರೂ ಆತ್ಮೀಯವಾಗಿ ಮಾತನಾಡಿಸಬಲ್ಲ ನಮ್ಮ ಬಡಾವಣೆಯಲ್ಲಿ ವಾಸವಿದ್ದಂತಹ ಹಿರಿಯರೊಬ್ಬರಿದ್ದರು. ಆಗಾಗ ಮನೆಗೂ ಬರುತ್ತಿದ್ದರು. ಒಂದು ಬಾರಿ ಹಾದಿಯಲ್ಲಿ ಸಿಕ್ಕಾಗ "ಓಹ್... ನೀವು ಇಲ್ಲಿಯೇ ಸಿಕ್ಕಿದ್ದು ಒಳ್ಳೆಯದೇ ಆಯಿತು, ಇತ್ತೀಚೆಗೆ ಹೆಚ್ಚು ಹೊರಗೆ ಓಡಾಡುತ್ತಿಲ್ಲ. ಇದೇ ಇಪ್ಪತ್ತೊಂದಕ್ಕೆ ನನ್ನ ಮೊಮ್ಮಗ ಕುಮಾರ್‌ನ ಮದುವೆ ಇದೆ, ಹಿಂದಿನ ದಿನವೇ ರಿಸೆಪ್ಷನ್ ಇದೆ. ನೀವು ನಿಮ್ಮ ಮನೆಯವರ ಜೊತೆಯಲ್ಲಿ ಎರಡೂ ದಿನ ಖಂಡಿತವಾಗಿ ಬರಬೇಕು" ಎಂದು ಹೇಳಿ ಪತ್ರಿಕೆಯನ್ನ ಅಲ್ಲಿಯೇ ಕೊಟ್ಟರು.

ನಾನು ಅಲ್ಲಿಯೇ ಪತ್ರಿಕೆ ತೆಗೆದು ನೋಡಿ "ಬಹಳ ದೂರ ಇಟ್ಟುಕೊಂಡಿದ್ದೀರಿ ಮದುವೆ.. ರಾಜಾಜಿನಗರ ಇಂಡಸ್ಟ್ರಿಯಲ್ ಏರಿಯಾ..? ಅಲ್ಲಿ ನಾಲ್ಕಾರು ಮದುವೆ ಮನೆಗಳಿವೆ. ಕಾರ್ ಪಾರ್ಕಿಂಗ್ ಸಮಸ್ಯೆ ಅಲ್ಲವಾ?" ಎಂದೆ. ಅದಕ್ಕೆ ಅವರು "ನೀವೇ ಹೀಗೆಂದರೆ ಹೇಗೆ...? ಯುವಕರು... ಸರ್ವಿಸ್ ರಸ್ತೆಯಲ್ಲಿ ಸ್ವಲ್ಪ ದೂರ ನಿಲ್ಲಿಸಿ ನಡೆದುಕೊಂಡು ಬರಬಹುದು" ಅಂದರು. "ಇಲ್ಲ...ಅಲ್ಲಿ ಬಹಳ ಮದುವೆಗಳಿಗೆ ಹೋಗಿದ್ದೇನೆ.. ಬಹಳ ಕಷ್ಟ ಕಾರು ನಿಲ್ಲಿಸೋಕೆ. ಇರಲಿ ಬಿಡಿ ನೀವು ಕರೆದಿದ್ದೀರಿ, ನಾವು ಬಂದೇ ಬರುತ್ತೇನೆ" ಎಂದು ಹೇಳಿ ಮನೆಗೆ ಹಿಂದಿರುಗಿದೆ.

ಮದುವೆಯ ಹಿಂದಿನ ದಿನವೇ ರಿಸೆಪ್ಷನ್‌ಗೇ ಹೋಗೋಣ ಎಂದು ತೀರ್ಮಾನಿಸಿ ನಾನು ನನ್ನ ಪತ್ನಿ ಹೊರಟೆವು. ದೂರದಲ್ಲಿ ಕಾರು ನಿಲ್ಲಿಸಿ ಮದುವೆ ಮನೆ ಕಡೆಗೆ ನಡೆದೆವು. ಅಷ್ಟರಲ್ಲಿ ನನ್ನವಳು " ರೀ...ಕಾರ್ಡ್ ಮನೇಲೆ ಬಿಟ್ಟಿದ್ದೀವಿ ತರಲಿಲ್ಲ....." ಅಂದಳು. ಅದಕ್ಕೆ ನಾನೇ ಸಮಾಧಾನಪಡಿಸಿದೆ "ಈಗೀಗ ಮದುವೆ ಮನೆಗಳ ಬಾಗಿಲಲ್ಲಿ ವಧೂವರರ ಹೆಸರು ಬರೆಸಿ ಹಾಕಿರುತ್ತಾರೆ, ನೋಡಿಕೊಂಡು ಹೋದರೆ ಆಯಿತು. ಸುಮ್ಮನೆ ಬಾ..." ಎಂದು ಕರೆದೊಯ್ದೆ. ಎರಡು ಚೌಲ್ಟ್ರಿಗಳನ್ನು ದಾಟಿದ ಮೇಲೆ ಹೆಸರು ಕಣ್ಣಿಗೆ ಬಿತ್ತು, "ಶಿವಕುಮಾರ ವೆಡ್ಸ್ ಗೀತಾ" ಅಂತ. ಬೋರ್ಡ್ ನೋಡಿದ ಕೂಡಲೇ ಒಳನುಗ್ಗಿದೆವು.

ಅಲ್ಲಿ ನೋಡಿದರೆ ಜನಜಾತ್ರೆ. ಹಾಗೆಯೇ ಸಾಲಿನಲ್ಲಿ ಸುಮಾರು ಒಂದು ಗಂಟೆಯ ಕಾಲ ನಿಂತುಕೊಂಡು ವೇದಿಕೆ ಮೇಲೆ ಹೋಗಿ, ನಾವು ನಿಮ್ಮ ತಾತನ ಪರಿಚಯಸ್ಥರು ಹಾಗೂ ಒಂದೇ ಬಡಾವಣೆಯವರು ಎಂದು ಸ್ವಯಂಪರಿಚಯ ಮಾಡಿಕೊಂಡು ವಧೂವರರನ್ನ ಆಶೀರ್ವದಿಸಿ ಉಡುಗೊರೆ ಕೊಟ್ಟೆವು. ಸುತ್ತಮುತ್ತಾ ನೋಡಿದರೂ ಆ ಪರಿಚಯವಿದ್ದ ಹಿರಿಯರು ನಮಗೆ ಕಾಣಲಿಲ್ಲ. ವರನೂ ನಮಗೆ ಹಾಗೆಯೇ ಹೋಗಬಾರದೆಂದೂ, ಊಟ ಮಾಡಿಯೇ ಹೋಗಬೇಕೆಂದೂ ಹೇಳಿದ. ಆಗಮಿಸಿದ್ದಕ್ಕೆ ಧನ್ಯವಾದಗಳನ್ನೂ ಹೇಳಿದ. ಮದುವೆ ಮನೆ ಎಂದರೆ ಕೇಳಬೇಕೆ ಊಟ ಭರ್ಜರಿಯಾಗಿತ್ತು. ಎಲ್ಲವನ್ನೂ ಅಷ್ಟಷ್ಟು ಸೇವಿಸಿ ಕೊನೆಗೆ ಐಸ್ ಕ್ರೀಮ್ ತಿಂದು ಬೀಡ ಹಾಕಿಕೊಂಡು ಮನೆಗೆ ಹಿಂದಿರುಗುವಷ್ಟರಲ್ಲಿ ರಾತ್ರಿ ಹನ್ನೊಂದಾಗಿತ್ತು.

ಕೆಲ ದಿನಗಳ ನಂತರ ರಸ್ತೆಯಲ್ಲಿ ಆ ಹಿರಿಯರು ಸಿಕ್ಕು "ಏನಪ್ಪಾ.... ನಮ್ಮ ಮೊಮ್ಮಗನ ಮದುವೆಗೆ ಬರಲೇ ಇಲ್ಲ. ನಾನು ನಮ್ಮ ಮನೆಯವರಿಗೆಲ್ಲ ನಿಮ್ಮನ್ನ ಪರಿಚಯಿಸಬೇಕು ಅಂತ ಕಾಯ್ತ ಇದ್ದೆ...." ಅಂತ ಆಕ್ಷೇಪಣೆ ಮಾಡಿದರು. ನಾನು "ಇಲ್ಲ...ಸಾರ್, ನಾನು ಮತ್ತೆ ನಮ್ಮ ಮನೆಯವಳು ಇಬ್ಬರೂ ಬಂದಿದ್ದಿವಿ. ತಮ್ಮನ್ನು ಹುಡುಕಿದೆವು, ಎಲ್ಲೋ ಬ್ಯುಸಿ ಇರಬಹುದು ಎಂದು ಸುಮ್ಮನಾದೆವು.

ಮೇಲಾಗಿ ನಿಮ್ಮ ಮನೆಯವರು ಯಾರೂ ನಮಗೆ ಪರಿಚಯವಿರಲಿಲ್ಲ. ವೇದಿಕೆಯ ಮೇಲೆ ಹೋಗಿ ನಿಮ್ಮ ಮೊಮ್ಮಗ ಶಿವಕುಮಾರನಿಗೆ ಆಶೀರ್ವಾದ ಮಾಡಿ ಉಡುಗೊರೆ ಕೊಟ್ಟು, ನಿಮ್ಮ ತಾತನವರ ಪರಿಚಯಸ್ತರು ಎಂದು ಹೇಳಿ ಭರ್ಜರಿ ಊಟ ಮಾಡಿ ಬಂದೆವಲ್ಲ, ಬೇಕಾದರೆ ಫೋಟೋಗಳನ್ನು ನೋಡಿ ನಿಮಗೇ ಗೊತ್ತಾಗುತ್ತೆ." ಎಂದೆ.

" ಏನAದ್ರೀ... ನಮ್ಮ ಮೊಮ್ಮಗ ಶಿವಕುಮಾರಾನಾ...!" ಅಂತ ಆಶ್ಚರ್ಯದಿಂದ ಕೇಳಿದರು. ಹೌದು ನಾವು ಲಗ್ನಪತ್ರಿಕೆ ಮನೆಯಲ್ಲೇ ಬಿಟ್ಟು ಬಂದಿದ್ದೆವು. ನಿಮ್ಮ ಮೊಮ್ಮಗ ಕುಮಾರ ಎಂದಿದ್ದರಲ್ಲಾ... ಬೋರ್ಡ್ ನೋಡಿಕೊಂಡೇ ಒಳಗೆ ಹೋಗಿದ್ದು" ಎಂದು ನಾನೇ ಅವರನ್ನು ಆಕ್ಷೇಪಣೆ ಮಾಡಿದೆ.

ನಾನು ಹೇಳಿದ್ದು ಕೇಳಿ ಅವರು "ಓಹ್.... ಸರಿ ಬಿಡಿ. ನನ್ನ ಮೊಮ್ಮಗನನ್ನ ಪ್ರೀತಿಯಿಂದ ಕುಮಾರ ಅಂತ ಕರೀತೀನಿ ಅಷ್ಟೆ ಅವನ ವ್ಯವಹಾರದ ಹೆಸರು ನಾಗರಾಜ ಶಾಸ್ತ್ರೀ ಅಂತ. ಪತ್ರಿಕೆಯಲ್ಲಿ ಇತ್ತಲ್ಲ" ಎಂದು ಹೇಳಿದರು. ಅದಕ್ಕೆ ನಾನೆಂದೆ "ಬೋರ್ಡ್ ನೋಡಿಕೊಂಡು ಒಳಗೆ ಹೋಗಿದ್ದೆ, ಅಲ್ಲಿ ನಾಲ್ಕಾರು ಕಲ್ಯಾಣ ಮಂಟಪಗಳಿವೆ, ಗೊಂದಲ ಆಗೋಯ್ತು."

"ಹೋಗಲಿ ಬಿಡಿ, ಯಾರದೋ ಮದುವೆಗೆ ಹೋಗಿ, ಉಡುಗೊರೆ ಕೊಟ್ಟು, ಊಟ ಮಾಡಿಕೊಂಡು ಬಂದಿದ್ದೀರಿ. ಇದೂ ಒಂಥರಾ ಚೆನ್ನಾಗಿದೆ ನಿಮ್ಮ ಅವಸ್ಥೆ. ಅಂದ ಹಾಗೆ ಇದೇ ಭಾನುವಾರ ಮನೇಗೇ ಬನ್ನಿ, ಸತ್ಯನಾರಾಯಣ ಪೂಜೆ ಇಟ್ಟುಕೊಂಡಿದ್ದೇವೆ. ಮರೆತು ಪಕ್ಕದ ಮನೇಗೆ ಹೋಗಿಬಿಡಬೇಡಿ" ಎಂದು ಛೇಡಿಸಿದರು ಆ ಹಿರಿಯರು.

ಮನೆಗೆ ಬಂದು ನನ್ನವಳಿಗೆ ನಡೆದುದನ್ನೆಲ್ಲಾ ಹೇಳಿದೆ. ಎಂತಹ ಮೂರ್ಖತನ ನಮ್ಮದು ಯಾರದೋ ಮದುವೆ ಊಟ ಮಾಡಿದ ಹಾಗಾಯಿತು. ಯಾರಾದರೂ ಬಂದು ಕೇಳಿದ್ದರೆ ಏನು ಗತಿಯಾಗುತ್ತಿತ್ತು ಎಂದಳು. ಅಂದಿನಿAದ ಯಾವುದೇ ಕಾರ್ಯಕ್ರಮಕ್ಕೆ ಹೋದರೂ ಪತ್ರಿಕೆಯನ್ನು ಮೊದಲು ಕಾರಿನಲ್ಲಿಟ್ಟು ನಂತರ ನಾವು ಕಾರು ಹತ್ತುವುದು.

ಹನಿಗವನಗಳು

ವ್ಯಾಪಾರಿ

ನಾನು
ನನ್ನಾಕೆಗಲ್ಲದೆ
ಬೇರೆಯವರಿಗೂ
ಮುತ್ತು ಕೊಡುತ್ತೇನೆ
ಕಾರಣ
ನಾನೊಬ್ಬ
ಮುತ್ತಿನ
ವ್ಯಾಪಾರಿ

ಉಪವಾಸ

ನನ್ನ
ಉಪವಾಸ
ಸತ್ಯಾಗ್ರಹಕ್ಕೆ
ಮಹಾತ್ಮರಲ್ಲ
ಕಾರಣ
ನನ್ನಾಕೆಯ
ಹೊಸ ರುಚಿ

- **ಜಿಬಿಕೋಟೆ ಅನಂತ್**

ಬಂದನಾ ಹುಲಿ ರಾಯನು..

ಢಂಢರ ಢಂಢರ....ಢಂಢರ ಢಂಢರ...

- **ಶೀಲಾ ಭಂಡಾರ್ಕರ್**

ದೂರದಲ್ಲೆಲ್ಲೋ ಢಂಢ್ ಅನ್ನುವುದರೊಳಗೆ ನನ್ನ ಕಿವಿಗಳು, ತಲೆ, ಕೈ ಕಾಲುಗಳೆಲ್ಲ ಒಮ್ಮೆಲೇ ಬಿಸಿಯಾಗಿ ಸಣ್ಣಗೆ ನಡುಕ ಶುರುವಾಗುವುದು. ತಲೆಯೊಳಗೆಲ್ಲ ಗೋಜಲು ಗೋಜಲು. ನಾನೀಗ ಎಲ್ಲಿ ಹೋಗಲಿ? ಎಲ್ಲಿ ಅಡಗಿ ಕೂರಲಿ? ಹೆದರಿದ ಮನಸ್ಸು ನನ್ನನ್ನು ಇನ್ನಷ್ಟು ನಡುಗಿಸುವುದು.

ಢಂಢರ ಢಂಢರ ಹತ್ತಿರವಾಗುತ್ತಿದೆ.

ನಡುಮನೆಯ ಆ ಕೋಣೆಯ ಒಂದು ಬದಿಯಲ್ಲಿ ಹಾಸಿಗೆಯ ಸುರುಳಿಗಳನ್ನು ಪೇರಿಸಿಟ್ಟ ಕಡೆ ಧಾವಿಸಿದೆ. ಆ ಸಂದಿಯಲ್ಲೊಂದಿಷ್ಟು ಜಾಗವಿತ್ತು. ನನಗೆ ಕೂತು ಕೊಳ್ಳಲು ಸಾಕಾಗುವಷ್ಟಿದ್ದ ಸ್ಥಳದಲ್ಲಿ ಮುದುಡಿ ಕುಳಿತುಕೊಂಡೆ. ಕಿವಿಗಳನ್ನು ಗಟ್ಟಿಯಾಗಿ ಕೈಗಳಿಂದ ಮುಚ್ಚಿಕೊಂಡು ಕಣ್ಣುಗಳನ್ನು ಮುಚ್ಚಿ ಮುಖವನ್ನು ಕಾಲಿನ ಮಂಡಿಗಳಿಗೆ ಒತ್ತಿಕೊಂಡು ಆ ಕತ್ತಲೆಯ ಕೋಣೆಯೊಳಗೆ ಕೂತ ನನಗೆ ಢಂಢರ ಢಂಢರ ಹತ್ತಿರ ಹತ್ತಿರವಾಗುವುದರ ಅರಿವಾಗುತ್ತಿದೆ. ಅಯ್ಯೋ... ಈಗೇನು ಮಾಡಲಿ!!!

ನಾನಿಲ್ಲಿ ಕೂತಿದ್ದು ಮಾತ್ರ ಯಾರಿಗೂ ಗೊತ್ತಾಗದು ಅನ್ನುವುದೊಂದು ಧೈರ್ಯ ಬಿಟ್ಟರೆ ಇನ್ಯಾವುದೂ ಈಗ ನನ್ನ ಪಾಲಿಗಿಲ್ಲ.

ಅಷ್ಟರಲ್ಲಿ ... ಧೋ.. ಎಂಬ ಮಳೆಯ ಶಬ್ದ. ಸ್ವಲ್ಪ ಸಮಾಧಾನ. ಆದರೂ ಕಣ್ಣು ಬಿಡಲು ಭಯ. ಅದೆಷ್ಟು ಹೊತ್ತು ಅಲ್ಲಿ ಕುಳಿತಿದ್ದೆನೋ.. ಢಂಢರ ಈಗ ಸಂಪೂರ್ಣ ನಿಂತಿದೆ. ಮಳೆಯಿಂದಾಗಿ ಅದರ ಶಬ್ದ ಕೇಳಿಸುತ್ತಿಲ್ಲ ಅಂದು ಕೊಳ್ಳುತಿದ್ದೇನೆ. ಅಂದರೆ ಹತ್ತಿರ ಬಂದರೂ ಬರಬಹುದು ಎಂಬ ದುಗುಡ.

ಮನೆಯ ಎದುರು ಬಾಗಿಲನ್ನು ಹಾಕಿದ ಶಬ್ದ. ಮನೆಯವರೆಲ್ಲ ಆಡುತ್ತಿರುವ ಮಾತುಗಳು ಕಿವಿಯ ಮೇಲೆ ಬೀಳುತ್ತಿದೆ. ಜೀವಕ್ಕೆ ಈಗ ಒಂದಿಷ್ಟು ಸಮಾಧಾನ. ನಾನೀಗ ಮುಚ್ಚಿದ ಕಿವಿಗಳನ್ನು ಬಿಟ್ಟೆ.

"ಮಕ್ಕಳು ಇಬ್ಬರು ಇಲ್ಲೇ ಇದ್ದಾರೆ. ದೊಡ್ಡವಳೆಲ್ಲಿ ಹೋದಳು" ಎಂದು ಒಬ್ಬರನ್ನೊಬ್ಬರು ಕೇಳುತಿದ್ದಾರೆ. ಕಣ್ಣುಗಳನ್ನು ತೆರೆದೆ. ಮಳೆಯ ಕತ್ತಲೆಯಿಂದಾಗಿ ಕಣ್ಣುಬಿಟ್ಟರೂ ಏನೂ ಕಾಣಿಸುತ್ತಿಲ್ಲ. ನಿಧಾನವಾಗಿ ಎದ್ದು ಮೆಲ್ಲನೆ ಹೆಜ್ಜೆ ಇಡುತ್ತಾ ಹೊರಗೆ ಬಂದು ಕೂತೆ. ಹಾಂ! ಇಲ್ಲೇ ಇದ್ದಾಳೆ ಎಂದು ಸಮಾಧಾನಪಟ್ಟರೇ ಹೊರತು, ಎಲ್ಲಿ ಹೋಗಿದ್ದೆ ಎಂದು ಯಾರೂ ಕೇಳಲಿಲ್ಲ. ನಾನೂ ಹೇಳಲಿಲ್ಲ.

ಅಜ್ಜಿ, ದೊಡ್ಡಪ್ಪಂದಿರು ಇಬ್ಬರು, ಚಿಕ್ಕಪ್ಪ ಒಬ್ಬ ಮದುವೆಯಾಗದವರು. ಇಬ್ಬರು ಸೋದರತ್ತೆಯರು. ಅಪ್ಪ ಅಮ್ಮ ನಾವು ಮೂವರು ಚಿಕ್ಕ ಚಿಕ್ಕ ಮಕ್ಕಳು ಇಷ್ಟು ಜನ ಒಂದೇ ಮನೆಯಲ್ಲಿ ಇರುತಿದ್ದೆವು.

ಆಗ ನವರಾತ್ರಿ ಉತ್ಸವ ನಡೆಯುತಿತ್ತು. ಮಾರ್ನಮಿ ಹಬ್ಬಕ್ಕೆ ಹರಕೆ ವೇಷಗಳು, ವರ್ಷಂಪ್ರತಿ ಹಾಕುವ ವೇಷಗಳು, ಚಳ್ಳೆಪಿಳ್ಳೆ ವೇಷಗಳೆಲ್ಲಾ ಸೇರಿದರೆ ಒಂಭತ್ತು ದಿನವೂ ಭರಪೂರ ವೇಷಗಳು ನೋಡಲು ಸಿಗುತಿದ್ದವು.

ಹುಲಿ ವೇಷದ ಒಂದು ಗುಂಪೇ ಮನೆ ಮನೆಗೆ ಬಂದು ಕುಣಿದು ದುಡ್ಡು ತೆಗೆದುಕೊಂಡು ಹೋಗುವುದು. ನಾನು ಯಾವುದಾದರೂ ಸಂದಿಯಿಂದ ಅವರು ಕುಣಿಯುವುದನ್ನು ನೋಡುತಿದ್ದೆ.

ದೊಡ್ಡವೆರಡು ಹುಲಿಗಳು, ಮಿಕ್ಕವೆಲ್ಲ ಮರಿ ಹುಲಿಗಳು. ಮೈಯೆಲ್ಲಾ ಹಳದಿ ಬಣ್ಣ ಬಳಿದುಕೊಂಡು, ಅದರ ಮೇಲೆ ಕಪ್ಪು ಪಟ್ಟೆಗಳನ್ನು ಬರೆದು ಸೊಂಟಕ್ಕೆ ಬಾಲದ ಬೆಲ್ಟ್ ಕಟ್ಟಿ ಮನುಷ್ಯರು ಹುಲಿಗಳಾಗುತಿದ್ದರು. ದೊಡ್ಡ ಹುಲಿಗಳಿಗೆ ಮಾತ್ರ ಮುಖವಾಡ. ಚಿಕ್ಕವಕ್ಕೆ ಕಿವಿಗಳಿರುವ ಟೊಪ್ಪಿಗೆ.

ಢಂಢರ ಢಂಢರ ಡೋಲಿನ ಶಬ್ದಕ್ಕೆ ಹುಲಿಗಳು ಕುಣಿಯುತ್ತಲೇ ಅಂಗಳವನ್ನು ಪ್ರವೇಶಿಸಿ, ಸುಂದರವಾಗಿ ಕುಣಿಯುತ್ತಾ.. ತಾಯಿ ಹುಲಿಯ ಹಾಲು ಕುಡಿಯುವಂತೆ ನಟಿಸುತ್ತಾ ಕುಣಿಯುವ ಅತೀ ಚಿಕ್ಕ ಹುಲಿ ಮರಿಗಳು.. ಕುಣಿತದ ಕೊನೆಯಲ್ಲಿ ಒಂದು ಫ್ಯಾಮಿಲಿ ಫೋಟೊಗೆ ಪೋಸ್ ಕೊಡುವ ರೀತಿ ಕೂತುಕೊಳ್ಳುವ ಇಂಥ ಹುಲಿವೇಷದ ಗುಂಪಿಗೆ ಹ್ಯಾಟ್ ಧರಿಸಿ ಕೋವಿ ಹಿಡಿದುಕೊಂಡು ಬರುವ ಒಬ್ಬ ಲೀಡರ್. ಅವನು ಹಂಟರೋ ಮೆಂಟರೋ ಗೊತ್ತಿಲ್ಲ.

ಇಂಥ ಚಂದದ ಹುಲಿಯಾಟವನ್ನು ಸಂದಿಯಿಂದಲಾದರೂ ನೋಡಿ ನಿಲ್ಲುತಿದ್ದ ನನ್ನನ್ನು ಒಮ್ಮೆಲೇ ಹಾಸಿಗೆ ಸುರುಳಿಯ ಸಂದಿಯಲ್ಲಿ ಅಡಗಿ ಮುದುಡಿ ಕೂರುವಂತೆ ಮಾಡಿದ್ದಾದರೂ ಏನು?

ನಮ್ಮ ಮನೆಗೆ ನಮ್ಮಜ್ಜಿ ಲೀಡರು. ಮಾರ್ನಮಿಯಲ್ಲಿ ಬರುವ ವೇಷಗಳಿಗೆ ಕುಡಿಯಲು ನೀರು, ಬೆಲ್ಲದ ತುಂಡುಗಳು, ಅವರಿಗೆ ಕೊಡುವ ಚಿಲ್ಲರೆ ಕಾಸು ಎಲ್ಲವನ್ನೂ ಒಂಭತ್ತು ದಿನವೂ ನಮ್ಮ ಮನೆಯ ಹೊರಗಿನ ಚಾವಡಿಯಲ್ಲಿರುವ ಮರದ ಮಂಚದ ಮೇಲೆ ಇಟ್ಟುಕೊಂಡು ಅವರು ಕೂತುಕೊಳ್ಳುವುದಿತ್ತು. ನಾನಿನ್ನೂ ಬಾಲವಾಡಿಗೆ ಹೋಗುವಷ್ಟು ಚಿಕ್ಕವಳು.

ಹೀಗೆ ಬಂದ ಹುಲಿವೇಷ ಒಮ್ಮೆ.ಕುಣಿದಾದ ಮೇಲೆ ದುಡ್ಡು ತೆಗೆದುಕೊಳ್ಳಲು ಅಜ್ಜಿಯ ಕಾಲ ಬುಡಕ್ಕೆ ಬಂದು ಕೂತಿತು. ಅಜ್ಜಿ ದುಡ್ಡು ಕೊಡಲು ಕೈ ಮುಂದು ಮಾಡಿದಾಗ, ತೆಗೆದುಕೊಳ್ಳುವುದರೊಳಗೆ ಆ ಹುಲಿಯ ದೃಷ್ಟಿಗೆ ಮೂಲೆಯಲ್ಲಿ ನಿಂತ ನಾನು ಬೀಳಬೇಕೇ? ಮಗುವಿನ ಕೈಯಲ್ಲಿ ಕೊಡಿಸಿ ಎಂದು ಅಂಗಲಾಚಿತು. ಅಜ್ಜಿ ನನ್ನ ಕರೆದರೆ ನಾನು ಬರಲಿಲ್ಲ. ಅಜ್ಜಿಯೇ ಎದ್ದು ನನ್ನ ಕೈಯಲ್ಲಿ ದುಡ್ಡು ಕೊಟ್ಟ ತಕ್ಷಣ ಹುಲಿ ನನ್ನ ಕಡೆಗೆ ಬಂದು ನನ್ನ ಕೈ ಹಿಡಿದು ಅಲುಗಾಡಿಸಿ ಬಿಟ್ಟಿತು.

ಅನಿರೀಕ್ಷಿತವಾದ ಈ ದಾಳಿಗೆ, ಆ ಬಣ್ಣದ ವಾಸನೆಗೆ, ಹೆದರಿ ನಡುಗಿದ ನನ್ನ ಬಾಯಿಯಿಂದ ಕಿರುಚಬೇಕೆನಿಸಿದರೂ ಒಂದಕ್ಷರವೂ ಹೊರಬರಲಿಲ್ಲ. ನಡುಕ ಮಾತ್ರ ಎಷ್ಟೋ ವರ್ಷಗಳವರೆಗೂ ನಿಲ್ಲಲಿಲ್ಲ.

ಆ ಎಷ್ಟೋ ವರ್ಷಗಳು ನನ್ನ ಜೀವನದ ಅಮೂಲ್ಯ ಸಮಯ ಎಂದು ಈಗ ನನಗೆ ಎಷ್ಟೋ ಬಾರಿ ಅನಿಸುವುದಿದೆ. ಆ ಒಂದು ಹುಲಿಯ ಹ್ಯಾಂಡ್ ಶೇಕ್ ನಿಂದಾಗಿ ನಡುವಿನ ಅಷ್ಟೂ ವರ್ಷಗಳಲ್ಲಿ ನಾನು ಒಂದು ವೇಷವನ್ನೂ ನೋಡಲಿಲ್ಲ.

ಆಮೇಲೆ ಸ್ವಲ್ಪ ದೊಡ್ಡವಳಾದ ಮೇಲೆ ಎಲ್ಲಾ ವೇಷಗಳನ್ನು ನೋಡಲು ಶುರು ಮಾಡಿದ ಮೇಲೆ ವೇಷಗಳನ್ನು ಎಂಜಾಯ್ ಮಾಡಿದ್ದೇನೆ. ಹುಲಿ ವೇಷದಲ್ಲಿ ವಿವಿಧ ವೈವಿಧ್ಯ, ಅವುಗಳು ಹಾಕುವ ಬಣ್ಣ, ಕುಣಿಯುವ ಕುಣಿತದಲ್ಲಿನ ವ್ಯತ್ಯಾಸ . ಪಟ್ಟೆ ಹುಲಿ, ಚುಕ್ಕೆ ಹುಲಿ, ಬಿಳಿ ಹುಲಿ, ಹಳದಿ ಹುಲಿ, ಕಪ್ಪು ಹುಲಿ.. ಹೀಗೆ ವಿಧವಿಧದ ಹುಲಿಗಳನ್ನು ಗುರುತಿಸುವಷ್ಟು ಗಮನವಿಟ್ಟು ನೋಡುತಿದ್ದೆ.

ಅಕ್ಕ ಪಕ್ಕದ ಮಕ್ಕಳೆಲ್ಲಾ ಸೇರಿದಾಗ ನಾವೂ ಹುಲಿ ವೇಷ ಕುಣಿಯುವುದಿತ್ತು. ಒಬ್ಬ ಕೋವಿ ಮನುಷ್ಯ. ಅಪ್ಪ ಅಮ್ಮ ಹುಲಿಗಳು. ಹುಲಿ ಮರಿಗಳು ನಾವು ನಮ್ಮಲ್ಲೇ ಆಗುತಿದ್ದೆವು.

ಈಗ ಎಷ್ಟೋ ವರ್ಷಗಳ ನಂತರ ಮತ್ತೆ ಹುಲಿ ವೇಷ ನೋಡಲು ಆಸೆಯಾಗುತ್ತಿದೆ ಎಂದು ಒಮ್ಮೆ ನವರಾತ್ರಿಯಲ್ಲಿ ಊರಿಗೆ ಹೋಗಿದ್ದೆ. ಆದರೆ ನಾವು ಚಿಕ್ಕಂದಿನಲ್ಲಿ ನೋಡಿದ ಹುಲಿ ವೇಷ ಈಗ ಇಲ್ಲವೇ ಇಲ್ಲ. ಆಗ ವೇಷ ಹಾಕುವವರೂ ಮಟ್ಟಸವಾದ ಹೊಟ್ಟೆ. ಹದವಾದ ಶರೀರದವರಾಗಿರುತಿದ್ದರು. ಈಗ ಎಲ್ಲರಿಗೂ ಡೊಳ್ಳು ಹೊಟ್ಟೆ. ಆ ಹೊಟ್ಟೆಯ ಮೇಲೆ ಹುಲಿಯ ಮುಖ ಬರೆಯಿಸಿಕೊಂಡ, ಕತ್ತಿಗೆ 2000, 500 ರ ನೋಟುಗಳ ಹಾರಗಳನ್ನು ಹಾಕಿಸಿಕೊಂಡ ಹುಲಿಗಳು ಶಾರದೆಯ ವಿಸರ್ಜನಾ ಮೆರವಣಿಗೆಯ ಸಮಯದಲ್ಲಿ ದೊಡ್ಡ ದೊಡ್ಡ ವಾಹನಗಳ ಮೇಲೆ ಡೊಳ್ಳು ಹೊಟ್ಟೆ ಅಲುಗಾಡಿಸಿ ಕುಣಿಯುವುದು ನೋಡಿ ಆಸೆ ಎಲ್ಲಾ ನಿರಾಸೆಯಾಯ್ತು.

ನಾವು ಚಿಕ್ಕವರಿದ್ದಾಗ ಮನೆಮನೆಗೆ ಕುಣಿಯಲು ಬರುತಿದ್ದ ವೇಷಗಳು ಒಂದೇ ಎರಡೇ. ಹುಲಿ ವೇಷದ ಹಾಗೆ. ಶಾರ್ದೂಲ, ಕರಡಿ ವೇಷಗಳೂ ಇರುತಿದ್ದವು. ಶಾರ್ದೂಲ ಅಂದರೆ ಸಿಂಹ. ಅದರ ಜೊತೆ ಅದರ ಮರಿ ಮತ್ತು ಒಬ್ಬ ಕೋವಿ ಮನುಷ್ಯ.

ಕರಡಿ ಒಂದೇ.. ಕಪ್ಪನೆಯ ಕೂದಲು ಕೂದಲಿನ ಬಟ್ಟೆ ಧರಿಸಿ ಮುಖವಾಡ ಹಾಕಿಕೊಂಡು ಬರುವುದು. ಅದರ ಜೊತೆ ಕುಣಿಸುವವನೊಬ್ಬ ಅಷ್ಟೇ. ಮರಿಗಿರಿಗಳಿಲ್ಲ.

ಇನ್ನೊಂದು ಮುಖ್ಯವಾದದ್ದು.. ಡ್ಯಾನ್ಸ್ ಪಾರ್ಟಿ ಅಥವಾ ಅನಾರ್ಕಲಿ. ಗಂಡಸರು, ಹೆಣ್ಣಿನ ವೇಷ ಹಾಕಿದ ಗಂಡಸರು, ಮಕ್ಕಳು, ಬ್ಯಾಂಡ್ ಸೆಟ್ ಎಲ್ಲವೂ ಬಂದು ಸಿನೆಮಾ ಹಾಡು ನುಡಿಸಿ, ಬಾರಿಸಿ, ಕುಣಿದು ಹೋಗುತಿದ್ದರು. ಅವರಲ್ಲಿ ಒಬ್ಬ ಹೀರೋ. ಇನ್ನೊಬ್ಬ ಹಿರೋಯಿನ್.. ಥೇಟ್ ಸಿನೆಮಾದಲ್ಲಿ ತೋರಿಸಿದಂತೆ ಹಾಡಿಗೆ ತಕ್ಕಂತೆ ನರ್ತಿಸುತಿದ್ದರು. ನಮಗೆ ಆಗ ಮನೆಯಲ್ಲಿ ಟಿ.ವಿ ಇರಲಿಲ್ಲವಲ್ಲ ಎಂಥದೋ ಒಂದು ಸೋಜಿಗ ಅವರು ಕುಣಿಯುವಾಗ. ಅವರ ಜಗಮಗಿಸುವ ವೇಷಭೂಷಣಗಳು ಇನ್ನಷ್ಟು ಹೊಳೆಯುವಂತೆ ಕಾಣಲು ಟ್ಯೂಬ್ ಲೈಟ್‌ಗಳನ್ನು ಹೊತ್ತು ತರುತಿದ್ದರು.

ಆ ಜೈಂ ಜೈಂ ಬ್ಯಾಂಡ್ ಸೆಟ್ಟಿನ ಸಂಗೀತಕ್ಕೆ ನಾವಂತೂ ಯಾವುದೋ ಕಾಣದ ಲೋಕಕ್ಕೆ ಹೋಗಿ ಬಂದಂತಾಗುತಿದ್ದೆವು. ಆವಾಗ ಸಿನೆಮಾಗಳಲ್ಲಿ ಮಾತ್ರ ಅಂಥ ಝಗಮಗಿಸುವ ಉಡುಪು ತೊಟ್ಟು ನಲಿಯುವುದನ್ನು ನೋಡಿದ್ದ ನಮಗೆ ಅವರು ಕುಣಿಯುವುದನ್ನು ನೋಡುವುದೇ ಖುಷಿ ಖುಷಿ. ಅದರ ಹಿಂದೆಯೇ ನಾವು ಸುಮಾರು ಮನೆಗಳಿಗೆ ಹೋಗಿ ಅವರ ಡ್ಯಾನ್ಸ್ ನೋಡಿ ಬರುತಿದ್ದೆವು.

ಅನಾರ್ಕಲಿ ಮತ್ತು ಹುಲಿವೇಷಕ್ಕೆ ಹೆಚ್ಚಿನ ದುಡ್ಡು ಕೊಡಬೇಕಾಗುತಿತ್ತು.

ಆಮೇಲೆಲ್ಲಾ ಚಿಕ್ಕ ಪುಟ್ಟ ವೇಷಗಳು ಆದರೂ ಎಲ್ಲವೂ ಚಂದ.

ಕಂಧಾರಿ ವೇಷ ಕೇಳಿದ್ದೀರಾ? ಕಂದಹಾರದಿಂ ಬಂದ ಕಂಧಾರಿಗಳ್ ನಾವು ಎನ್ನುತ್ತಾ ಬರುವ ಈ ವೇಷಗಳು ಇಬ್ಬರು ಗಂಡಸರು ಹೆಣ್ಣಿನ ವೇಷ ಹಾಕಿಕೊಂಡು ಬರುವುದಿತ್ತು. ಎದೆ ಭಾಗ ಮತ್ತು ಹಿಂದಿನ ಭಾಗಗಳನ್ನು ಅತೀಯಾಗಿ ಉಬ್ಬಿಸಿ. ಈಗಿನ ಘಾಗರಾ

ತರದ ಉಡುಪುಗಳನ್ನು ಧರಿಸಿ, ಉದ್ದ ಉದ್ದ ಎರಡು ಜಡೆಗಳು ಅದರ ತುದಿಗೆ ಬಣ್ಣ ಬಣ್ಣದ ಉಲ್ಲನ್ ಗೊಂಡೆಗಳು. ಕಿವಿಗೆ ದೊಡ್ಡ ದೊಡ್ಡ ಲೋಲಾಕು. ಕೈಯಲ್ಲಿ ಠಮ್ಕಿ ಬಾರಿಸುತ್ತಲೇ ಹಾಡಿಕೊಂಡು ಕುಣಿಯುತ್ತಲೇ ಬರುತಿದ್ದರು.

ಝುಕ್ ಮದೀನ.. ಬಾಳ ಬಂಗಾಡಿ
ಬೊಂಬೈ ಕು ಜಾನಾ ಕಾಫಿ ರೊಟ್ಟಿ ಪೀನಾ.
….. ಹೀಗೆ ಏನೇನೋ ಹಾಡುತಿದ್ದರು.

ಹೇಳುವುದು ಮರೆತೆ ಗಂಡಸರದಾಗಲಿ, ಹೆಂಗಸರದಾಗಲಿ ವೇಷಗಳನ್ನೆಲ್ಲ ಗಂಡಸರೇ ಹಾಕುವುದು.

ಇನ್ನೊಂದು ಝೆಕ್ ಬಾಲೆ. ಒಬ್ಬ ಮನುಷ್ಯ ಮುಖಕ್ಕೆಲ್ಲ ಹತ್ತಿ ಚೂರುಗಳನ್ನು ಅಂಟಿಸಿ, ಗಡ್ಡ ಮೀಸೆ ಹುಬ್ಬು ಎಲ್ಲಾ ಬಿಳಿ ಹತ್ತಿಯದು. ಕೈಯಲ್ಲೊಂದು ಬೊಂಬೆ. ಅದಕ್ಕೆ ಏನೇನೋ ಹೇಳುತ್ತಾ ಕುಣಿಯಲು ಬರುತಿದ್ದ.

ಝೆಕ್ ಬಾಲೆ ಝೆಕ್..
ಬೈತರಿತ ನುಪ್ಪ
ಚ್ಯಾರಂಟೆದ ಚಟ್ವಣಿ
ಬಂಗುಡೆದ ಗಸಿ
ಬೂತಾಯಿದ ಚಟ್ನಿ
ಯಾನ್ಲ ಯೀಲ ತಿನೊಂದು (ನಲಿತೊಂದು)
ಕಂಡದ ಬರಿಕ್ ಪೋಯಿ
ನೆಕ್ ಬಾಲೆ ನೆಕ್…
….. ಹೀಗೆ ಏನೇನೋ ಹೇಳುತಿದ್ದ.

ಆಮೇಲೆಲ್ಲ ಚಿಕ್ಕ ಪುಟ್ಟ ವೇಷಗಳು. ಮೇಸ್ತ್ರಿ ವೇಷ. ಮೇಸ್ತ್ರಿ ಮತ್ತು ಅವನ ಸಹಾಯಕ ಒಬ್ಬ. ಅಳತೆ ಟೇಪ್ ಹಿಡಕೊಂಡು. ಜೋರು ಜೋರಾಗಿ ಕೂಗುತ್ತಾ ಮಾತಾಡುತ್ತಾ.. ಇಲ್ಲಿಂದ ಇಲ್ಲಿವರೆಗೆ ಇಷ್ಟು ಅಡಿ. ಹಾಗೆ ಹೀಗೆ ಅನ್ನುವ ಮೇಸ್ತ್ರಿ. ಅವನ ಸಹಾಯಕ ಜೋರಾಗಿ ಅವನ ಸ್ಥಾಯಿಯಲ್ಲೇ ಹಾಂ… ಹಾಂ.. ಅನ್ನುವುದು. ಹೌದು ಹೌದು ಅನ್ನುವುದು.. ಏನೋ ವಿಚಿತ್ರವಾಗಿ ತೋರುತಿತ್ತು. ಒಮ್ಮೆಲೇ ನಿಲ್ಲಿಸಿ ದುಡ್ಡು ತಗೊಂಡು ಹೋಗುವುದು.

ಹಾಲಿನ ವೇಷ. ಹಾಲಿನ ಕ್ಯಾನ್ ತಗೊಂಡು ಒಂದು ಚಿಕ್ಕ ಪುಸ್ತಕ ಕೈಯಲ್ಲಿ ಹಿಡಕೊಂಡು "ಎಷ್ಟು ತಿಂಗಳಾಯ್ತು ಹಾಲಿನ ದುಡ್ಡೇ ಕೊಟ್ಟಿಲ್ಲ. ಬಂದರೆ ದುಡ್ಡು ಕೊಡದೆ ಓಡಿಸುತ್ತೀರಿ." ಹೀಗೆ ಏನೇನೋ ಬಾಯಿಗೆ ಬಂದದ್ದು ಹೇಳಿ ನಿಲ್ಲೋದು.

"ಗಟ್ಟಿ ಹಾಲು ಹಾಕಿದರೆ ಮಾತ್ರ ದುಡ್ಡು ಕೊಡೋದು. ಬರೀ ನೀರು ಹಾಕ್ತಿ. ನೀರಿಗೆಂತ ದುಡ್ಡು ಕೊಡೋದು" ಎಂದೆಲ್ಲ ತಮಾಷೆ ಮಾತಾಡಿ ದುಡ್ಡು ಕೊಡುತಿದ್ದರು ಮನೆಯವರು. ಹಾಲಿನ ವೇಷದವನು ಮೈಯೆಲ್ಲಾ ಬಿಳಿ ಬಣ್ಣ ಬಳಿದುಕೊಳ್ಳುತಿದ್ದ. ಅದು ಯಾಕೆ ಎಂದು ಈಗಲೂ ಗೊತ್ತಿಲ್ಲ.

ಇನ್ನೊಂದು ವಿಚಿತ್ರವಾದ ವೇಷ. ಎಲ್ಲಕ್ಕಿಂತ ಭಯಾನಕ.

ಚೇರು......
ಮೈಯೆಲ್ಲಾ ಕಪ್ಪು ಬಣ್ಣ ಬಳಿದುಕೊಂಡು, ಮುಖವೂ ಅಚ್ಚ ಕಪ್ಪು, ಕಣ್ಣಿನ ಸುತ್ತಲೂ ಬಿಳಿ ವರ್ತುಲ, ಕಣ್ಣುಗುಡ್ಡೆ ಕಡು ಕೆಂಪು. ಕಪ್ಪು ಬಣ್ಣದ ಗಿಡ್ಡ ರವಿಕೆ, ಕಪ್ಪು ಲಂಗ ಹಾಕಿಕೊಂಡು ಹೊಟ್ಟೆಗೂ ಕಪ್ಪು ಬಣ್ಣ. ಅಲ್ಲಿ ಇಲ್ಲಿ ಎಂದಲ್ಲ, ಇಡೀ ಮೈಯೇ ಕಪ್ಪು ಬಣ್ಣ ಬಳಿದುಕೊಂಡು. ಮುಂಭಾಗ, ಹಿಂಭಾಗ ... ಕಂದಾರಿಗಳದೇನೇನೂ ಅಲ್ಲ ಅನ್ನುವಷ್ಟು ದೊಡ್ಡ ಗಾತ್ರ.

ಚೇಂ......... ಎಂದು ಚೀರುತ್ತಾ, ಓಡುತ್ತಾ, ದಾರಿಯಲ್ಲಿ ಸಿಕ್ಕ ಮಕ್ಕಳನ್ನು ಓಡಿಸಿಕೊಂಡು ಬರುತಿತ್ತು ಆ ವೇಷ. ಅದರ ಬೆನ್ನ ಮೇಲೆ ಬಿಳಿ ಅಕ್ಷರಗಳಿಂದ "ಚೇರು..." ಅಂತ ಬರೆದಿರುತಿತ್ತು. ಎಷ್ಟೋ ಮಕ್ಕಳಿಗೆ ಭಯದಿಂದ ಜ್ವರ ಬಂದಿದ್ದೂ ಇದೆ. ನಮಗೆ ಶಾಲೆಯಲ್ಲಿ ಪಾಠ ಮಾಡುವಾಗ "ಚೇರುವುದು" ಎಂಬ ಶಬ್ದ ಬಂದರೆ ಈ ಚೇರು ವೇ ಕಣ್ಣ ಮುಂದೆ ಬಂದಂತಾಗುತಿತ್ತು.

ಯಾರಾದರೂ ಹಿಂಭಾಗ ಎತ್ತರಿಸಿಕೊಂಡು ನಡೆದು ಹೋಗುತಿದ್ದರೆ "ಚೇರು ತರ ನಡೆಯುತ್ತಾಳೆ" ಎಂದು ಈಗಲೂ ಅನ್ನುತ್ತೇವೆ.

ಮತ್ತೆ ಚಳ್ಳೆ ಪಿಳ್ಳೆ ವೇಷಗಳೆಂದರೆ, ಪೇಪರ್ ದುಡ್ಡು ಕೇಳಲು ಬರುವ ಪೇಪರ್ ವೇಷ,

ಅಂಗಳದಲ್ಲಿ ಕಾಲಿಟ್ಟ ಕೂಡಲೇ ಸನ್ನೆಯಿಂದ ಮಾತಾಡಲು ಶುರುಮಾಡುವ ಪೊಟ್ಟನ ವೇಷ. ಹೊರಗೆ ಹೋದ ಕೂಡಲೇ ಅವನಿಗೆ ಮಾತು ಬರುತಿತ್ತು. ನಮಗೆಲ್ಲ ನಗು.

ಉದ್ದ ಕಾಲಿನ ಮನುಷ್ಯರು ಕಾಲಿಗೆ ಕೋಲು ಕಟ್ಟಿ ಬರುವುದು.

ಶಾಂತಿ ಭಟ್ಟನ ವೇಷ, ಒಂದು ಚೆಂಬಲ್ಲಿ ನೀರು, ಕೈಯಲ್ಲಿ ಮಾವಿನ ಎಲೆಗಳ ಗೊಂಚಲು ಹಿಡಿದುಕೊಂಡು ಮನೆಯ ಹೊರಗೆ ಮೂಲೆ ಮೂಲೆಗೂ ಸಿಂಪಡಿಸುತ್ತಾ ಮಣಮಣ ಮಂತ್ರ ಗೊಣಗುವುದು. ಅದೂ ಒಂದು ವೇಷ.

ಹೀಗೆ ನವರಾತ್ರಿಯಲ್ಲಿ ವೇಷಗಳು ಇಡೀ ದಿನ ಪ್ರತೀ ಮನೆ ಬಾಗಿಲಿಗೆ ಹೋಗಿ ಕುಣಿದು, ಪ್ರದರ್ಶನ ಮಾಡಿ ದುಡ್ಡು ತೆಗೆದುಕೊಂಡು ಹೋಗುವುದು. ಯಾರೂ ಯಾವ ವೇಷಕ್ಕೂ ದುಡ್ಡು ಕೊಡದೆ ಕಳಿಸುತ್ತಿರಲಿಲ್ಲ. ಆಗಿನ ಕಾಲದಲ್ಲಿ ಐದು, ಹತ್ತು, ಇಪ್ಪತ್ತು ಪೈಸೆಗಳಿಗೂ ಬೆಲೆ ಇತ್ತು. ಅನಾರ್ಕಲಿ, ಹುಲಿವೇಷಗಳಿಗೆ ನೂರು ರೂಪಾಯಿ ಕೊಟ್ಟರೆ ದೊಡ್ಡ ವಿಷಯ. ಶ್ರೀಮಂತರು ಇನ್ನೂರು ಮುನ್ನೂರು ಕೊಡುತಿದ್ದರು. ಈಗ ಹುಲಿ ವೇಷ ಮನೆಗೆ ಬಂದರೆ.. ಅಂದರೆ ನಾವೇ ಖಾಯಸ್ಸಿನಿಂದ ಮನೆಗೆ ಕರೆಯಬೇಕು. ಅವರು ಬಂದು ಕುಣಿದರೆ ಸಾವಿರಗಟ್ಟಲೆ ಹಣ ಕೊಡಬೇಕು.

ಈಗ ಮತ್ತೆ ನಾನೇನಾದರೂ ಕಾಲಚಕ್ರ ಹಿಂದಕ್ಕೆ ತಿರುಗಿಸಿ ಚಿಕ್ಕವಳಾಗಿ ನನ್ನ ಆ ಕಾಲಕ್ಕೆ ಹೋದರೆ, ನಾನು ಖಂಡಿತವಾಗಿಯೂ ಹೆದರಿ ಹಾಸಿಗೆ ಸಂದಿಯಲ್ಲಿ ಕುಳಿತುಕೊಳ್ಳುವುದಿಲ್ಲ. ಬದಲಿಗೆ ಹ್ಯಾಂಡ್ ಶೇಕ್ ಕೊಟ್ಟ ಆ ಕೆಟ್ಟ ಹುಲಿಗೆ ಚ್ಯಾಲೆಂಜ್ ಹಾಕಿ, ಅವುಗಳ ಜೊತೆ ನಾನೂ ಒಂದು ಸುತ್ತು ಧಂಧರ ಧಂಧರ ಡೋಲಿನ ತಾಳಕ್ಕೆ ಹೆಜ್ಜೆ ಹಾಕಿ ಕುಣಿಯಬೇಕು ಅನ್ನುವ ಬಯಕೆ ಕಂಡಾಪಟ್ಟೆ ಕಾಡುತ್ತಿದೆ

ಭಾಮಿನಿ ಷಟ್ಪದಿಯಲ್ಲೊಂದು ಸರಳ ಕಥಾಕವನ

ಬೆಳೆಯಿತು ಸಜ್ಜನಿಕೆ

ಒಂದು ಕಥೆಯನು ನಿಮಗೆ ಪೇಳಲು
ಬಂದು ನಿಂತಿಹೆನಿಲ್ಲಿ ಧೈರ್ಯದಿ
ಮಂದಿ ಬಾಂಧವರೆಲ್ಲ ಕೇಳಿರಿ
ಸರಳ ನುಡಿಗಳನು
ಚೆಂದ ಭಾಮಿನಿಯೆಂಬ ಷಟ್ಪದಿ
ಕಂದನಂತಿಹ ನನ್ನ ಸೆಳೆಯಲು
ಮಂದ ಬುದ್ಧಿಗೆ ತೋರಿದಂತೆಯೆ
ಕೋದು ತಂದಿಹೆನು

ದೂರ ಹಳ್ಳಿಯಲೊಂದು ಮನೆಯಲಿ
ಪೋರರಿಬ್ಬರು ತಂದೆ ತಾಯ್ಗಳ
ತೀರ ಬಡತನ ಬಾಳ್ವೆಯಲ್ಲಿಯೆ
ಹುಟ್ಟಿ ಬೆಳೆದಿಹರು
ಭೂರಿ ಭೋಜನವಿಲ್ಲದಿದ್ದರು
ತೋರಿ ಪ್ರೀತಿಯ ಗಂಜಿ ಕುಡಿಸುತ
ಸಾರ ಗುಣಗಳ ಕಲಿಸಿ ಪೊರೆದರು
ಹಿರಿಯ ಪೋಷಕರು

ಚಿಣ್ಣರಿಬ್ಬರು ಬೆಳೆದು ನಿಂತರು
ಸಣ್ಣ ಮಗತಾನೋದಿ ಚೆಂದದ
ಲಿನ್ನು ದುಡಿಯುವೆನೆಂದು ಯೋಚಿಸಿ
ಮನೆಯ ತೊರೆದಿಹನು
ಅಣ್ಣ ತಂದೆಯ ಜೊತೆಯೆ ನಿಂತನು
ಮಣ್ಣಮಗನೆಂದೆನುತ ದುಡಿದನು
ಚೆನ್ನದಂತಹ ಬೆಳೆಯ ಬೆಳೆಯುತ
ಮನೆಯ ಬೆಳಗಿಹನು

ಹಿರಿಯ ಪುತ್ರನು ರಾಮಚಂದ್ರನು
ಕಿರಿಯ ಪುತ್ರನು ಸೋಮಶೇಖರ
ಗರಿಮೆ ಹೆಚ್ಚಿಸಿ ಸಿರಿಯ ವರ್ಧಿಸಿ
ಹೆಮ್ಮೆ ತಂದಿಹರು
ತರುಣ ಮಕ್ಕಳು ಲಗ್ನವಾದರು
ತೊರೆದು ಮನೆಯನು ಬೇರೆ ಹೋದರು
ಮರೆಯದಂತೆಯೆ ತಂದೆ ತಾಯಿಗೆ
ಹಣವ ಕಳಿಸಿಹರು

ಹರೆಯ ಮೀರಿದ ಮುದುಕರಾಗಿಹ
ಪರಮ ನಿಷ್ಠೆಯಲಿರುತ ಕಾಯಕ
ನಿರತರಾಗಿಹ ತಂದೆ ತಾಯ್ಗಳು
ದುಡಿಮೆ ಬಿಡದವರು
ಪರರ ಧನಕಾಸೆಯನು ಮಾಡದ
ಕರುಮದಲಿ ನಂಬಿಕೆಯನಿಟ್ಟಿಹ
ಹಿರಿಯ ಮನಸಿನ ನಿಜದ ಹಿರಿಯರು
ದೈವ ಭೀರುಗಳು

ಕಾಲ ಕಳೆಯಿತು ಜೀವ ಮಾಗಿತು
ಕಾಲವಾದರು ತಂದೆ ತಾಯ್ಗಳು
ಕಾಲನೂರಿದ ರಾಮಚಂದ್ರನು
ತಂದೆ ಮನೆಯಲ್ಲಿ
ಕೀಲು ಮುರಿದಂತಿದ್ದ ಮನೆಯನು
ಕಾಲ ಕಾಲಕೆ ಚೆಂದಗೊಳಿಸುತ
ಪಾಳು ಪೆಟ್ಟಿಯಲಿಟ್ಟ ಹಿರಿಯರ
ಹಳೆಯ ಬಟ್ಟೆಯನು

ಒಮ್ಮೆ ಭೇಟಿಗೆ ಬಂದನನುಜನು
ಸೋಮಶೇಖರ ನಮಿಸಿ ಕುಳಿತನು
ಸುಮ್ಮನಿಬ್ಬರು ಮಾತನಾಡುತ
ದಿನವ ಕಳೆದಿಹರು
ತಮ್ಮನೊಂದಿಗೆ ರಾಮಚಂದ್ರನು
ಕಮ್ಮನಾಂತಿಹ ಬಾಲ್ಯನೆನೆದನು
ಬೊಮ್ಮ ರಾಜ್ಯವ ಸೇರಿ ಹರಸಿಹ
ಹಿರಿಯರನು ನೆನೆದು

ಮಾತು ಕಲಿಸಿದಳಮ್ಮ ಪ್ರೇಮದಿ
ನೀತಿ ಕಲಿಸಿದನಪ್ಪ ನಿತ್ಯದಿ
ಜಾತಿ ವರ್ಗದ ಭೇದವಿಲ್ಲದೆ
ಜನರ ಕಂಡಿಹರು
ಭೌತ ದೇಹದಲಿಲ್ಲದಿದ್ದರು
ಚಿತ್ತ ಭಾವದಿ ನೆಲೆಸಿ ನಮ್ಮನು
ಮತ್ತೆ ಸತ್ಯದ ದಾರಿಯಲ್ಲಿಯೆ
ನಡೆಸಿ ಜೊತೆಗಿಹರು

ನೆನೆದು ಹಿರಿಯರ ರಾಮಚಂದ್ರನು
ಮನೆಯೊಳಿಟ್ಟಿಹ ಪೆಟ್ಟಿ ತಂದನು
ವಿನಯ ಭಾವದಿ ಹೊರಗೆ ತೆಗೆದನು
ಬಟ್ಟೆ ಗಂಟನ್ನು
ಮನದಿ ತುಂಬಿದ ನೆನಪಿನೊಂದಿಗೆ
ತನಯರಿಬ್ಬರು ಗಂಟು ತೆರೆದರು
ತನುವಿಗಪ್ಪುತ ಮೌನವಾದರು
ಪ್ರೀತಿ ಭಾವದಲಿ

ಕೌದಿ ಮಾಡುವ ಹೊದ್ದು ಮಲಗುವ
ಕಾದ ಮನಗಳ ತಂಪುಗೊಳಿಸುವ
ಕೋದು ಸೀರೆಯ ಪಂಚೆ ಶಲ್ಯವ
ತುಂಡುಗೊಳಿಸುತಲಿ
ಮೋದಗೊಳ್ಳುತ ಹೀಗೆ ಯೋಚಿಸು
ತಿದ್ದರಿಬ್ಬರು ಬಟ್ಟೆ ಕೊಡವಲು
ಬಿದ್ದು ನೆಲದಲಿ ಹರಡಿಬಿಟ್ಟವು
ನೋಟು ಕಟ್ಟುಗಳು

ತಾವು ಕಳಿಸಿದ ಹಣದ ನೋಟಿದು
ನೋವುಗಾಣದೆ ಸುಖದಿ ಬದುಕಲಿ
ನಾವು ಹತ್ತಿರವಿಲ್ಲವೆನುತಲಿ
ಕೊಟ್ಟು ಕಳಿಸಿದುದು
ಬೇವನುಂಡರು ಬೆಲ್ಲ ಬೇಡೆವು
ದೈವ ಕೊಟ್ಟಿಹ ದೇಹ ದಂಡಿಸಿ
ಜೀವ ಪ್ರೀತಿಗೆ ಹಣವದೇಕೆಂ
ದೆಣಿಸಿ ಹೋದವರು

ಚಿಂತೆ ಮಾಡದೆ ನುಡಿದ ರೀತಿಯೆ
ಸಂತರಂತೆಯೆ ಬದುಕಿ ಬಾಳುತ
ಲಂತರಾತ್ಮದ ಬೆಳಕು ಹರಡುತ
ದಾರಿ ತೋರಿಹರು
ಅಂತೆ ನಾವೂ ನಡೆದು ಬಾಳುವ
ಕಂತೆ ನೋಟನು ದಾನ ಮಾಡುವ
ಕಂತುಪಿತನಾದೇಶದಂತೆಯೆ
ಕರುಣೆ ಸೂಸುತಲಿ

ಇಂತು ನಿಶ್ಚಯ ಮಾಡಿ ಕ್ಷಣದಲಿ
ಕಂತೆ ನೋಟುಗಳೆಲ್ಲ ಕೂಡಿಸಿ
ಸ್ವಂತ ದುಡಿಮೆಯ ಹಣವ ಸೇರಿಸಿ
ಶಾಲೆ ಕಟ್ಟಿದರು
ಸಂತರಾಶೀರ್ವಾದ ಪಡೆಯುತ
ಲಂತರಾತ್ಮವು ಮೆಚ್ಚುವಂದದಿ
ನಿಂತು ನಡೆಸಿದರುಚಿತ ಶಿಕ್ಷಣ
ಕೊಡುತ ಮಕ್ಕಳಿಗೆ

ಹೀಗೆ ತಾಯ್ತಂದೆಯರು ತೋರಿದ
ಮಾರ್ಗದಲ್ಲಿಯೆ ತಾವು ನಡೆಯುತ
ತ್ಯಾಗ ಭಾವದಿ ಸೇವೆಗೈದರು
ಶಾಲೆ ಬೆಳೆಸುತಲಿ
ಹೀಗೆ ಸಾಗುತ ಮುಂದುವರೆಯಲಿ
ಮಾಗಿ ನೈತಿಕ ಮನುಜ ನಡೆನುಡಿ
ವೇಗವರ್ಧಕದಂತೆ ಸ್ಫುರಿಸಲಿ
ಸ್ಫೂರ್ತಿ ಮಕ್ಕಳಲಿ

–ಶೀಲಾ ಅರಕಲಗೂಡು

(ನಾವು ದಿನನಿತ್ಯ ಬಳಸುವ ಭಾಷೆ ಹೊಸಗನ್ನಡ. ಆದ್ದರಿಂದ ಛಂದಸ್ಸು, ವೃತ್ತ ಇತ್ಯಾದಿಗಳೆಲ್ಲ ಮರೆತು ಅವುಗಳ ಸೌಂದರ್ಯಾನುಭವಗಳಿಂದ ವಂಚಿತರಾಗುತ್ತಿದ್ದೇವೆ. ಮಕ್ಕಳು ಇವನ್ನು ಮರೆಯದೆ ಆನಂದಿಸಿ ಮುಂದೆಯೂ ಮರೆಯದಿರಲೆಂದು ಸರಳಗನ್ನಡದಲ್ಲಿ ಒಂದು ಕಥಾಕವನವನ್ನು ಭಾಮಿನಿ ಷಟ್ಪದಿಯಲ್ಲಿ ಬರೆಯುವ ಪ್ರಯತ್ನ ಮಾಡಿದ್ದೇನೆ. ಓದುಗರ ಅನಿಸಿಕೆ, ಅಭಿಪ್ರಾಯಗಳಿಗೆ ಸ್ವಾಗತ).